

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 3 ಭಾನುವಾರ 2023

ಸಂಪುಟ: 44 | ಸಂಚಿಕೆ: 226 | ಪುಟಗಳು: 12

₹4


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಈ ಸಲ ಸರಳ, ಸಾಂಪ್ರದಾಯಿಕವಾದರೂ 'ದುಬಾರಿ ದಸರಾ'!

■ ದಸರಾ ಖರ್ಚು ವೆಚ್ಚಗಳ ಪ್ರಸ್ತುತಪಡಿಸಿದ ಜಿಲ್ಲಾಧಿಕಾರಿ ಡಾ.ರಾಜೇಂದ್ರ ■ ಈ ಬಾರಿ 50 ಲಕ್ಷಕ್ಕೂ ಅಧಿಕ 'ಅಚ್ಚರಿ ವೆಚ್ಚ'



ಮೈಸೂರು, ಡಿ.2(ಎಸ್‌ಬಿಡಿ)– ಈ ಬಾರಿಯ ಸರಳ ಹಾಗೂ ಸಾಂಪ್ರದಾಯಿಕ ಮೈಸೂರು ದಸರಾ ಮಹೋತ್ಸವಕ್ಕೂ ಹಿಂದಿನ ವರ್ಷದ ಅದ್ಧೂರಿ ದಸರಾಗಿಂತಲೂ ಅಧಿಕ ವೆಚ್ಚವಾಗಿದೆ.

ಕಳೆದ ಅಕ್ಟೋಬರ್‌ನಲ್ಲಿ ನೆರವೇರಿದ 2023ನೇ ಸಾಲಿನ ದಸರಾ ಮಹೋತ್ಸವದ ಒಟ್ಟು ಅನುದಾನ ಹಾಗೂ ದಸರಾ ವಿಶೇಷ ಅಧಿಕಾರಿಗಳ ಕಚೇರಿ ಮೂಲಕ ವೆಚ್ಚ ಮಾಡಿರುವ ವಿವರದಲ್ಲಿ ಹಿಂದಿಗಿಂತಲೂ ಹೆಚ್ಚು ವ್ಯಯವಾಗಿರುವುದು ಸ್ಪಷ್ಟವಾಗಿದೆ. ಬರದ ಹಿನ್ನೆಲೆಯಲ್ಲಿ ಅದ್ಧೂರಿಯಲ್ಲದ, ಸಾಂಪ್ರದಾಯಕ ದಸರಾ ನಡೆಸುವ ಮೂಲಕ ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು ಎಂಬ ನಿರ್ಧಾರವನ್ನು ಪ್ರಾಯೋಗಿಕವಾಗಿ ಕಾರ್ಯಗತಗೊಳಿಸಲು ಸಾಧ್ಯವಾಗಿಲ್ಲ.

ದಸರಾ ವಿಶೇಷಾಧಿಕಾರಿಯಾಗಿದ್ದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಶನಿವಾರ ತಮ್ಮ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ದಸರಾ ಅನುದಾನ ಹಾಗೂ ವೆಚ್ಚದ ವಿವರಣೆ ನೀಡಿ, ಮೈಸೂರು ದಸರಾ ವಿವಿಧ ಉಪ ಸಮಿತಿಗಳ ಕಾರ್ಯಕ್ರಮ ಆಯೋಜನೆಗೆ 27,05,22,049 ರೂ. ಹಾಗೂ ಮಂಡ್ಯ (1 ಕೋಟಿ), ಚಾಮರಾಜನಗರ(1 ಕೋಟಿ) ಹಾಗೂ ಹಾಸನ(20 ಲಕ್ಷ) ಜಿಲ್ಲಾ ದಸರಾಗೆ 2.20 ಕೋಟಿ ರೂ.(ಕಳೆದ ವರ್ಷದಷ್ಟೇ) ಸೇರಿ ಈ ಬಾರಿ 29,25, 22,049 ರೂ. ವೆಚ್ಚವಾಗಿದೆ. 2022ರಲ್ಲಿ 28,74,49,058 ರೂ. ಖರ್ಚಾಗಿತ್ತು. ಇದಕ್ಕಿಂತ 50,72,991 ರೂ. ಈ ಬಾರಿ ಹೆಚ್ಚು ವೆಚ್ಚವಾಗಿದೆ. ವಿವಿಧ ಮೂಲಗಳಿಂದ ಸ್ವೀಕೃತವಾದ ಅನುದಾನದಲ್ಲೇ ಹಿಂದಿಗಿಂತ ಕಡಿಮೆಯಿಲ್ಲದಂತೆ ದಸರಾ ಮಹೋತ್ಸವ ನೆರವೇರಿಸಲಾಗಿದೆ ಎಂದು ತಿಳಿಸಿದರು.



ಅನುದಾನದ ವಿವರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 15 ಕೋಟಿ ರೂ., ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ 10 ಕೋಟಿ, ಪ್ರಾಯೋಜಕತ್ವದಿಂದ 2,25,70,000 ರೂ., ಟಿಕೆಟ್ ಮತ್ತು ಗೋಲ್ಡ್ ಕಾರ್ಡ್ ಮಾರಾಟದಿಂದ 1,19,95,000 ರೂ. ಹಾಗೂ ಆಹಾರ ಮೇಳದ ರಾಜಸ್ವ 81 ಲಕ್ಷ ರೂ. ಸೇರಿ ಒಟ್ಟು 29,26,65,000 ರೂ. ಅನುದಾನ ಸ್ವೀಕೃತವಾಗಿದೆ(ಕಳೆದ ವರ್ಷ 26.09 ಕೋಟಿ) ಎಂದು ಹೇಳಿದರು.

ಉಪ ಸಮಿತಿವಾರು ವೆಚ್ಚ: ಸ್ವಾಗತ, ಆಮಂತ್ರಣ, ಸ್ಥಳಾವಕಾಶ, ಸಾರಿಗೆ ಶಿಷ್ಟಾಚಾರ ಸಮಿತಿ 3,22,56,688 ರೂ., ಮೆರವಣಿಗೆ 2.45 ಕೋಟಿ, ಪಂಜಿನ ಕವಾಯತು 1.24 ಕೋಟಿ, ಸ್ತಬ್ಧಚಿತ್ರ 25 ಲಕ್ಷ, ರೈತ ದಸರಾ 30 ಲಕ್ಷ, ಸಾಂಸ್ಕೃತಿಕ ದಸರಾ 2 ಕೋಟಿ, ಲಲಿತ ಕಲೆ 20 ಲಕ್ಷ, ಕವಿಗೋಷ್ಠಿ 35 ಲಕ್ಷ, ಯೋಗದಸರಾ 15 ಲಕ್ಷ, ಯುವ ಸಂಭ್ರಮ 2 ಕೋಟಿ, ಯುವದಸರಾ 5.88 ಕೋಟಿ, ಮಹಿಳಾ ಮತ್ತು ಮಕ್ಕಳಾ ದಸರಾ 35 ಲಕ್ಷ, ಚಲನಚಿತ್ರ 45 ಲಕ್ಷ, ಕುಸ್ತಿ 45 ಲಕ್ಷ, ಗಜಪಡೆ 1,60,56,781 ರೂ., ರಂಗಾಯಣ 10 ಲಕ್ಷ ರೂ., ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳಿಗೆ ಮುಡಾದಿಂದ 1,44,01,879 ರೂ., ಲೋಕೋಪಯೋಗಿ ಇಲಾಖೆಯಿಂದ 1,35,55,000 ರೂ., ನಿರ್ಮಿತಿ ಕೇಂದ್ರದಿಂದ 1,74,29,701 ರೂ. ಹಾಗೂ ಮೈಸೂರು ನಗರ ಪಾಲಿಕೆಯಿಂದ ● 9ನೇ ಪುಟಕ್ಕೆ

ಎಲ್ಲಾ ಸೇರಿ ಸುಮಾರು 40 ಕೋಟಿ ಆಗಬಹುದು!

ದಸರಾ ವಿದ್ಯುತ್ ದೀಪಾಲಂಕಾರಕ್ಕೆ ಸುಮಾರು 6 ಕೋಟಿ ರೂ. ವೆಚ್ಚವಾಗಿದೆ ಎನ್ನಲಾಗಿದ್ದು, ಇದು ಜಿಲ್ಲಾಧಿಕಾರಿಗಳು ನೀಡಿದ ವೆಚ್ಚ ವಿವರದಲ್ಲಿ ಸೇರಿಸಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಹಿಂದೆಯೂ ವಿದ್ಯುತ್ ದೀಪಾಲಂಕಾರದ ವೆಚ್ಚ ಪ್ರತ್ಯೇಕವಾಗಿತ್ತು. ಸ್ವಚ್ಛತಾ ವ್ಯವಸ್ಥೆ ನಗರ ಪಾಲಿಕೆ ನಿರ್ವಹಿಸಿದೆ. ಆಹಾರ ಮೇಳವನ್ನು ಆಹಾರ ಇಲಾಖೆ ನಿರ್ವಹಣೆ ಮಾಡಿದೆ. ಹಾಗಾಗಿ ದಸರಾ ವಿಶೇಷ ಅಧಿಕಾರಿಗಳ ಕಚೇರಿಯಿಂದಾಗಿರುವ ಖರ್ಚಿನ ವಿವರವನ್ನಷ್ಟೇ ತಿಳಿಸಿದ್ದೇನೆ ಎಂದರು. ಆದರೆ ಕಳೆದ ವರ್ಷ ಕ್ರೀಡಾ ದಸರಾಗೆ 22,02,975 ರೂ., ಸ್ವಚ್ಛತೆ ಮತ್ತು ವ್ಯವಸ್ಥೆಗೆ 29,08,759 ರೂ., ಪ್ರಚಾರ ಉಪಸಮಿತಿಗೆ 7,40,699 ರೂ. ಹಾಗೂ ದಸರಾ ದರ್ಶನಕ್ಕೆ 18,50,000 ರೂ. ವೆಚ್ಚ ಮಾಡಲಾಗಿತ್ತು. ಆದರೆ ಈ ಬಾರಿ ಇದಕ್ಕೆಲ್ಲಾ ಶೂನ್ಯ ವೆಚ್ಚ ತೋರಿಸಲಾಗಿದೆ. ಅಂದರೆ ಜಿಲ್ಲಾಧಿಕಾರಿಗಳು ಹೇಳಿದಂತೆ ಈ ವೆಚ್ಚವನ್ನು ಸಂಬಂಧಪಟ್ಟ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಯಿಂದ ಭರಿಸಲಾಗಿದೆ. ಈ ಮೊತ್ತವೇ ಸುಮಾರು 70–80 ಲಕ್ಷ ರೂ. ಆಗಬಹುದು. ಇದರೊಂದಿಗೆ ಅರಮನೆ ಮಂಡಳಿಯ ಪ್ರತ್ಯೇಕ 5 ಕೋಟಿ ಹಾಗೂ ದೀಪಾಲಂಕಾರ ವೆಚ್ಚ ಸೇರಿದರೆ ಸುಮಾರು 12 ಕೋಟಿ ರೂ. ದಸರಾ ವೆಚ್ಚಕ್ಕೆ ಸೇರುತ್ತದೆ. ಆ ಮೂಲಕ ದಸರಾದ ಒಟ್ಟು ವೆಚ್ಚ ಸುಮಾರು 40 ಕೋಟಿಯಾಗಬಹುದು.

ತೆಲಂಗಾಣದಲ್ಲಿ ಕಾಂಗ್ರೆಸ್, ಗೆಲುವಿನ ಉತ್ಸಾಹ; ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ಉಸ್ತುವಾರಿ

ಬೆಂಗಳೂರು, ಡಿ.2(ಕೆಎಂಶಿ)–



ತೆಲಂಗಾಣದಲ್ಲಿ ಅಧಿಕಾರ ಹಿಡಿಯುತ್ತೇವೆ ಎಂಬ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್ ಅಲ್ಲಿಯ ಉಸ್ತುವಾರಿಯನ್ನಾಗಿ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿ ವರಿಷ್ಠರು ನಿಯೋಜಿಸಿದ್ದಾರೆ.

ವರಿಷ್ಠರ ಆದೇಶದ ಮೇರೆಗೆ ಶಿವಕುಮಾರ್ ಹೈದರಾಬಾದ್‌ಗೆ ತೆರಳಲಿದ್ದಾರೆ, ಪಂಚರಾಜ್ಯಗಳಿಗೆ ನಡೆದ ಚುನಾವಣೆಯ ಮತ ಎಣಿಕೆ ನಾಳೆ ನಡೆಯಲಿದ್ದು, ಗೆದ್ದಂತಹ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಒಂದೆಡೆ ಸೇರಿಸುವ ಹೊಣೆಯನ್ನು ಉಪ ಮುಖ್ಯಮಂತ್ರಿ ಅವರಿಗೆ ನೀಡಲಾಗಿದೆ. ತೆಲಂಗಾಣದಲ್ಲಿ ಕಾಂಗ್ರೆಸ್ ಮತ್ತು ಬಿಆರ್‌ಎಸ್ ಸಮಬಲದ ಪೈಪೋಟಿ ನೀಡಿದ್ದರೂ ಹಸ್ತವೇ ಮುಂದಿದೆ ಎನ್ನಲಾಗಿದೆ. ಒಂದು ವೇಳೆ ಅತಂತ್ರ ಸ್ಥಿತಿ ನಿರ್ಮಾಣವಾದಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹಿಡಿದಿಡುವುದು ಮತ್ತು ಕ್ಲಿಷ್ಟ ಪರಿಸ್ಥಿತಿಯಲ್ಲಿ ಸರ್ಕಾರ ರಚನೆಗೆ ತಂತ್ರಗಾರಿಕೆ ಹೊಣೆಯನ್ನೂ ಇವರಿಗೇ ವಹಿಸಲಾಗಿದೆ.

ನಾಳೆಯಿಂದ ಬೆಳಗಾವಿ ಸುವರ್ಣಸೌಧದಲ್ಲಿ ವಿಧಾನಮಂಡಲ ಚಳಿಗಾಲ ಅಧಿವೇಶನ

ಸರ್ಕಾರದ ವಿರುದ್ಧ ಬಿಜೆಪಿ–ಜೆಡಿಎಸ್ ಜಂಟಿ ಸಮರಕ್ಕೆ ಸಿದ್ಧತೆ

● ಆ ಮೂಲಕ ಉಭಯ ಪಕ್ಷಗಳ ಕಾರ್ಯಕರ್ತರು, ಜನತೆಗೆ ಸದೃಢ ಮೈತ್ರಿ ಸಂದೇಶ
● ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಾದ ವಿಚಾರ; ಪರಸ್ಪರ ಬೆಂಬಲವಾಗಿ ನಿಲ್ಲುವ ತೀರ್ಮಾನ



ಬೆಂಗಳೂರು, ಡಿ.2(ಕೆಎಂಶಿ)–ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೆಳಗಾವಿ ಅಧಿವೇಶನದಲ್ಲಿ ಬಿಜೆಪಿ–ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಿ, ಉಭಯ ಪಕ್ಷಗಳ ಕಾರ್ಯಕರ್ತರು ಮತ್ತು ಜನತೆಗೆ ಸದುದ್ದೇಶಿತ ಮೈತ್ರಿ ಸಂದೇಶ ನೀಡಲು ಸಿದ್ಧತೆ ನಡೆಸಿವೆ.

ಸೋಮವಾರದಿಂದ ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ ಅಧಿವೇಶನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ದಾಖಲೆಗಳ ಸಮೇತ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಉಭಯ ಪಕ್ಷಗಳು ನಿರ್ಧರಿಸಿವೆ.

ವಿಧಾನಸಭೆಯಲ್ಲಿನ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಇತರ ಮುಖಂಡರು ಸಭೆ ಸೇರಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಂಬಂಧ ಒಗ್ಗಟ್ಟಿನ ಹೋರಾಟ ನಡೆಸಿ, ನಮ್ಮ ಮೈತ್ರಿ ಎಷ್ಟು ಗಟ್ಟಿ ಎಂಬುದನ್ನು ಸಾಬೀತುಪಡಿಸಲು ತೀರ್ಮಾನಿಸಿವೆ. ಮುಖ್ಯಮಂತ್ರಿ ಮತ್ತು ಸರ್ಕಾರದ ವೈಫಲ್ಯಗಳ ಬಗ್ಗೆ ಬಿಜೆಪಿ ಹೋರಾಟ ನಡೆಸಿದರೆ, ಅದಕ್ಕೆ ಜೆಡಿಎಸ್ ಉಭಯ ಸದನಗಳಲ್ಲಿ ಬೆಂಬಲವಾಗಿ ನಿಲ್ಲಲಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೆಲವು ಸಚಿವರ ಭ್ರಷ್ಟಾಚಾರ ಹಾಗೂ ವರ್ಗಾವಣೆ ದಂಧೆಯ ಬಗ್ಗೆ ಕುಮಾರಸ್ವಾಮಿ ದಾಖಲೆ ಸಮೇತ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲಿದ್ದು ಈ ಸಂದರ್ಭದಲ್ಲಿ ಬಿಜೆಪಿ ಇವರ ಬೆಂಬಲಕ್ಕೆ ನಿಲ್ಲಲಿದೆ. ಸರ್ಕಾರದ ವಿರುದ್ಧ ಯಾವುದೇ ವಿಷಯದಲ್ಲಿ ಉಭಯ ಪಕ್ಷಗಳು ಹೋರಾಟ ನಡೆಸಿದರೆ, ಅದಕ್ಕೆ ಒಬ್ಬರಿಗೊಬ್ಬರು ಹೆಗಲು ಕೊಟ್ಟು ಆಡಳಿತದ ವೈಫಲ್ಯವನ್ನು ಜನರ ಮುಂದಿಡಲು ತೀರ್ಮಾನಿಸಿವೆ. ● 9ನೇ ಪುಟಕ್ಕೆ

ಇಂದು ನಾಲ್ಕು ರಾಜ್ಯಗಳ ಚುನಾವಣೆ ಫಲಿತಾಂಶ

ಸಾರ್ವತ್ರಿಕ ಚುನಾವಣೆಗೆ ಮುನ್ನ ಬಿಜೆಪಿ, ಕಾಂಗ್ರೆಸ್‌ಗೆ ಅಗ್ನಿ ಪರೀಕ್ಷೆ

ನವದೆಹಲಿ, ಡಿ.2– ಇನ್ನು ಕೆಲವೇ ತಿಂಗಳಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಗೆ ಸೆಮಿಫೈನಲ್ ಎಂದೇ ಪರಿಗಣಿಸಲಾಗಿರುವ ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ ಮತ್ತು ತೆಲಂಗಾಣ ವಿಧಾನಸಭೆ ಚುನಾವಣೆಯ ಫಲಿತಾಂಶ ಭಾನುವಾರ ಪ್ರಕಟವಾಗಲಿದೆ.

ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಮತ್ತು ಮಧ್ಯಪ್ರದೇಶದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನಡುವೆ ಈ ಮೂರು ರಾಜ್ಯಗಳಲ್ಲಿ ನೇರ ಹಣಾಹಣಿ ಇದೆ. ತೆಲಂಗಾಣದಲ್ಲಿ ಕೆ.ಚಂದ್ರಶೇಖರ್ ರಾವ್ ನೇತೃತ್ವದ ಭಾರತ್ ರಾಷ್ಟ್ರ ಸಮಿತಿ(ಬಿಆರ್‌ಎಸ್) ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದೆ. ತೆಲಂಗಾಣ ಮತ್ತು ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ಹಲವು ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿದ್ದು, ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಬಿಜೆಪಿ – ಕಾಂಗ್ರೆಸ್ ನಡುವೆ ತೀವ್ರ ಪೈಪೋಟಿ ಇದೆ ಎಂದು ಹೇಳಿವೆ.

ಮಧ್ಯಪ್ರದೇಶದ 230, ಛತ್ತೀಸ್‌ಗಢದ 90, ತೆಲಂಗಾಣದ 119 ಮತ್ತು ರಾಜಸ್ಥಾನದ 199 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, ನಾಳೆ ಬೆಳಗ್ಗೆ 8 ಗಂಟೆಗೆ ಬಿಗಿ ಭದ್ರತೆಯ ನಡುವೆ ಅಂಚೆ ಮತಪತ್ರಗಳ ಎಣಿಸುವ ಮೂಲಕ ಮತ ಎಣಿಕೆ ಆರಂಭವಾಗಲಿದೆ. ಅಭ್ಯರ್ಥಿ ಸಾವನ್ನಪ್ಪಿದ ಕಾರಣ ರಾಜಸ್ಥಾನದಲ್ಲಿ ಒಂದು ಕ್ಷೇತ್ರದ ಮತದಾನವನ್ನು ಮುಂದೂಡಲಾಗಿದೆ.

ಮತ ಎಣಿಕೆಗೆ ಮೂರು ಹಂತದ ಭದ್ರತಾ ವ್ಯವಸ್ಥೆ ಮಾಡಲಾಗಿದ್ದು, ಪಾಸ್ ಹೊಂದಿರುವವರಿಗೆ ಮಾತ್ರ ಮತ ಎಣಿಕೆ ಕೇಂದ್ರಗಳಿಗೆ ಪ್ರವೇಶ ನೀಡಲಾಗುವುದು ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಕಳೆದ ಮೇ ತಿಂಗಳಲ್ಲಿ ಬಿಜೆಪಿಯಿಂದ ಅಧಿಕಾರ ಕಿತ್ತುಕೊಂಡ ಕಾಂಗ್ರೆಸ್ ಈಗ, ಮಧ್ಯಪ್ರದೇಶ ಮತ್ತು ತೆಲಂಗಾಣದ ಮೇಲೆ ಕಣ್ಣಿಟ್ಟಿದೆ. ಅಲ್ಲದೆ ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಅಧಿಕಾರ ಉಳಿಸಿಕೊಳ್ಳುವ ನಿರೀಕ್ಷೆಯಲ್ಲಿದೆ.

ಮಧ್ಯಪ್ರದೇಶದ 230 ವಿಧಾನಸಭೆ ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಬಹುತೇಕ ಕ್ಷೇತ್ರಗಳಲ್ಲಿ ಬಿಜೆಪಿ ● 6ನೇ ಪುಟಕ್ಕೆ



ಹೆಣ್ಣು ಭ್ರೂಣ ಹತ್ಯೆ ಪ್ರಕರಣ; ಮಾತಾ ಆಸ್ಪತ್ರೆ ಮಾಜಿ ನರ್ಸ್ ಮಂಜುಳಾ ಬಂಧನ



70ಕ್ಕೂ ಅಧಿಕ ಭ್ರೂಣ ಹತ್ಯೆ: ಅವುಗಳಲ್ಲಿ 6 ತಿಂಗಳ ಭ್ರೂಣ ಬರ್ಬರ ಹತ್ಯೆ ಸ್ಫೋಟಕ ಮಾಹಿತಿ ಬಹಿರಂಗ!?

ಬೆಂಗಳೂರು, ಡಿ.2– ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಭೇದಿಸಿದ ಬೆಂಗಳೂರಿನ ಬೈಯ್ಯಪ್ಪನಹಳ್ಳಿ ಠಾಣೆ ಪೊಲೀಸರು ಈ ಪ್ರಕರಣವನ್ನು ಸಿಐಡಿ ಅಧಿಕಾರಿಗೆ ಹಸ್ತಾಂತರಿಸಲು ತಯಾರಿ ಮಾಡಿಕೊಳ್ಳುತ್ತಿರುವಾಗಲೇ ಮೈಸೂರಿನ ಡಾ. ಚಂದನ್ ಬಲ್ಲಾಳ್ ಮಾಲೀಕತ್ವದ ಮಾತಾ ಆಸ್ಪತ್ರೆಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ನರ್ಸ್ ಮಂಜುಳಾ ಬಂಧಿತಳಾಗಿದ್ದು, ಬೆಚ್ಚಿ ಬೀಳಿಸುವಂತಹ ವಿಚಾರಗಳನ್ನು ಬಾಯ್ಬಿಟ್ಟಿದ್ದಾಳೆನ್ನಲಾಗಿದೆ. ಒಂದು ವರ್ಷ ಕಾಲ ಮಾತಾ ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ಮಂಜುಳಾ, ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಬಯಲಾಗುತ್ತಿದ್ದಂತೆಯೇ, ಇಲ್ಲಿ ಕೆಲಸ ಬಿಟ್ಟು ಬೇರೆ ಆಸ್ಪತ್ರೆಗೆ ಸೇರಿಕೊಂಡಿದ್ದಳು. ಈಕೆಯನ್ನು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದಾಗ ಆಘಾತಕಾರಿ ವಿಷಯಗಳನ್ನು ● 9ನೇ ಪುಟಕ್ಕೆ

ಕುಶಾಲನಗರ ಬಳಿ ಆತ್ಮಹತ್ಯೆ ಮಾಡಿಕೊಂಡ ಡಾ.ಸತೀಶ್ ಭ್ರೂಣ ಹತ್ಯೆಯಲ್ಲಿ ಶಾಮೀಲು!


● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರತಿಕ್ರಿಯೆ
● ಈ ಸಂಬಂಧ ತಮಗೆ ಮೊದಲೇ ಮಾಹಿತಿ ಇದ್ದುದಾಗಿ ಸ್ಪಷ್ಟನೆ

ಮಂಗಳೂರು, ಡಿ. 2– ಕುಶಾಲನಗರ ಬಳಿ ಶುಕ್ರವಾರ ಆತ್ಮಹತ್ಯೆ ಮಾಡಿಕೊಂಡ ಆಯುರ್ವೇದ ವೈದ್ಯ ಡಾ. ಸತೀಶ್ ಅವರು ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂಬ ಮಾಹಿತಿ ಸ್ಥಳೀಯರಿಂದ ಬಂದಿತ್ತು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವಾರು ಕಡೆಗಳಿಂದ ಮಾಹಿತಿ ಪಡೆದಿದ್ದಾರೆ. ತಾವು ಭ್ರೂಣ ಲಿಂಗ ಪತ್ತೆ ನಡೆಯುತ್ತಿದ್ದ ಮಂಡ್ಯ ಜಿಲ್ಲೆಯ ಆಲೆಮನೆಗೆ ತೆರಳಿದ ವೇಳೆ ಡಾ.ಸತೀಶ್ ಈ ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂಬ ಮಾಹಿತಿ ಬಂದಿತ್ತು. ಇವರ ವಿರುದ್ಧ ಹಲವಾರು ದೂರುಗಳು ಕೇಳಿ ಬಂದಿದ್ದು, ಮೈಸೂರಿನಲ್ಲೂ ಕೂಡ ● 9ನೇ ಪುಟಕ್ಕೆ



ಮಂಡ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯ ಡಾ.ನಟರಾಜ್ ಬೆಂಗಳೂರಿನ ತಮ್ಮ ಮನೆಯಲ್ಲಿ ಆತ್ಮಹತ್ಯೆ



ಸಾಮಾಜಿಕ ಜಾಲತಾಣದಲ್ಲಿ ಕಿರುಕುಳ ಸಂಬಂಧ ಬಂದ ವರದಿಗೆ ಡಿಹೆಚ್‌ಓ ಸ್ಪಷ್ಟನೆ

ಮಂಡ್ಯ, ಡಿ. 2– ಮಂಡ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವೆಲ್ಫೇರ್ ಆಫೀಸರ್ ಆಗಿದ್ದ ವೈದ್ಯ ಡಾ. ನಟರಾಜ್ ಅವರು ಇಂದು ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ನೇಣಿಗೆ ಶರಣಾಗಿದ್ದಾರೆ. ಒಂದು ತಿಂಗಳ ಕಾಲ ರಜೆಯಲ್ಲಿದ್ದ ಅವರು, ಇಂದು ಕರ್ತವ್ಯಕ್ಕೆ ಮರಳಬೇಕಿತ್ತು ಆದರೆ, ಮಂಡ್ಯ ಡಿಹೆಚ್‌ಓ ಡಾ. ಮೋಹನ್ ಅವರು ಕರ್ತವ್ಯಕ್ಕೆ ಬರಬೇಡ ಎಂದು ಹೇಳಿದ್ದಲ್ಲದೇ, ಕಿರುಕುಳ ನೀಡಿದ ಕಾರಣ ಡಾ. ನಟರಾಜ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿತ್ತು. ಕೆಲವು ಸುದ್ದಿವಾಹಿನಿಗಳು ಕೂಡ ಇಂದು ಬೆಳಗ್ಗೆ ಇದೇ ವಿಚಾರವನ್ನು ಪ್ರಸಾರ ಮಾಡಿದ್ದವು. ಆದರೆ, ತಮ್ಮ ಮೇಲಿನ ಆರೋಪವನ್ನು ಅಲ್ಲಗಳೆದಿರುವ ಡಿಹೆಚ್‌ಓ ಡಾ. ಮೋಹನ್, ತಮಗೂ ● 9ನೇ ಪುಟಕ್ಕೆ

ಶೈಕ್ಷಣಿಕ ಪ್ರವಾಸ ವೇಳೆ ವಿದ್ಯಾರ್ಥಿನಿಯರೊಂದಿಗೆ ಅನುಚಿತ ವರ್ತನೆ ಪ್ರಕರಣ

ಮುಖ್ಯ ಶಿಕ್ಷಕ, ಅಟೆಂಡರ್ ವಿರುದ್ಧ ಪೋಕ್ಸೊದಡಿ ಪ್ರಕರಣ ದಾಖಲು



ನಾಗಣ್ಣ



ರಮೇಶ್

ಬೀಚನಹಳ್ಳಿ, ಡಿ.2–ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿನಿಯರ ಜೊತೆ ಅನುಚಿತವಾಗಿ ವರ್ತಿಸಿದ ಆರೋಪದ ಹಿನ್ನೆಲೆಯಲ್ಲಿ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ಅವರುಗಳ ವಿರುದ್ಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ (ಸಿಡಿಪಿಓ) ಟಿ.ಎಸ್. ಆಶಾ ಅವರು ನೀಡಿದ ಲಿಖಿತ ದೂರಿನ ಮೇರೆಗೆ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಮುಖ್ಯ ಶಿಕ್ಷಕ ನಾಗಣ್ಣ ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ. ನಿದ್ರೆ ಮಾತ್ರೆ ಸೇವಿಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಟೆಂಡರ್ ರಮೇಶ್‌ನನ್ನು ವಶಕ್ಕೆ ಪಡೆಯಲು ಪೊಲೀಸರು ಮುಂದಾಗಿದ್ದಾರೆ. ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ವತಿಯಿಂದ ನ. 20ರಿಂದ 25ರವರೆಗೆ ಶಾಲೆಯ 30 ವಿದ್ಯಾರ್ಥಿನಿಯರು ಮತ್ತು 20 ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ದಿದ್ದ ವೇಳೆ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ವಿದ್ಯಾರ್ಥಿನಿಯರ ಜೊತೆ ಮುರುಡೇಶ್ವರ ಬೀಚ್‌ನಲ್ಲಿ ಅನುಚಿತವಾಗಿ ವರ್ತಿಸಿದ ವರದಿಗಳು ದೃಶ್ಯ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಈ ವಿಚಾರ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ಡಿಡಿಪಿಐ ಗಮನಕ್ಕೂ ಬಂದಿದ್ದು, ಅಟೆಂಡರ್ ರಮೇಶ್‌ನನ್ನು ಈಗಾಗಲೇ ಅಮಾನತುಗೊಳಿಸಿ, ಮುಖ್ಯ ಶಿಕ್ಷಕ ನಾಗಣ್ಣನಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಸಿಡಿಪಿಓ ಆಶಾ ಮತ್ತು ಸಾಂತ್ವನ ಆಪ್ತ ಸಮಾಲೋಚಕಿ ಜಲೀಲಾ, ಇಂದು ಶಾಲೆಗೆ ತೆರಳಿ ದೌರ್ಜನ್ಯಕ್ಕೊಳಗಾದ ವಿದ್ಯಾರ್ಥಿನಿಯರು ಮತ್ತು ಶಾಲಾ ಶಿಕ್ಷಕರಿಂದ ಬೀಚ್‌ನಲ್ಲಿ ನಡೆದ ಘಟನೆ ಮತ್ತು ಮೊನ್ನೆ ಶಾಲೆಯಲ್ಲಿ ನಡೆದ ವಿದ್ಯಮಾನಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಈ ಕುರಿತು 'ಮೈಸೂರು ಮಿತ್ರ'ನ ಜೊತೆ ಮಾತನಾಡಿದ ಆಶಾ, ಬೀಚ್‌ನಲ್ಲಿ ತಮ್ಮ ಜೊತೆ ಮುಖ್ಯ ಶಿಕ್ಷಕ ಮತ್ತು ಅಟೆಂಡರ್ ಅನುಚಿತವಾಗಿ ವರ್ತಿಸಿದ್ದ ಬಗ್ಗೆ ಶಿಕ್ಷಕಿಯರ ಜೊತೆ ಅಲ್ಲಿಯೇ ತೋಡಿಕೊಂಡಿದ್ದಾರೆ. ಅದನ್ನು ಶಿಕ್ಷಕರು ವಿಡಿಯೋ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ನಮಗೆ ತಿಳಿಸಿದರು. ವಿದ್ಯಾರ್ಥಿನಿಯರಿಂದ ವಿವರಣೆ ಕೂಡ ಪಡೆಯಲಾಯಿತು ಎಂದು ತಿಳಿಸಿದರು. ಬೀಚ್‌ನಲ್ಲಿ ನಡೆದ ಅಮಾನವೀಯ ಘಟನೆಯಿಂದ ಬೇಸರಗೊಂಡ ಶಿಕ್ಷಕಿಯರು ● 6ನೇ ಪುಟಕ್ಕೆ

ಸಿಡಿಪಿಓಗೆ ಪಿಎಸ್‌ಐ ಆವಾಜ್!



ಸಿಡಿಪಿಓ ಆಶಾ

ಶಾಲಾ ವಿದ್ಯಾರ್ಥಿನಿಯರ ಮೇಲೆ ನಡೆದ ದೌರ್ಜನ್ಯ ಸಂಬಂಧ ದೂರು ನೀಡಲು ತೆರಳಿದ್ದ ಸಿಡಿಪಿಓ ಆಶಾ ಅವರಿಗೆ ಅಂತರಸಂತೆ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್ ಆವಾಜ್ ಹಾಕಿದ ಬಗ್ಗೆ ವರದಿ ಆಗಿದೆ.

ಏನ್ರಿ... ಈಗ ದೂರು ಕೊಡಲು ಬಂದಿದ್ದೀರಾ... ಇಷ್ಟು ದಿನ ಏನ್ ಮಾಡ್ತಾ ಇದ್ರಿ... ಎಂದು ಏರುಧ್ವನಿಯಲ್ಲಿ ಪ್ರಶ್ನಿಸಿದ ಪಿಎಸ್‌ಐ ರವಿಕುಮಾರ್, ಕನಿಷ್ಠ ಸೌಜನ್ಯ ಇಲ್ಲದಂತೆ ವರ್ತಿಸಿದರು.

ಸಾರ್, ವಿದ್ಯಾರ್ಥಿನಿಯರು ಮತ್ತು ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಿ ದೂರು ನೀಡಲು ಸಮಯಾವಕಾಶ ಬೇಕಿತ್ತು. ಈ ಹಿನ್ನೆಲೆಯಲ್ಲಿ ಸ್ವಲ್ಪ ವಿಳಂಬವಾಯಿತು ಎಂದು ತಾವು ತಿಳಿಸಿದಾಗ, ಸರಿ, ದೂರು ಕೊಟ್ಟು ಹೋಗಿ ನೋಡೋಣ ಎಂದರು ಎಂದು ಪೊಲೀಸ್ ಠಾಣೆಯಲ್ಲಿ ತಮಗಾದ ಕಹಿ ಅನುಭವವನ್ನು ಸಿಡಿಪಿಓ ಆಶಾ 'ಮೈಸೂರು ಮಿತ್ರ'ನ ಬಳಿ ಹೇಳಿಕೊಂಡು, ಬೇಸರ ವ್ಯಕ್ತಪಡಿಸಿದರು. ಈ ಮಧ್ಯೆ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಲಕ್ಷ್ಮಿಕಾಂತ್ ತಿಳಿಸಿದ್ದಾರೆ.

ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಸಿಡಿಪಿಓ ಆಶಾ ನೀಡಿದ ದೂರಿನ ಮೇರೆಗೆ ಪೋಕ್ಸೊ ಕಾಯ್ದೆ 10 ಮತ್ತು 12ರಡಿ ಪ್ರಕರಣ ದಾಖಲಿಸಲಾಗಿದೆ ಎಂದರು. ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ನಡೆದಿರುವ ಘಟನೆ ಪೋಕ್ಸೊ ಕಾಯ್ದೆ 10ರಡಿ, ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ 12ರಡಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆಯುತ್ತಿದೆ. ಘಟನೆ ಮುರುಡೇಶ್ವರ ಬೀಚ್‌ನಲ್ಲಿ ನಡೆದಿರುವುದರಿಂದ ಕೋರ್ಟ್ ಅನುಮತಿ ಪಡೆದು ಹೇಳಿಕೆ ದಾಖಲಿಸಬೇಕಾಗುತ್ತದೆ ಎಂದ ಅವರು, ಪ್ರಕರಣ ಮುರುಡೇಶ್ವರಕ್ಕೆ ವರ್ಗಾವಣೆಯಾಗುವ ಸಾಧ್ಯತೆಯೂ ಇದೆ ಎಂದರು.

ಪ್ರಾಣಿಗಳ ಶೋಷಣೆ ವಿರುದ್ಧ ವಿನೂತನ ರೀತಿ ಜಾಗೃತಿ



ಮೈಸೂರು,ಡಿ.2(ಪಿಎಂ)- ಪ್ರಾಣಿಗಳ ಶೋಷಣೆ ಅಂತ್ಯಗೊಳ್ಳಬೇಕು... ಪ್ರಾಣಿಗಳು ಮಾನವನ ಆಸ್ತಿಯಲ್ಲ... ಮಾನವನ ಗುಲಾಮಗಿರಿಯಿಂದ ಪ್ರಾಣಿಗಳನ್ನು ಮುಕ್ತಗೊಳಿಸಬೇಕು ಎಂಬಿತ್ಯಾದಿ ಘೋಷಣೆಗಳ ಫಲಕಗಳನ್ನಿಡಿದು ಪ್ರಾಣಿಗಳ ಶೋಷಣೆ ವಿರುದ್ಧ 'ವೇಗನ್ಸ್ ಆಫ್ ಮೈಸೂರು' ಸ್ವಯಂ ಸೇವಕ ಸಂಘಟನೆ ವತಿಯಿಂದ ಶನಿವಾರ ಜಾಗೃತಿ ಮೂಡಿಸಲಾಯಿತು.

ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ಸಮಾವೇಶಗೊಂಡ ಸಂಘಟನೆಯ ಕಾರ್ಯಕರ್ತರು, ಯಾವುದೇ ಪ್ರಾಣಿಗಳ ಶೋಷಣೆ ಮಾಡದಂತೆ ಸಾರ್ವಜನಿಕರಲ್ಲಿ ಕೋರಿದರು. ಅಲ್ಲದೆ, ಕಾರ್ಯಕರ್ತರ ಪೈಕಿ ಇಬ್ಬರು ಪಂಜರದೊಳಗೆ ಕುಳಿತು ಪ್ರಾಣಿಗಳ ಯಾತನೆಯನ್ನು ಪ್ರತಿಬಿಂಬಿಸುವ ಪ್ರಯತ್ನ ನಡೆಸಿ, ವಿನೂತನ ರೀತಿಯಲ್ಲಿ ಸಾರ್ವಜನಿಕರ ಗಮನ ಸೆಳೆದರು.

ಆಹಾರ, ಬಟ್ಟೆ ಮೊದಲಾದ ಉತ್ಪನ್ನಗಳಿಗಾಗಿ ಪ್ರಾಣಿಗಳನ್ನು ಬಲಿಪಡೆಯುವುದನ್ನು ತ್ಯಜಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಮಾನವರಂತೆಯೇ ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ಮಾನವನ ದುರಾಸೆಗೆ ಮೂಕ ಪ್ರಾಣಿಗಳು ಬಲಿಯಾಗುವುದು ಇನ್ನಾದರೂ ತಪ್ಪಬೇಕು. ಮಾಂಸ, ಹಾಲು, ಜೇನು ತುಪ್ಪದಂತಹ ಉತ್ಪನ್ನಗಳಿಂದ ದೂರವಿದ್ದು, ಪ್ರಾಣಿಗಳ ಬದುಕಿಗೆ ಪೂರಕವಾಗಿ ಮಾನವನ ಬದುಕು ರೂಪುಗೊಳ್ಳುವ ಅಗತ್ಯತೆ ಅರಿಯಬೇಕು ಎಂದು ಅರಿವು ಮೂಡಿಸಿದರು. ಸಂಘಟನೆ ಮುಖಂಡ ಅನುರಾಗ್ ಸೇರಿದಂತೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಚಿನ್ನಾಭರಣ ತಯಾರಿಸಿಕೊಡುವುದಾಗಿ ಗೋಲ್ಡ್ ಕಂಪನಿ ಮಾಲೀಕನಿಗೆ ವಂಚನೆ

ಇಬ್ಬರು ಆಭರಣ ತಯಾರಕರ ವಿರುದ್ಧ ವಂಚನೆ ಪ್ರಕರಣ ದಾಖಲು

ಮೈಸೂರು, ಡಿ.2-ಚಿನ್ನಾಭರಣ ತಯಾರಿಸಿಕೊಡುವುದಾಗಿ ಗೋಲ್ಡ್ ಕಂಪನಿ ಮಾಲೀಕನಿಗೆ ಇಬ್ಬರು ಆಭರಣ ತಯಾರಕರು 512 ಗ್ರಾಂ ಚಿನ್ನ ಹಾಗೂ 9.80 ಲಕ್ಷ ರೂ. ನಗದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಮೈಸೂರಿನ ಶ್ರೀರಾಂಪುರ ಮುಖ್ಯ ರಸ್ತೆಯಲ್ಲಿರುವ ಡಿಜಿಎಫ್ ಗೋಲ್ಡ್ ಕಂಪನಿಯ ಮಾಲೀಕ ಸೌಂದರ್ ರಾಜನ್ (40) ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಕೆ.ಟಿ. ಸ್ಟ್ರೀಟ್‌ನ ಆಭರಣ ತಯಾರಕರಾದ ನಿಖಿಲ್ ಮತ್ತು ಮಾದೇಶ್ ಆರೋಪಕ್ಕೆ ಗುರಿಯಾಗಿರುವವರು. ಸೌಂದರ ರಾಜನ್ ಅವರು ತಮ್ಮ ಗ್ರಾಹಕರಿಂದ ಆರ್ಡರ್ ಪಡೆದ ಒಡವೆಗಳನ್ನು ನಿಖಿಲ್ ಮತ್ತು ಮಾದೇಶ ಅವರಿಂದ ಮಾಡಿಸಿಕೊಡುತ್ತಿದ್ದರು. ಕಳೆದ ಸೆ.12ರಂದು ನಿಖಿಲ್ ಮತ್ತು ಮಾದೇಶ ಸೌಂದರ ರಾಜನ್ ಅವರ ನಾಲ್ವರು ಗ್ರಾಹಕರಿಗೆ ಒಡವೆ ಮಾಡಿಕೊಡಲು 512 ಗ್ರಾಂ ಚಿನ್ನದ ಗಟ್ಟಿ ಮತ್ತು 9.80 ಲಕ್ಷ ರೂ. ನಗದನ್ನು ಸೌಂದರ ರಾಜನ್ ಅವರಿಂದ ಪಡೆದಿದ್ದಾರೆ. ಆದರೆ ಒಡವೆಯನ್ನೂ ಮಾಡಿಕೊಡದೆ ಹಣ ಹಾಗೂ ಚಿನ್ನದ ಗಟ್ಟಿಯನ್ನೂ ಹಿಂತಿರುಗಿಸದೇ ವಂಚಿಸಿದ್ದಾರೆ ಎಂದು ಸೌಂದರ ರಾಜನ್ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬ್ಲಾಕ್‌ಮೇಲ್ ಮಾಡಿ ಸಹಚರರೊಂದಿಗೆ ಸೇರಿ ಮಾಲೀಕನ ಸುಲಿಗೆ ಮಾಡಿದ ಚಾಲಕ

ಮಡಿಕೇರಿ, ಡಿ.2-ಯುವತಿಯೊಂದಿಗೆ ಮದುವೆ ಮಾಡಿಸುವುದಾಗಿ ನಂಬಿಸಿ ಚಾಲಕನೋರ್ವ ತನ್ನ ಸಹಚರರೊಡಗೂಡಿ ಮಾಲೀಕನನ್ನೇ ಬ್ಲಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡಿದ ಬಗ್ಗೆ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

ಕೇರಳದ ಎರ್ನಾಕುಲಂ ನಗರದ ವರ್ತಕ ಜಾನ್ ಮ್ಯಾಥ್ಯು (64) ವಂಚನೆಗೊಳಗಾದವರಾಗಿದ್ದು, ಇವರ ಬಳಿ ಚಾಲಕನಾಗಿದ್ದ ಫೈಜಲ್ ಎಂಬಾತ ತನಗೆ ಪರಿಚಯವಿರುವ 19 ವರ್ಷ ವಯಸ್ಸಿನ ಜಾಸ್ಮಿನ್ ಎಂಬ ಯುವತಿಯನ್ನು ಮದುವೆ ಮಾಡಿಸಿಕೊಡುವುದಾಗಿ ನಂಬಿಸಿದ್ದಾನೆ.

ಅದರಂತೆ ಚಾಲಕ ಫೈಜಲ್ ನ.18ರಂದು ಜಾಸ್ಮಿನ್ ಎಂಬ ಯುವತಿಯನ್ನು ಜಾನ್ ಮ್ಯಾಥ್ಯು ಅವರಿಗೆ ಪರಿಚಯಿಸಿದ್ದಾನೆ. ಆಕೆ ತನ್ನ ತಂದೆ ತಮ್ಮನ್ನು ಬಿಟ್ಟು ಹೋಗಿದ್ದು, ತಾಯಿಗೆ ಸ್ತನ ಕ್ಯಾನ್ಸರ್ ಕಾಯಿಲೆ ಇರುವುದರಿಂದ ಹಣದ ಅವಶ್ಯಕತೆ ಇದೆ ಎಂದು ತಿಳಿಸಿದ್ದಾಳೆ. ನಂತರ ನ.26ರಂದು ಚಾಲಕ ಫೈಜಲ್, ಆತನ ಸಹಚರರಾದ ಬಷೀರ್, ಸಾದಿಕ್, ಅಮೀರ್ ಮತ್ತಿತರರು ಜಾಸ್ಮಿನ್ ಎಂಬ ಯುವತಿಯೊಂದಿಗೆ ಜಾನ್ ಮ್ಯಾಥ್ಯು ಅವರನ್ನು ಮಡಿಕೇರಿಗೆ ಕರೆತಂದು ಇಲ್ಲಿನ ಸಫೂರ ರೆಸಿಡೆನ್ಸಿಯಲ್ಲಿ 2 ಕೊಠಡಿಗಳನ್ನು ಪಡೆದು ತಂಗಿದ್ದಾರೆ. ಅಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಇವರೆಲ್ಲರೂ ಸೇರಿ ಯುವತಿಯನ್ನು ಜಾನ್ ಮ್ಯಾಥ್ಯು ಅವರಿಗೆ ಮದುವೆ ಮಾಡಿಕೊಟ್ಟಂತೆ ಫೋಟೋ ತೆಗೆಸಿ ನಂತರ ಈ ಫೋಟೋವನ್ನು ತೋರಿಸಿ, ವಂಚಿಸಿ ಮದುವೆಯಾಗಿರುವುದಾಗಿ ನಿಮ್ಮ ಕುಟುಂಬದವರಿಗೆ ಹೇಳುವುದಾಗಿ ಬೆದರಿಸಿ 8 ಲಕ್ಷ ರೂ. ನಗದು, 1 ಲಕ್ಷ ಹಾಗೂ 1.10 ಲಕ್ಷ ರೂ. ಮೌಲ್ಯದ ಎರಡು ಚೆಕ್‌ಗಳನ್ನು ಪಡೆದುಕೊಂಡು ರೆಸಿಡೆನ್ಸಿಯಿಂದ ತೆರಳಿದ್ದಾರೆ.

ಈ ಸಂಬಂಧ ಜಾನ್ ಮ್ಯಾಥ್ಯು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಡಿಕೇರಿ ಟೌನ್ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಾನಸಗಂಗೋತ್ರಿ ಪ್ರೌಢಶಾಲೆಯಲ್ಲಿ ಕಳವಿಗೆ ಯತ್ನ

ಮೈಸೂರು,ಡಿ.2-ಮೈಸೂರಿನ ಚದುರಂಗ ರಸ್ತೆಯಲ್ಲಿರುವ ಮೈಸೂರು ವಿವಿಗೆ ಸೇರಿದ ಮಾನಸಗಂಗೋತ್ರಿ ಪ್ರೌಢಶಾಲೆಯ ಬೀಗಗಳನ್ನು ಮುರಿದು ಖದೀಮರು ಕಳವು ಮಾಡಲು ಯತ್ನಿಸಿದ್ದಾರೆ.

ನ.30ರಂದು ಬೆಳಗ್ಗೆ ಶಾಲೆಯ ಸಿಬ್ಬಂದಿ ಆಗಮಿಸಿದಾಗ ಕಳವು ಯತ್ನದ ಪ್ರಕರಣ ಗೊತ್ತಾಗಿದೆ. ಖದೀಮರು ಶಾಲೆಯ ಕಬ್ಬಿಣದ ಗ್ರಿಲ್ ಗೇಟ್‌ಗಳಿಗೆ ಅಳವಡಿಸಿದ್ದ ಬೀಗವನ್ನು ಕತ್ತರಿಸಿದ್ದಾರೆ. ಶಾಲೆಯ ಒಂದನೇ ಅಂತಸ್ತಿನಲ್ಲಿರುವ ಮುಖ್ಯೋಪಾಧ್ಯಾಯರ ಕೊಠಡಿಯ ಕಬ್ಬಿಣದ ಗ್ರಿಲ್ ಗೇಟ್ ಬೀಗವನ್ನೂ ಮುರಿದಿದ್ದು, ಕೊಠಡಿಯಲ್ಲಿದ್ದ ಮೂರು ಬೀರುಗಳನ್ನು ಜಖಂಗೊಳಿಸಿದ್ದಾರೆ. ಆದರೆ ಶಾಲೆಯಲ್ಲಿ ಯಾವುದೇ ವಸ್ತು ಕಳ್ಳತನವಾಗಿರುವುದು ಕಂಡು ಬಂದಿಲ್ಲ ಎಂದು ಮುಖ್ಯೋಪಾಧ್ಯಾಯ ಸಿ.ಎ.ಚಿಂದೇಗೌಡ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿಧನ



ಬಾಲ್ತಾಜಾರ್ ಡಿಸೋಜಾ

ಮೈಸೂರು, ಡಿ.2- ಮೈಸೂರಿನ ರಾಜೀವ್‌ನಗರ ನಿವಾಸಿ ಬಾಲ್ತಾಜಾರ್ ಡಿಸೋಜಾ (65) ಶುಕ್ರವಾರ ನಿಧನರಾದರು. ಮೃತರು ಪತ್ನಿ ಲೀನಾ ಡಿಸೋಜಾ, ಪುತ್ರರಾದ ಸಚಿನ್ ಡಿಸೋಜಾ ಮತ್ತು ರೋಶನ್ ಡಿಸೋಜಾ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ರಮ್ಮನಹಳ್ಳಿ ಸಿಮೆಟ್ರಿಯಲ್ಲಿ ಶನಿವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕರಾಮುವಿ ಉಪ ಕುಲಸಚಿವ ಶಿವಕುಮಾರ್

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕರಾಮುವಿ)ದ ಉಪ ಕುಲಸಚಿವ, ಶ್ರೀರಾಂಪುರ ನಿವಾಸಿ ಸಿ.ಪಿ.ಶಿವಕುಮಾರ್(55) ಅವರು ಹೃದಯಾಘಾತದಿಂದ ಶನಿವಾರ ನಿಧನರಾದರು. ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗಲೇ ಇವರಿಗೆ ಎದೆ ನೋವು ಕಾಣಿಸಿಕೊಂಡಿದೆ. ಕೂಡಲೇ ಸಹೋದ್ಯೋಗಿಗಳು ಅವರನ್ನು ಜಯದೇವ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಸಾವನ್ನಪ್ಪಿದರು ಎಂದು ತಿಳಿದುಬಂದಿದೆ.

ಇವರು ತಂದೆ, ತಾಯಿ ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ಮೈಸೂರಿನಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಲಿದ್ದು, ಸ್ಥಳ ಹಾಗೂ ಸಮಯ ನಿರ್ಧರಿಸಬೇಕಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವಿಶ್ವ ಏಡ್ಸ್ ದಿನಾಚರಣೆ

ಹೆಚ್‌ಐವಿ ಸೋಂಕಿತರ ಶುಶ್ರೂಷೆ ನೀಡುವ ಹೊರಗುತ್ತಿಗೆ ನೌಕರರ ಕಾಯಂಗೆ ಒತ್ತಾಯ

ಈ ಸಂಬಂಧ ಸರ್ಕಾರದ ಗಮನ ಸೆಳೆಯುವುದಾಗಿ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಭರವಸೆ



ಮೈಸೂರು,ಡಿ.2(ಆರ್‌ಕೆ)- ಹೆಚ್‌ಐವಿ ಏಡ್ಸ್ ಸೋಂಕಿತರಿಗೆ ಶುಶ್ರೂಷೆ ಮಾಡುತ್ತಿರುವ, ಸ್ವಚ್ಛತಾ ಕಾರ್ಯದಲ್ಲಿ ನಿರತರಾಗಿರುವ ಹೊರಗುತ್ತಿಗೆ ನೌಕರರನ್ನು ಆದ್ಯತೆ ಮೇಲೆ ಸೇವೆ ಕಾಯಂಗೊಳಿಸಲು ತಾವು ಸರ್ಕಾರದ ಗಮನ ಸೆಳೆಯುವುದಾಗಿ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಆರೋಗ್ಯ ಇಲಾಖೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಶಾಕಿರಣ, ಆನಂದ ಜ್ಯೋತಿ, ಪಾಸಿಟಿವ್ ನೆಟ್‌ವರ್ಕ್, ಆಶೋದಯ ಸಮಿತಿ, ಗಾರ್ಡ್ ಸಂಸ್ಥೆ, ಮಹಾನ್ ಹಾಗೂ ಐಎಂಎ ಮೈಸೂರು ಶಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ಏಡ್ಸ್ ದಿನದ ಅಂಗವಾಗಿ ಮೈಸೂರಿನ ಜೆಕೆ ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಹೆಚ್‌ಐವಿ ಸೋಂಕಿತರನ್ನು ತಿರಸ್ಕಾರದಿಂದ ಕಾಣುವ ಪರಿಸ್ಥಿತಿ ಇದ್ದಾಗ ಅವರನ್ನು ಸಾಮಾನ್ಯ ರೋಗಿಗಳಂತೆಯೇ ಕಂಡು, ಆತ್ಮವಿಶ್ವಾಸದಿಂದ ಶುಶ್ರೂಷೆ ಮಾಡುವ ಆರೋಗ್ಯ ಇಲಾಖೆ, ಆಶಾ, ಅಂಗನವಾಡಿ ಕಾರ್ಯಕರ್ತೆಯರನ್ನು ಕಾಯಂಗೊಳಿಸಬೇಕೆಂಬ ಒತ್ತಾಯವಿದೆ. ಆ ಬಗ್ಗೆ ಸದನದಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ಸಮಾಜದಲ್ಲಿ ಹಿಂದೆ ಹೆಚ್‌ಐವಿ-ಏಡ್ಸ್ ಸೋಂಕಿತರನ್ನು ನೋಡುವ ರೀತಿ ಬೇರೆಯೇ ಆಗಿತ್ತು. ಆದರೆ ಬದಲಾದ ಜನರ ಭಾವನೆಯಿಂದಾಗಿ ಜಾಗೃತಿ ಹೆಚ್ಚಾಗಿದೆ. ಅವರನ್ನೂ ಸಾಮಾನ್ಯ ರೋಗಿಗಳಂತೆಯೇ ಪರಿಗಣಿಸುತ್ತಿರುವುದು ಒಳ್ಳೆ ಬೆಳವಣಿಗೆಯಾಗಿದೆ. ಏಡ್ಸ್ ತಗುಲಿದೆ ಎಂದು ಗೊತ್ತಾದರೆ, ಭಯದಿಂದ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಇತ್ತು. ಆದರೆ, ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಸೋಂಕಿತರ ಮನಸ್ಥಿತಿಯನ್ನು ಈಗ ಬದಲಿಸಿವೆ ಎಂದು ಶಾಸಕರು ನುಡಿದರು.

ಸೋಂಕಿತರ ಮಕ್ಕಳನ್ನು ಸಹ ತಿರಸ್ಕಾರದಿಂದ ಕಾಣುವ ಕಾಲವೊಂದಿತ್ತು. ಈಗ ಜನರಿಗೆ ಅರಿವು ಮೂಡಿಸಿದ ನಂತರ ಪರಿಸ್ಥಿತಿ ಬದಲಾಗಿದೆ. ಅವರನ್ನು ಶುಶ್ರೂಷೆ ಮಾಡಿ ನೋಡಿಕೊಳ್ಳುತ್ತಿರುವ ಹಾಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕೆಂಬುದು ನನ್ನ ಅಭಿಪ್ರಾಯ. ಅಂತಹ ಮನವಿಗಳಿದ್ದರೆ ಸರ್ಕಾರ ಪರಿಗಣಿಸಬೇಕು. ನಾನೂ ಸಹ ಸದನದಲ್ಲಿ ಈ ಬಗ್ಗೆ ಚರ್ಚಿಸುತ್ತೇನೆ ಎಂದು ಅವರು ಇದೇ ಸಂದರ್ಭ ಭರವಸೆ ನೀಡಿದರು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಆರ್‌ಸಿಹೆಚ್ ಹಾಗೂ ಐಎಂಎ ಮೈಸೂರು ಶಾಖೆ ಅಧ್ಯಕ್ಷ ಡಾ. ಜಯಂತ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಮೊಹಮದ್ ಶಿರಾಜ್ ಅಹಮದ್, ಎಆರ್‌ಟಿ ಮೆಡಿಕಲ್ ಆಫೀಸರ್ ಡಾ.ಗೋವಿಂದರಾಜು, ಚೆಲುವಾಂಬ ಆಸ್ಪತ್ರೆಯ ಡಾ.ಸುಧಾ, ಜೀವಧಾರ ರಕ್ತನಿಧಿಯ ಗಿರೀಶ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಜಾಗೃತಿ ಜಾಥಾ

ವಿಶ್ವ ಏಡ್ಸ್ ದಿನದ ಅಂಗವಾಗಿ ಮೈಸೂರಿನ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಬೆಳಗ್ಗೆ ಆಯೋಜಿಸಿದ್ದ ಜಾಗೃತಿ ಜಾಥಾವನ್ನು ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಮೂಲಕ ಸಾಗಿದ ಜಾಥ, ಜೆಕೆ ಮೈದಾನದಲ್ಲಿ ಅಂತ್ಯಗೊಂಡಿತು. ಟೆರೇಷಿಯನ್, ಶೇಷಾದ್ರಿಪುರಂ, ವಿದ್ಯಾವರ್ಧಕ ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ-ಸಂಸ್ಥೆಗಳ ಪ್ರಮುಖರು ಜಾಥಾದಲ್ಲಿ ಪಾಲ್ಗೊಂಡು, ಜನರಲ್ಲಿ ಜಾಗೃತಿ ಮೂಡಿಸಿದರು.

ಸ್ಕೂಟರ್ ನಂಬರ್ ಪ್ಲೇಟ್ ಮರೆ ಮಾಚಿದ ವ್ಯಕ್ತಿ ಮೇಲೆ ಕೇಸ್!

ಮೈಸೂರು, ಡಿ.2(ಎಂಕೆ)-ಸ್ಕೂಟರ್ ನಂಬರ್ ಪ್ಲೇಟ್‌ಗೆ ಸ್ಟಿಕ್ಕರ್ ಅಂಟಿಸಿಕೊಂಡು ಅಡ್ಡಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ಪಡೆದಿರುವ ಮೈಸೂರಿನ ವಿವಿಪುರಂ ಸಂಚಾರ ಪೊಲೀಸರು, ವಿಜಯನಗರ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ.

ಠಾಣೆ ವ್ಯಾಪ್ತಿಯ ಹಿನಕಲ್ ರಸ್ತೆಯಲ್ಲಿ ಹೊಂಡಾ ಆಕ್ಟಿವಾ 125 ಸ್ಕೂಟರ್‌ನ ನೊಂದಣಿ ಸಂಖ್ಯೆ ಕೆಎ-09-ಜೆಎಂ-2022ನ್ನು ಕೆಎ-09-ಜೆಎಂ-20 ಎಂದು ಬದಲಾಯಿಸಿಕೊಂಡು ನೊಂದಣಿ ಸಂಖ್ಯೆಯನ್ನು ಮರೆಮಾಚಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದ ಸವಾರನನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದಿರುವ ವಿವಿಪುರಂ ಸಂಚಾರ ಪೊಲೀಸರು, ಮುಂದಿನ ಕ್ರಮಕ್ಕಾಗಿ ವಿಜಯನಗರ ಪೊಲೀಸ್ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಡಿ.2-ಡಿಸೆಂಬರ್ 3 ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಕಡಕೊಳ, ಕಡಕೊಳ ಕೈಗಾರಿಕಾ ಪ್ರದೇಶ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅನಿಯಮಿತ ನಿಲುಗಡೆಯಾಗಲಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಡಿ.4ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಲಕ್ಷ್ಮೀಪುರಂ ಫೀಡರ್‌ನಲ್ಲಿ ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಜಾಕಿ ಕ್ವಾರ್ಟರ್ಸ್ ಸುತ್ತ-ಮುತ್ತ, ವಿದ್ಯಾರಣ್ಯಪುರಂ 16ನೇ ಕ್ರಾಸ್‌ನಿಂದ 32ನೇ ಕ್ರಾಸ್‌ವರೆಗೆ, ಪಿ.ಕೆ.ಕಾಲೋನಿ, ಕನಕಗಿರಿ, ಬೆಸ್ತರ ಬ್ಲಾಕ್ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ.

ಸಹಾಯಕ ಪ್ರಾಧ್ಯಾಪಕಿ ಡಾ.ಸುಮಿತ್ರಾ ರಾಜಶೇಖರ್ ಅವರ ಕೃತಿ ಬಿಡುಗಡೆ



ಮೈಸೂರು,ಡಿ.2(ಜಿಎ)-ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಮರಡಿಲಿಂಗೇಶ್ವರ ಪ್ರಕಾಶನ, ಅಮೃತೇಶ್ವರ ಪ್ರಕಾಶನ ಸಹಯೋಗದೊಂದಿಗೆ ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಶನಿವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿವಿಯ ಸಹಾಯಕ ಪ್ರಾಧ್ಯಾಪಕಿ ಡಾ.ಸುಮಿತ್ರಾ ರಾಜಶೇಖರ್ ಅವರ ಮಳವಳ್ಳಿಯ ಇತಿಹಾಸ ಮತ್ತು ಸಂಸ್ಕೃತಿ, ಸರ್ ಎಂ. ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಗಳು ಕೃತಿಗಳನ್ನು ಶಾಸಕ ಜಿ.ಟಿ. ದೇವೇಗೌಡ ಲೋಕಾರ್ಪಣೆಗೊಳಿಸಿದರು.

ನಂತರ ಮಾತನಾಡಿದ ಅವರು, ಮೈಸೂರನ್ನು ಆಳಿದ ನಾಲ್ವಡಿಯವರು ಹಾಗೂ ಮುಖ್ಯ ಎಂಜಿನಿಯರ್, ನಂತರ ದಿವಾನರಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಅವರು ನಾಡಿಗೆ ಕನ್ನಂಬಾಡಿ ಕಟ್ಟೆ ನಿರ್ಮಾಣ ಸೇರಿದಂತೆ ಹಲವಾರು ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವುಗಳ ಬಗ್ಗೆ ಈಗಿನ ಯುವ ಪೀಳಿಗೆಗೂ ತಿಳಿಸುವ ಕೆಲಸ ಆಗಬೇಕು. ನಾಲ್ವಡಿಯವರು, ವಿಶ್ವೇಶ್ವರಯ್ಯ ಅವರು ಏನೆಲ್ಲಾ ಸಾಹಸ, ಸಾಧನೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡರೆ ಯುವಪೀಳಿಗೆ ಕೂಡ ಸ್ಫೂರ್ತಿ ಪಡೆದು ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದರು.


ಈ ವೇಳೆ ಮಳವಳ್ಳಿಯ ಇತಿಹಾಸ ಮತ್ತು ಸಂಸ್ಕೃತಿ ಕೃತಿ ಕುರಿತು ಮೈವಿವಿ ಇತಿಹಾಸ ವಿಭಾಗದ ಅಧ್ಯಕ್ಷ ಪ್ರೊ.ವೈ.ಎಚ್. ನಾಯಕವಾಡಿ ಮಾತನಾಡಿ, ಚಾರಿತ್ರಿಕ, ಸ್ಥಾನಿಕ, ಪ್ರಾದೇಶಿಕ ಕುರಿತು ಸೂಕ್ಷ್ಮ ಅಧ್ಯಯನ ಅಷ್ಟು ಸುಲಭವಲ್ಲ. ಆದರೆ ಡಾ.ಸುಮಿತ್ರ ಅವರು ಭೌಗೋಳಿಕ, ಆರ್ಥಿಕ, ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ವಿಷಯಗಳನ್ನು ಪರಾಮರ್ಶಿಸಿ, ಶಾಸನಗಳು, ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ, ಮೈಸೂರು ಅರಸರು, ಹೈದರಾಲಿ, ಟಿಪ್ಪು ತನಕವೂ ಅಧ್ಯಯನ ಮಾಡಿದ್ದಾರೆ ಎಂದರು.

ಸರ್ ಎಂ.ವಿಶ್ವೇಶ್ವರಯ್ಯನವರ ಜೀವನ ಮತ್ತು ಸಾಧನೆಗಳು ಕೃತಿ ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸರಳ ಇಂಗ್ಲಿಷ್‌ನಲ್ಲಿ ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ವಿಶ್ವೇಶ್ವರಯ್ಯನವರ ಬಾಲ್ಯ, ಆರ್ಥಿಕ ಯೋಜನೆಗಳು, ದಕ್ಷ ಎಂಜಿನಿಯರ್, ಪರಿಣತ ಆಡಳಿತಗಾರ, ಸಾಮಾಜಿಕ ಕಾರ್ಯಕರ್ತ, ವಿಭಿನ್ನ ದೃಷ್ಟಿಕೋನದ ವ್ಯಕ್ತಿಯಾಗಿ ವಿಶ್ವೇಶ್ವರಯ್ಯ ಅವರು ನಾಡಿಗೆ ನೀಡಿರುವ ಕೊಡುಗೆಗಳನ್ನು ದಾಖಲಿಸಿದ್ದಾರೆ. ಮುಂಬೈ, ಹೈದ್ರಾಬಾದ್, ಮೈಸೂರು ಸೇರಿದಂತೆ ಸೇವೆ ಸಲ್ಲಿಸಿದ ಕಡೆಯಲ್ಲಾ ನೀರಾವರಿ, ಕುಡಿಯುವ ನೀರು ಯೋಜನೆ, ಒಳಚರಂಡಿಗಳ ವಿನ್ಯಾಸ, ಪ್ರಮುಖವಾಗಿ ಕೆಆರ್‌ಎಸ್‌ನಲ್ಲಿ ಸ್ವಯಂ ಚಾಲಿತ ಗೇಟುಗಳ ನಿರ್ಮಾಣ, ಶಿವನ ಸಮುದ್ರದಲ್ಲಿ ವಿದ್ಯುತ್ ಉತ್ಪಾದನೆ, ಹಲವಾರು ಕೈಗಾರಿಕೆಗಳ ಸ್ಥಾಪನೆ, ಮೈಸೂರು ವಿವಿ ಸ್ಥಾಪನೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿಯ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಮಾತನಾಡಿ, ಪುಸ್ತಕ ಬರೆಯುವವರು, ಓದುವವರು ವಿರಳವಾಗುತ್ತಿದ್ದಾರೆ. ಯುವಕರು ಮೊಬೈಲ್‌ನಲ್ಲಿ ಮುಳುಗಿದ್ದಾರೆ. ಆದರೆ, ಸುಮಿತ್ರ ಅವರಂಥವರು ಚರಿತ್ರೆ, ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ವಿಚಾರಗಳು, ವ್ಯಕ್ತಿ ವಿಚಾರಗಳನ್ನು ದಾಖಲಿಸುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಮುಂದಿನ ಪೀಳಿಗೆಗೆ ದಾಟಿಸುವ ಕೆಲಸ ಆಗುತ್ತಿದೆ ಎಂದ ಅವರು, ಇಂದಿನ ಪಿಎಚ್.ಡಿಗಳು ಗುಣಾತ್ಮಕವಾಗಿರುವುದಿಲ್ಲ. ಪ್ರೌಢ ಪ್ರಬಂಧಗಳನ್ನು ಹೊರಗುತ್ತಿಗೆ ನೀಡಿ ಬರೆಸಲಾಗುತ್ತಿದೆ. ಆದರೆ ಇದು ಬದಲಾಗಿ, ಸರಿಯಾದ ರೀತಿಯಲ್ಲಿ ಸಂಶೋಧನೆಗಳು ಆಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಎರಡು ಕೃತಿಗಳ ಕರ್ತೃ ಡಾ.ಸುಮಿತ್ರ ರಾಜಶೇಖರ್, ಸಾಹಿತಿ ಮ.ಸಿ.ನಾರಾಯಣ, ಡಿ.ಚಂದ್ರಮ್ಮ, ಕೆ. ಕೆಂಪಯ್ಯ, ಪ್ರಕಾಶಕಿ ಐ.ಎನ್.ತ್ರಿವೇಣಿ, ಜಿಲ್ಲಾ ಕಸಾಪ ಪ್ರಧಾನ ಕಾರ್ಯದರ್ಶಿ ಚೀಲೂರು ಚಂದ್ರಶೇಖರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

3.12.2023 ಭಾನುವಾರ, ಮಳೆ ನಕ್ಷತ್ರ: ಜ್ಯೇಷ್ಠ 03.12.2023 ರಿಂದ 15.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತೀಕ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಭಾರತೀಯ ಸ್ಟೇಟ್ ಬ್ಯಾಂಕ್:** ಬೃಹತ್ ಗೃಹ ಮತ್ತು ಕಾರು ಸಾಲಗಳ ಉತ್ಸವ, ಸ್ಥಳ: ಜೆ.ಕೆ. ಮೈದಾನ, ಬೆಳಗ್ಗೆ 10ರಿಂದ.

■ **ಬಸವ ಸಮಿತಿ :** ಶರಣ ಸಂಗಮ-288, ಕನ್ನಡ ಪ್ರಾಧ್ಯಾಪಕ ಡಾ. ಮಹೇಂದ್ರಮೂರ್ತಿ ದೇವನೂರು ಅವರಿಂದ ವಚನಕಾರರ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಹಿನಕಲ್, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಅರಸು ಮಂಡಳಿ ಸಂಘ :** ಶತಮಾನೋತ್ಸವ ಭವನದ ಭೂಮಿಪೂಜೆ ಕಾರ್ಯಕ್ರಮ, ಭೂಮಿಪೂಜೆ : ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಸಾನ್ನಿಧ್ಯ : ಮಂಟೇಸ್ವಾಮಿ ಮಠದ ಪೀಠಾಧಿಪತಿ ಶ್ರೀ ವರ್ಚಸ್ವೀ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಉಪಸ್ಥಿತರು : ಶ್ರೀ ಜ್ಞಾನಾನಂದ ಚೆನ್ನರಾಜೇ ಅರಸ್, ಶ್ರೀ ಬಿ.ಎಸ್. ವರುಣ್‌ಲಿಂಗರಾಜೇ ಅರಸ್, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಡಾ. ಡಿ. ತಿಮ್ಮಯ್ಯ, ಮರಿತಿಬ್ಬೇಗೌಡ, ಟಿ.ಎಸ್. ಶ್ರೀವತ್ಸ, ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ನಗರ ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಅಧ್ಯಕ್ಷತೆ : ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್.ಎಂ.ಟಿ. ಲಿಂಗರಾಜೇ ಅರಸ್, ಸ್ಥಳ:ನಂ. 47/ಎ, ಎಂ.ಜಿ. ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ಹತ್ತಿರ, ಬೆಳಗ್ಗೆ 10.30ಕ್ಕೆ.

■ **ಥಿಯೇಟರ್ ತತ್ಕಾಲ್ ಬುಕ್ಸ್ ಮತ್ತು ಭಿನ್ನಷಡ್ಜ :** ಪಾತ್ರ ಪ್ರವೇಶ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು : ಪ್ರಕಾಶ್ ರೈ, ಹೆಚ್.ಎಸ್. ಉಮೇಶ್, ಬಿ.ಆರ್. ವೆಂಕಟರಮಣ ಐತಾಳ್, ಸತೀಶ್ ನೀನಾಸಂ, ಶ್ರೀಧರ ಹೆಗ್ಗೋಡು, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಜೆ 5.30 ರಿಂದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ ಅಂಗವಾಗಿ 28ನೇ ಸಂಗೀತ ಸಮ್ಮೇಳನ, ಬೆಳಗ್ಗೆ 10ಕ್ಕೆ ಡಾ.ಆರ್.ಎನ್. ಶ್ರೀಲತಾ ಅವರ ಶಿಷ್ಯ ವೃಂದದವರಿಂದ ಸಂಗೀತಾಂಜಲಿ, ವಿದ್ವತ್ ಗೋಷ್ಠಿ, ಎ.ವಿ. ಆನಂದ್ ಅವರಿಂದ ಕಲಾಜೀವನದ ವಿಶೇಷ ಅನುಭವಗಳು-ಪ್ರಾತ್ಯಕ್ಷಿಕೆ, ಡಾ. ಪ್ರಿಯಾಂಕ ವೆಂಕಟೇಶ್ ಅವರಿಂದ ವೆಸ್ಟರ್ನ್ ಮ್ಯೂಸಿಕ್ ಫ್ಯೂಷನ್, ಜಿ.ಕೆ. ಮನಮೋಹನ್ ಅವರಿಂದ ಕರ್ನಾಟಕ ಸಂಗೀತದಲ್ಲಿ ದಾಟು ಪ್ರಯೋಗದ ವಿಶೇಷತೆ- ಪ್ರಾತ್ಯಕ್ಷಿಕೆ, ಸಂಜೆ 5.30ಕ್ಕೆ ಸಂಗೀತ ಕಾರ್ಯಕ್ರಮ, ಸುಮುಖ್ ಮತ್ತು ರತ್ನರೇಜ ಅವರಿಂದ ದ್ವಂದ್ವ ವಯೋಲಿನ್, ನಂದನ್ ಕಶ್ಯಪ್-ಮೃದಂಗ, ಸಂಜೆ 6.30ಕ್ಕೆ ಶ್ರೀರಂಜನಿ ಸಂತಾನ ಗೋಪಾಲನ್ ಅವರಿಂದ ಗಾಯನ, ದೀಪಿಕಾ ವೆಂಕಟರಾಮನ್-ವಯೋಲಿನ್, ಕಿಶೋರ್ ರಮೇಶ್-ಮೃದಂಗ, ಸುನಾದ್ ಅನೂರ್-ಖಂಜಿರ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣ, ಸರಸ್ವತಿಪುರಂ.

■ **ಶ್ರೀ ಗುರು ಪುಟ್ಟರಾಜ ಗವಾಯಿ ಸಂಗೀತ ಸಭಾ :** ಪದ್ಮಭೂಷಣ ಡಾ. ಪಂಡಿತ್ ಪುಟ್ಟರಾಜ ಗವಾಯಿಗಳವರ 13ನೇ ಪುಣ್ಯಸ್ಮರಣೆ ಅಂಗವಾಗಿ ಭೈರವದಿಂದ ಭೈರವಿ ಹಾಗೂ ಪುಟ್ಟಶ್ರೀ ಸಮ್ಮಾನ, ಗುರು ವಚನ ಪ್ರಭ ಗಾನಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಸಂಗೀತೋತ್ಸವ, ಬೆಳಗ್ಗೆ 9 ರಿಂದ ಭೈರವ ರಾಗದಿಂದ ಪ್ರಾರಂಭ, ಸಿದ್ದ ರಾಯಭಾಗ ಅವರಿಂದ ಗಾಯನ,ಬ ಜಗದೀಶ್ ಮೇಲಿನಮಠ- ಹಾರ್ಮೋನಿಯಂ, ಸಂತೋಷ್ ಹೂಗಾರ-ತಬಲಾ, ಬೆಳಗ್ಗೆ 10ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಮೈಸೂರು ಮಹಾನಗರ ಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್, ಪುಟ್ಟಶ್ರೀ ಸಮ್ಮಾನ ಪ್ರಧಾನ : ಮಂಗಳೂರು ಗಣೇಶ್ ಬೀಡಿ ಮಾಲೀಕರಾದ ಜಗನ್ನಾಥ್ ಶೆಣೈ, ಪುಟ್ಟಶ್ರೀ ಸಮ್ಮಾನ ಪುರಸ್ಕೃತರು : ಕು. ಪ್ರದ್ಯುಮ್ನ ಕರ್ಪೂರ, ಮುಖ್ಯ ಅತಿಥಿಗಳು : ಶಿಕ್ಷಣ ತಜ್ಞ ಮಲ್ಲಿಕಾರ್ಜುನ ಚಿಕ್ಕಮಠ, ಬಹುಮಾನ ವಿತರಣೆ : ಶ್ರೀ ಶಂಕರ ಹಲಗತ್ತಿ, ಸ್ಥಳ: ಗಾನಭಾರತೀ (ರಮಾಗೋವಿಂದ ಕಲಾ ವೇದಿಕೆ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ರಂಗಾಯಣ :** ಸುಬ್ಬಯ್ಯನಾಯ್ಡು ಹಾಗೂ ಪದ್ಮಶ್ರೀ ನಾಗರತ್ನಮ್ಮ ಹವ್ಯಾಸಿ ರಂಗ ತರಬೇತಿ ಶಿಬಿರಾರ್ಥಿಗಳಿಂದ ನಾಯಿಕತೆ ನಾಟಕ ಪ್ರದರ್ಶನ, ನಿರ್ದೇಶನ : ಸಂತೋಷ್ ಕುಮಾರ್ ಕುಸನೂರ, ರಚನೆ : ಡಾ. ಚಂದ್ರಶೇಖರ ಕಂಬಾರ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ: ಸೈಬರ್ ಮಿತ್ರ-ಸೈಬರ್ ಸುರಕ್ಷೆ -ವಾರದ ಮಾತು, ಪ್ರಸ್ತುತಿ-ಸತೀಶ್ ವಿ., 6.40 ಪದ ಸಂಸ್ಕೃತಿ, ಪ್ರಸ್ತುತಿ- ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 9.05 ವಿಶ್ವ ಅಂಗವಿಕಲರ ದಿನದ ಸಂದರ್ಭದಲ್ಲಿ "ಅಂಗವಿಕಲತೆಯ ಲಕ್ಷಣ ಮತ್ತು ಪ್ರಮಾಣ" ಕುರಿತು ಡಾ. ಜಯಶ್ರೀ ಶಾನಬಾಳ ಅವರೊಂದಿಗೆ ಸಂದರ್ಶನ. ಸಂದರ್ಶಕರು ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ-ಮಕ್ಕಳಲ್ಲಿ ಭಾವನಾತ್ಮಕ ಒತ್ತಡದಿಂದ ಉಂಟಾಗುವ ತೊಂದರೆಗಳು, ನಿರ್ವಹಣೆ ಮತ್ತು ಪರಿಹಾರ ಕುರಿತು ಡಾ. ರೇಖಾ ವಿ ಭಟ್ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ-ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ-ಪ್ರತಿಭಾ ಪಲ್ಲವ-ಮಳವಳ್ಳಿ ತಾಲೂಕು ನಂಜೇಗೌಡನದೊಡ್ಡಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ-ಎ.ಆರ್. ರಾಗಿಣಿ, 12.45 ಜನಪದಸಂಗೀತ, 1.20 ಭಾವಗೀತೆ-ಮೈಸೂರು ಹರ್ಷದೀಪ್, 4.00 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ- ಭೀಷ್ಮ ಪ್ರತಿಜ್ಞೆ, ಪ್ರಸ್ತುತಿ- ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿ ಮತ್ತು ವೃಂದದವರು, 6.50 ಕೃಷಿರಂಗ -ಸುಸ್ಥಿರ ಹೈನುಗಾರಿಕೆ ಕುರಿತು ರವಿರಾಜ್ ಎನ್.ಶೆಟ್ಟಿ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ-ಬಾನುಲಿ ಸರಣಿ, ಭಾಗವಹಿಸುವವರು ಮೈಸೂರಿನ ಚೇತನಾ ಮಹಿಳಾ ಸಮಾಜದ ಡಾ.ಜಯಶ್ರೀ ಬೆಂಗೇರಿ ನಡೆಸಿಕೊಡುತ್ತಾರೆ-ದಿವಾಕರ ಹೆಗಡೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಅನಿಲ್ ಚೌಧುರಿ-ಪಖವಾಜ್, ಪಂಡಿತ್ ನಾಯನ್ ಘೋಶ್ - ತಬಲಾ

ಲಾ ಗೈಡ್ ಕಾನೂನು ಮಾಸ ಪತ್ರಿಕೆಯ 2024ರ ಕ್ಯಾಲೆಂಡರ್, ಡೈರಿ ಬಿಡುಗಡೆ

ಪತ್ರಿಕೆಯಡಿ ಕಾನೂನು ಅರಿವು ಲೇಖನ, ಕಾನೂನು ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ತರಬೇತಿ ಕಲ್ಪಿಸುವ ಬಗ್ಗೆ ಗಣ್ಯರ ಪಶಂಸೆ



ಮೈಸೂರಿನ ಮೆಟ್ರೋಪೋಲ್ ಹೋಟೆಲ್‌ನಲ್ಲಿ ಶನಿವಾರ 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ 2024ರ ಕ್ಯಾಲೆಂಡರ್, ಡೈರಿ ಹಾಗೂ ಪತ್ರಿಕೆಯ ವೆಬ್ ಆವೃತ್ತಿ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು. ಈ ವೇಳೆ ವೇದಿಕೆಯಲ್ಲಿ (ಎಡದಿಂದ) ಸಿಎಫ್‌ಟಿಆರ್‌ಐ ವಿಜ್ಞಾನಿ ಶೈಲಜಾ ಧರ್ಮೇಶ್, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸೀನಿಯರ್ ಡೈರೆಕ್ಟರ್ ಕೆ.ವೆಂಕಟೇಶ್‌ಮೂರ್ತಿ, ಶಾಸಕ ಜಿ.ಟಿ.ದೇವೇಗೌಡ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಸಿ.ಜಿ.ಹುನಗುಂದ, ನಿವೃತ್ತ ಪೊಲೀಸ್ ಮಹಾ ನಿರೀಕ್ಷಕ ಡಿ.ಎನ್.ಮುನಿಕೃಷ್ಣ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಅವರನ್ನು ಕಾಣಬಹುದು.



'ಲಾ ಗೈಡ್' ಕ್ಯಾಲೆಂಡರ್, ಡೈರಿ ಬಿಡುಗಡೆ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ (ಎಡದಿಂದ) ಹಿರಿಯ ವಕೀಲ ಮನೋಹರ್, ಸಿಎಫ್‌ಟಿಆರ್‌ಐ ವಿಜ್ಞಾನಿ ಶೈಲಜಾ ಧರ್ಮೇಶ್, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸೀನಿಯರ್ ಡೈರೆಕ್ಟರ್ ಕೆ.ವೆಂಕಟೇಶ್‌ಮೂರ್ತಿ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ವಕೀಲರಾದ ಸಿ.ಬಸವರಾಜ್, ಹೆಚ್.ವಿ.ಶ್ರೀನಾಥ್, ಪುಟ್ಟಸ್ವಾಮಿ ಹಾಗೂ ಹಲವು ಗಣ್ಯರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಡಿ.2(ಬಿಎಲ್‌ಯು)– ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಸಾರಥ್ಯದ ಮೈಸೂರಿನ 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ 2024 ರ ಕ್ಯಾಲೆಂಡರ್, ಡೈರಿ ಬಿಡುಗಡೆ ಹಾಗೂ ಪತ್ರಿಕೆಯ ವೆಬ್ ಆವೃತ್ತಿ ಲೋಕಾರ್ಪಣೆ ಕಾರ್ಯಕ್ರಮ ಇಂದು ಮೈಸೂರಿನ ಮೆಟ್ರೋ ಪೋಲ್ ಹೋಟೆಲ್‌ನಲ್ಲಿ ನಡೆಯಿತು.

ಅರ್ಥಪೂರ್ಣ ಕಾರ್ಯಕ್ರಮಕ್ಕೆ ರಾಜಕೀಯ ಮುಖಂಡರು, ನಿವೃತ್ತ ನ್ಯಾಯಾಧೀಶರು, ನಿವೃತ್ತ ಐಪಿಎಸ್ ಅಧಿಕಾರಿಗಳು, ವಕೀಲರು, ಇತರ ಪತ್ರಕರ್ತರು ಸೇರಿದಂತೆ ಹಲವು ಕ್ಷೇತ್ರಗಳ ಗಣ್ಯರು ಪಾಲ್ಗೊಂಡಿದ್ದರು.

ಲಾ ಗೈಡ್ ಕ್ಯಾಲೆಂಡರ್, ಡೈರಿಯನ್ನು ವೇದಿಕೆಯಲ್ಲಿ ಉಪಸ್ಥಿತರಿದ್ದ ನಿವೃತ್ತ ಪೊಲೀಸ್ ಮಹಾ ನಿರೀಕ್ಷಕ ಡಿ.ಎನ್.ಮುನಿಕೃಷ್ಣ, ಶಾಸಕ ಜಿ.ಟಿ.ದೇವೇಗೌಡ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ, ನಿವೃತ್ತ ಜಿಲ್ಲಾ ನ್ಯಾಯಾಧೀಶ ಸಿ.ಜಿ.ಹುನಗುಂದ, ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸೀನಿಯರ್ ಡೈರೆಕ್ಟರ್ ಕೆ.ವೆಂಕಟೇಶ್ ಮೂರ್ತಿ, ಸಿಎಫ್‌ಟಿಆರ್ ಐ ವಿಜ್ಞಾನಿ ಶೈಲಜಾ ಧರ್ಮೇಶ್, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಬಿಡುಗಡೆ ಮಾಡಿದರು. ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, 'ಲಾ ಗೈಡ್' ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್. ವೆಂಕಟೇಶ್ ಉಪಸ್ಥಿತರಿದ್ದರು.

ತರುವಾಯ ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಪರಿಚಯಿಸಿರುವ ವೆಬ್ ಆವೃತ್ತಿಯನ್ನು ಡೇಟಾ ಸೆಕ್ಯುರಿಟಿ ಕೌನ್ಸಿಲ್ ಆಫ್ ಇಂಡಿಯಾದ ಸೀನಿಯರ್ ಡೈರೆಕ್ಟರ್ ಕೆ.ವೆಂಕಟೇಶ್‌ಮೂರ್ತಿ ಲೋಕಾರ್ಪಣೆಗೊಳಿಸಿದರು. ಈ ವೇಳೆ ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಅವರು ಪತ್ರಿಕೆ ಕುರಿತಂತೆ ಕೆಲವು ಪ್ರಮುಖ ಮಾಹಿತಿ ನೀಡಿದರು. 'ಲಾ ಗೈಡ್' ಮಾಸ ಪತ್ರಿಕೆಯು ನವೆಂಬರ್ 24, 2000ರಲ್ಲಿ ಆರಂಭವಾಯಿತು. ಅಂದಿನಿಂದ ಇಲ್ಲಿ ತನಕ ಕಾನೂನಿಗೆ ಸಂಬಂಧಿಸಿದಂತೆ ಪತ್ರಿಕೆ ಹಲವು ಮಹತ್ವದ ಲೇಖನಗಳನ್ನು ಪ್ರಕಟಿಸಿದೆ ಎಂದರು.

ಅಲ್ಲದೆ ಜೆಎಸ್‌ಎಸ್ ಕಾನೂನು ಕಾಲೇಜು ಸಹಯೋಗದೊಂದಿಗೆ ಮುನ್ಸಿಫ್ ನ್ಯಾಯಾಧೀಶರು, ಕಾನೂನು ಸಲಹೆಗಾರರು ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಕೀಲ ಪದವೀಧರರಿಗೆ ತರಬೇತಿ ನೀಡಲಾಗುತ್ತಿದೆ. ಹೈಕೋರ್ಟ್ ನ್ಯಾಯಾಧೀಶರು ಸೇರಿದಂತೆ ಹಿರಿಯ ವಕೀಲರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ, ಅಭ್ಯರ್ಥಿಗಳಿಗೆ ಮಾಹಿತಿ ನೀಡಿದ್ದಾರೆ ಎಂದರು.

'ಲಾ ಗೈಡ್' ಪತ್ರಿಕೆಯು ಮೊದಲ ಬಾರಿಗೆ ವೆಬ್ ಆವೃತ್ತಿ ಪರಿಚಯಿಸಿದ್ದು, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ತೀರ್ಪುಗಳನ್ನು ಕನ್ನಡಕ್ಕೆ ಅನುವಾದಿಸಿ ಈ ವೆಬ್ ಆವೃತ್ತಿಯಲ್ಲಿ ಪ್ರಕಟಿಸಲಾಗುತ್ತಿದೆ ಎಂದರು.

ಇಷ್ಟೆಲ್ಲಾ ಕಾರ್ಯವನ್ನು ಶ್ರಮವಹಿಸಿ ಮಾಡುತ್ತಿರುವ 'ಲಾ ಗೈಡ್' ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರ ಕಾರ್ಯವೈಖರಿ ಬಗ್ಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಗಣ್ಯರು ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರು ವಿಶ್ವ ವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಾಯಿತು. ತರುವಾಯ ಸಿಎಫ್‌ಟಿಆರ್‌ಐ ವಿಜ್ಞಾನಿ ಶೈಲಜಾ ಧರ್ಮೇಶ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಹಿರಿಯ ವಕೀಲರಾದ ಹೆಚ್.ವಿ.ಶ್ರೀನಾಥ್, ಸಿ.ಬಸವರಾಜ್, ಮನೋಹರ್, ಪುಟ್ಟಸ್ವಾಮಿ ಅವರನ್ನೂ ಸನ್ಮಾನಿಸಲಾಯಿತು.


ವಕೀಲರಿಗೆ ಡೈರಿ, ಕ್ಯಾಲೆಂಡರ್ ನಿರ್ಣಾಯಕ; ಅವಿಭಾಜ್ಯ ಅಂಗ: ಕೆಬಿಜಿ

ಮೈಸೂರು, ಡಿ.2(ಬಿಎಲ್‌ಯು)– ಪ್ರತಿಯೊಬ್ಬ ವಕೀಲರಿಗೂ ಡೈರಿ ಮತ್ತು ಕ್ಯಾಲೆಂಡರ್ ನಿರ್ಣಾಯಕ ಹಾಗೂ ಅವಿಭಾಜ್ಯ ಅಂಗ ಎಂದು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ (ಕೆಬಿಜಿ) ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ತಮ್ಮ ವೃತ್ತಿ ಜೀವನದ ಆರಂಭದ ವರ್ಷಗಳಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದ ಅನುಭವವನ್ನು ಈ ವೇಳೆ ಹಂಚಿಕೊಂಡರು. ತರುವಾಯ ವಕೀಲರಿಗೆ ಡೈರಿ ಹಾಗೂ ಕ್ಯಾಲೆಂಡರ್ ಎಷ್ಟು ಮಹತ್ವವಿದೆ ಎಂದು ವಿವರಿಸಿದರು.

ಡೈರಿ ಹಾಗೂ ಕ್ಯಾಲೆಂಡರ್ ಅನ್ನು ಹೊಸ ವರ್ಷಕ್ಕೆ ಮುನ್ನವೇ ಹೊರ ತಂದಿರುವ ಲಾ ಗೈಡ್ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಅವರನ್ನು ಈ ಸಂದರ್ಭದಲ್ಲಿ ಪ್ರಶಂಸಿಸಿದರು.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಡಿ.ಎನ್.ಮುನಿಕೃಷ್ಣ ಅವರು ವೃತ್ತಿಯ ಕಾರಣದಿಂದ ಅದ್ಭುತ ವ್ಯಕ್ತಿ. ಅವರ ಹೆಸರು ಮುನಿಕೃಷ್ಣ ಅಂತ ಇದ್ದರೂ ಯಾವತ್ತೂ ಅವರು ಕೋಪ–ತಾಪ ತೋರಲಿಲ್ಲ, ಯಾವಾಗಲೂ ಶಾಂತಚಿತ್ತರಾಗಿರುತ್ತಿದ್ದರು. ಎಸ್ಪಿಯಾಗಿದ್ದಾಗ ಮೈಸೂರಲ್ಲಿ ಎರಡು ಸಂದರ್ಭದಲ್ಲಿ ಅವರ ಮಹತ್ತರ ಕಾರ್ಯವನ್ನು ಈ ವೇಳೆ ಡಾ. ಕೆ.ಬಿ. ಗಣಪತಿ ಅವರು ಪ್ರಸ್ತಾಪಿಸಿದರು.



ಡಾ.ಕೆ.ಬಿ.ಗಣಪತಿ

ಒಂದು, ಮೈಸೂರಿನಲ್ಲಿ 80ರ ದಶಕದಲ್ಲಿ ಉಂಟಾದ ಕೋಮು–ಗಲಭೆ ವೇಳೆ ಮುನಿಕೃಷ್ಣ ಅವರು ಅದನ್ನು ಬಹಳ ಬುದ್ಧಿವಂತಿಕೆಯಿಂದ ನಿಯಂತ್ರಿಸಿದರು. ತಮಗಿರುವ ಸಾಮಾನ್ಯ ಜ್ಞಾನ ಹಾಗೂ ಅನುಭವದಿಂದ ಬೇಗ ಶಮನಗೊಳಿಸಿದರು ಎಂದು ಮುನಿಕೃಷ್ಣರ ಕಾರ್ಯವೈಖರಿ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಮತ್ತೊಂದು, ಮೈಸೂರಿನಲ್ಲಿ ಕುಸ್ತಿ ಕಲೆಯನ್ನು ಪೋಷಿಸಿ, ಬೆಳೆಸಿ, ಕುಸ್ತಿಯ ಪ್ರಮುಖ ತಾಣವಾಗಿಸಿದ ಕೀರ್ತಿ ಮುನಿಕೃಷ್ಣ ಅವರಿಗೆ ಸಲ್ಲುತ್ತದೆ. ಕುಸ್ತಿಯ ಹಲವು ಸಂಸ್ಥೆ ಕಟ್ಟಿ ಬೆಳೆಸಿ, ಪ್ರೋತ್ಸಾಹಿಸಿದರು. ಕುಸ್ತಿ ಕಲೆಯನ್ನು ಪುನರುಜ್ಜೀವನಗೊಳಿಸಿದರು. ಪೊಲೀಸ್ ಅಧಿಕಾರಿಯಾಗಿದ್ದರೂ ಮಾನವೀಯ ನೆಲೆಯಲ್ಲಿ ಬಹಳಷ್ಟು ಜನರನ್ನು ಒಳ್ಳೆಯ ದಾರಿಗೆ ಕರೆತಂದರು ಎಂದು ಕೊಂಡಾಡಿದರು.

ಪ್ರತಿಯೊಬ್ಬರಿಗೂ ಕನಸುಗಳಿರುತ್ತವೆ. ಆದರೆ ಕನಸು ನನಸಾಗಲು ಅದೃಷ್ಟವಿದ್ದರೂ ದೃಢ ಸಂಕಲ್ಪ, ಸಮರ್ಪಣಾ ಮನೋಭಾವ ಹಾಗೂ ಪ್ರಯತ್ನ ಮಾಡಬೇಕು. ಆಗ ಮಾತ್ರ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಬೆಂಗಳೂರಿನಿಂದ ಮುಂಬೈಗೆ ಹೋಗಿ, ತರುವಾಯ ಮೈಸೂರಿಗೆ ಬಂದು 1978ರಲ್ಲಿ 'ಸ್ಟಾರ್ ಆಫ್ ಮೈಸೂರ್' ಆರಂಭಿಸಿ ಮೈಸೂರು ತಮ್ಮ ಕರ್ಮ ಭೂಮಿಯಾಗಿದ್ದರ ಬಗ್ಗೆ ಇದೇ ವೇಳೆ ಡಾ.ಕೆ.ಬಿ.ಗಣಪತಿ ಅವರು ಪ್ರಸ್ತಾಪಿಸಿದರು.


ಮಾನವೀಯ ಮೌಲ್ಯ ಮರೆಯಾಗಿ, ಕಪಟ, ಕುಟಿಲತೆ ಹೆಚ್ಚುತ್ತಿದೆ: ಮುನಿಕೃಷ್ಣ

ಮೈಸೂರು, ಡಿ.2(ಬಿಎಲ್‌ಯು)– ಇತ್ತೀಚೆಗೆ ಮಾನವೀಯ ಮೌಲ್ಯ ಮರೆಯಾಗುತ್ತಿದೆ. ಎಲ್ಲೆಡೆ ಕಪಟ, ಕುಟಿಲತೆ ಹೆಚ್ಚಾಗುತ್ತಿದೆ ಎಂದು ನಿವೃತ್ತ ಪೊಲೀಸ್ ಮಹಾ ನಿರೀಕ್ಷಕ ಡಿ.ಎನ್.ಮುನಿಕೃಷ್ಣ ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜಕಾರಣಿಗಳಿಗೆ ಆಲೋಚನಾ ಶಕ್ತಿ ಬೇಕು. ಆದರೆ ಈಗ ಅಧಿಕಾರವೇ ಮುಖ್ಯ ಎಂಬ ಮನೋಭಾವ ಹೊಂದಿದ್ದಾರೆ. ಜೊತೆಗೆ ಪೂರ್ವಾಗ್ರಹಪೀಡಿತರಾಗಿದ್ದಾರೆ. ಇಂತಹ ಸಂಗತಿಗಳನ್ನು ನೋಡಿದಾಗ ಮನಸಿಗೆ ತುಂಬಾ ನೋವಾಗುತ್ತದೆ ಎಂದರು.

ತಂತ್ರಜ್ಞಾನ, ವಿಜ್ಞಾನ ಕ್ರಾಂತಿಯಲ್ಲಿ ಬಹಳಷ್ಟು ಬೆಳವಣಿಗೆಗಳಾಗುತ್ತಿವೆ. ಆದರೆ ಬದಲಾಗುತ್ತಿರುವ ಪರಿಸ್ಥಿತಿಗೆ ತಕ್ಕಂತೆ ಸಾಮಾನ್ಯ ಜನರು ಹೊಂದಿಕೊಳ್ಳುವುದು ಕಷ್ಟದ ಸಂಗತಿಯಾಗಿದೆ ಎಂದರು.

ಮೈಸೂರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ. ಮೈಸೂರಿನಲ್ಲಿ ಸೇವೆ ಸಲ್ಲಿಸಿರುವುದು ನನಗೆ ಸಂತಸದ ಸಂಗತಿ. ಇಲ್ಲಿಗೆ ಬಂದರೆ ನನ್ನ ತವರು ಮನೆಗೆ ಬಂದಂತಹ ಅನುಭವ ಆಗುತ್ತದೆ. ಮೈಸೂರಿನ ಜೊತೆಗೆ ನನಗೆ ಭಾವನಾತ್ಮಕ ಸಂಬಂಧ ವಿದೆ ಎಂದರು. ಮೈಸೂರು ಕುಸ್ತಿಗೆ ಹೆಸರುವಾಸಿಯಾಗಿದೆ ಅಂದು ಪ್ರಖ್ಯಾತಿ ಹೊಂದಿದ ಬಹಳಷ್ಟು ಪ್ರಬುದ್ಧ ಕುಸ್ತಿ ಪಟುಗಳು ಮೈಸೂರಿನಲ್ಲಿದ್ದರು. ರಕ್ತ ಸಂಬಂಧಕ್ಕಿಂತ ಹೆಚ್ಚಾಗಿ ತಮ್ಮ ಶಿಷ್ಯರನ್ನು ಬೆಳೆಸಿ, ಪೋಷಿಸುತ್ತಿದ್ದರು. ಆದರೆ ಅವರೆಲ್ಲಾ ಈಗ ಇಲ್ಲ ಎಂಬುದು ನನ್ನ ಮನಸಿಗೆ ತುಂಬಾ ನೋವಾಗುವಂತಹ ವಿಚಾರ. ಅಂದಿನ ಪ್ರಸಿದ್ಧ ಕುಸ್ತಿ ಪಟುಗಳ ಹೆಸರು ಹೇಳುತ್ತಾ ಅವರ ಕುಸ್ತಿಯ ಕಲಾವಂತಿಕೆಯನ್ನು ಪ್ರಶಂಸಿಸಿದರು.




ಡಿ.ಎನ್.ಮುನಿಕೃಷ್ಣ

ವೈದ್ಯರಂತಾಗಬೇಡಿ: ವೈದ್ಯರಿಗೆ ಸ್ಟೆತಾಸ್ಕೋಪ್ ಎಷ್ಟು ಮುಖ್ಯವೋ ವಕೀಲರಿಗೆ ಡೈರಿ ಹಾಗೂ ಕ್ಯಾಲೆಂಡರ್ ಅಷ್ಟೇ ಪ್ರಾಮುಖ್ಯವಾಗಿರುತ್ತದೆ. ಆದರೆ ವೈದ್ಯರು ಈಗ ಸ್ಟೆತಾಸ್ಕೋಪ್ ಇಲ್ಲದೇ, ನಾಡಿಯನ್ನು ನೋಡದೆ ಕೇವಲ ಲ್ಯಾಬ್ ರಿಪೋರ್ಟ್ ನೋಡಿ ಔಷಧ ಕೊಡುತ್ತಾರೆ. ವಕೀಲರು ವೈದ್ಯರಂತಾಗದೇ ನ್ಯಾಯಾಲಯದ ಪ್ರಕರಣಗಳ ಮಾಹಿತಿ ಇರುವ ಡೈರಿಯನ್ನು ಸದಾ ನೋಡಬೇಕು ಎಂದು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಸಿ.ಜಿ. ಹುನಗುಂದ ಸಲಹೆ ನೀಡಿದರು.

ಉತ್ತಮ ತರಬೇತಿ: ಇದೇ ವೇಳೆ ಮಾತನಾಡಿದ ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಕಾನೂನು ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ನ್ಯಾಯಾಧೀಶರು, ಕಾನೂನು ಸಲಹೆಗಾರರು ಹಾಗೂ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಲಾ ಗೈಡ್ ಸಂಸ್ಥೆ ಉತ್ತಮ ತರಬೇತಿ ನೀಡುತ್ತಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಡಾ.ಕೆ.ಬಿ.ಗಣಪತಿ ಅವರ ಪತ್ರಿಕೋದ್ಯಮ ಸೇವೆ ನಿರಂತರವಾಗಿರಬೇಕು: ಜಿಟಿಡಿ

ಮೈಸೂರು,ಡಿ.2(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾ ನಿಲಯದಿಂದ ಗೌರವ ಡಾಕ್ಟರೇಟ್ ಪಡೆದಿರುವ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ ಪತ್ರಿಕೋದ್ಯಮ ಸೇವೆ ನಿರಂತರವಾಗಿರಬೇಕು ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಆಶಿಸಿದರು.



ಜಿ.ಟಿ.ದೇವೇಗೌಡ

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೆ.ಬಿ.ಗಣಪತಿ ಅವರಂತಹ ಸಾಧಕರಿಗೆ ಪ್ರಶಸ್ತಿ ನೀಡುವ ಮೂಲಕ ಈ ನಾಡು ಹಾಗೂ ಭಾಷೆ ಎತ್ತರಕ್ಕೆ ಹೋಗಿದೆ ಎಂದು ಅಭಿಪ್ರಾಯಪಟ್ಟರು.

ಡಾ.ಗಣಪತಿ ಅವರಲ್ಲಿ ರಾಜಕಳೆ ಇದೆ. ಇಂದಿಗೂ ಕೂಡ ಡಾ.ಗಣಪತಿ ಅವರು ಪ್ರತಿದಿನ ಉತ್ಸಾಹದಿಂದ ಕಚೇರಿಗೆ ಹೋಗಿ ಹಲವು ಅಂಕಣಗಳನ್ನು ಬರೆಯುತ್ತಾರೆ. ಈ ಮೂಲಕ ಯಶಸ್ವಿ ಹಾದಿಯಲ್ಲಿ ಸಾಗಿಬಂದಿರುವ ಡಾ.ಗಣಪತಿ ಅವರ 'ಮೈಸೂರು ಮಿತ್ರ' ಐದು ಜಿಲ್ಲೆ ಮಾತ್ರವಲ್ಲದೆ ಇಡೀ ಕರ್ನಾಟಕ ರಾಜ್ಯದಲ್ಲಿ ಮನೆ ಮಾತಾಗಿದೆ ಎಂದು ಜಿ.ಟಿ. ದೇವೇಗೌಡರು ಪ್ರಶಂಸೆ ವ್ಯಕ್ತ ಪಡಿಸಿದರು.

ಡಾ.ಗಣಪತಿ ಅವರು ಆರಂಭಿಸಿದ ಇಂಗ್ಲಿಷ್ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್' ಕೂಡ ಪ್ರಸಿದ್ಧಿ ಹೊಂದಿದೆ. ಈ ಪತ್ರಿಕೆ ಯನ್ನು ಕೂಡ ಪ್ರತಿಯೊಬ್ಬರು ಓದುತ್ತಾರೆ. ಪತ್ರಿಕೋದ್ಯಮದಲ್ಲಿ ಇಷ್ಟೊಂದು ಸಾಧನೆ ಮಾಡಿರುವ ಡಾ.ಗಣಪತಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿರುವುದು ಸಂತೋಷದ ಸಂಗತಿ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಎಸ್ಪಿಯಾಗಿದ್ದ ಮುನಿಕೃಷ್ಣ ಅವರು ಮೈಸೂರಿನಲ್ಲಿ ಕುಸ್ತಿಯನ್ನು ಉತ್ತೇಜಿಸಿದರು. ಇಲ್ಲಿ ಸೇವೆ ಸಲ್ಲಿಸಿ 40 ವರ್ಷ ಕಳೆದರೂ ಅವರ ಕೊಡುಗೆ ಇಂದಿಗೂ ನೆನಪಿನಲ್ಲಿ ಉಳಿದಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ತಿಳಿಸಿದರು.

ಮೈಸೂರಲ್ಲಿ ಗಾಯನೋತ್ಸವ; ಅಭಿನಂದನಾ ಸಮಾರಂಭ



ಮೈಸೂರಿನ ಕಸಾಪ ಸಭಾಂಗಣದಲ್ಲಿ ಶನಿವಾರ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ ನಡೆದ ಗಾಯನೋತ್ಸವದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಹಾಗೂ ನಿರ್ಮಾಪಕ ಡಾ.ಬಿ.ಆರ್.ಚಂದ್ರಶೇಖರ್ ಅವರನ್ನು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಸನ್ಮಾನಿಸಿ, ಅಭಿನಂದಿಸಿದರು.

ಮೈಸೂರು, ಡಿ.2(ಎಂಕೆ)– ಮೈಸೂರಿನ ವಿಜಯನಗರ 1ನೇ ಹಂತದಲ್ಲಿರುವ ಜಿಲ್ಲಾ ಕಸಾಪ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಗಾಯನೋತ್ಸವ ಹಾಗೂ ಅಭಿನಂದನಾ ಸಮಾರಂಭ ನಡೆಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕನ್ನಡ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿ, ಕನ್ನಡ ಚಿತ್ರಗೀತೆಗಳಲ್ಲಿ ಕನ್ನಡ ನಾಡು–ನುಡಿಯ ಹಿರಿಮೆ–ಗರಿಮೆ ತಿಳಿಸುವ ಅರ್ಥಗರ್ಭಿತ ಕೆಲಸವಾಗಿದೆ. ಪಿ.ಕಾಳಿಂಗರಾವ್, ಹೆಚ್.ಆರ್.ಲೀಲಾವತಿ, ಹಂಸಲೇಖ ಸೇರಿದಂತೆ ಹಲವು ನಾಡಭಕ್ತಿಯ ಪರಂಪರೆಯನ್ನು ತಮ್ಮ ಹಾಡುಗಳ ಮೂಲಕ ಜನಮಾನಸಗೊಳಿಸಿದ್ದಾರೆ. ಕನ್ನಡ ಹಾಡುಗಳನ್ನು ಕೇಳುತ್ತಿದ್ದರೆ ಕನ್ನಡಾಭಿಮಾನಿ ಇನ್ನಷ್ಟು ಹೆಚ್ಚಾಗುತ್ತದೆ ಎಂದರು.

ಬಳಿಕ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಹಾಗೂ ನಿರ್ಮಾಪಕ ಡಾ.ಬಿ.ಆರ್.ಚಂದ್ರಶೇಖರ್ ಅವರನ್ನು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಸನ್ಮಾನಿಸಿ ಅಭಿನಂದಿಸಿದರು. ನಂತರ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ನೇತೃತ್ವದಲ್ಲಿ ಕನ್ನಡ ನಾಡು–ನುಡಿ ಕುರಿತ ಗಾಯನೋತ್ಸವ ನಡೆಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸಮಾಜ ಸೇವಕ ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾ ಎನ್.ಬೆಟ್ಟೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕಾರು ಡಿಕ್ಕಿ: ಪಾದಚಾರಿ ಸಾವು

ಮೈಸೂರು, ಡಿ.2(ಎಂಕೆ)– ರಸ್ತೆ ದಾಟುತ್ತಿದ್ದಾಗ ಕಾರು ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಇಎಸ್‌ಐ ಆಸ್ಪತ್ರೆ ಎದುರು ನಡೆದಿದೆ. ಕೆಆರ್‌ಎಸ್ ನಿವಾಸಿ ಚಿಕ್ಕನರಸಿಂಹ (45) ಮೃತಪಟ್ಟವರು. ಶುಕ್ರವಾರ ಬೆಳಗ್ಗೆ 10.30ರ ವೇಳೆ ರಸ್ತೆ ದಾಟುತ್ತಿದ್ದಾಗ ಕೆಆರ್‌ಎಸ್ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಕೂಡಲೇ ಗಂಭೀರವಾಗಿ ಗಾಯಗೊಂಡಿದ್ದ ಚಿಕ್ಕನರಸಿಂಹ ಅವರನ್ನು ಕಾರು ಚಾಲಕ ಹತ್ತಿರದ ಟ್ರಾಮಾಕೇರ್ ಸೆಂಟರ್‌ಗೆ ಕರೆದೊಯ್ದಿದ್ದಾರೆ. ಬಳಿಕ ತಪಾಸಣೆ ನಡೆಸಿದ ವೈದ್ಯರು, ಗಾಯಾಳುವಿನ ತಲೆಗೆ ತೀವ್ರ ಪೆಟ್ಟಾಗಿ, ಬಾಯಿ ಹಾಗೂ ಕಿವಿಯಿಂದ ರಕ್ತ ಬಂದಿದ್ದು, ಮೃತಪಟ್ಟಿದ್ದಾರೆ ಎಂದು ದೃಢಪಡಿಸಿದ್ದಾರೆ. ಈ ಸಂಬಂಧ ವಿವಿ ಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರೈಲ್ವೇ ವಿಭಾಗದಿಂದ ಫ್ರೈಟ್ ಲೋಡಿಂಗ್‌ನಲ್ಲಿ ಗಣನೀಯ ಸಾಧನೆ

ಮೈಸೂರು,ಡಿ.2(ಆರ್‌ಕೆ)–2023ರ ಏಪ್ರಿಲ್‌ನಿಂದ ನವೆಂಬರ್‌ವರೆಗೆ ಮೈಸೂರು ರೈಲ್ವೇ ವಿಭಾಗವು 7.242 ಮೆಟ್ರಿಕ್ ಟನ್ ಫ್ರೈಟ್ ಲೋಡಿಂಗ್ ಮಾಡಿ 620.20 ಕೋಟಿ ರೂ.ಗಳ ಆದಾಯ ಗಳಿಸಿದೆ ಎಂದು ಸೀನಿಯರ್ ಡಿವಿಷನಲ್ ಕಮರ್ಷಿಯಲ್ ಮ್ಯಾನೇಜರ್ ಜೆ.ಲೋಹಿತೇಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕಳೆದ ವರ್ಷ ಅದೇ ವೇಳೆಗೆ ಹೋಲಿಸಿದಲ್ಲಿ ಈ ಬಾರಿ 1.700 ಮೆಟ್ರಿಕ್ ಟನ್ ಫ್ರೈಟ್ ಲೋಡಿಂಗ್ ಹೆಚ್ಚಳವಾದಂತಾಗಿದ್ದು, ಅದರಿಂದ ರೈಲ್ವೇ ವಿಭಾಗವು 2023ರ ನವೆಂಬರ್‌ವರೆಗೆ 620.20 ಕೋಟಿ ರೂ. ಆದಾಯ ಗಳಿಸಿದೆ. ನವೆಂಬರ್ ಒಂದೇ ತಿಂಗಳಲ್ಲಿ 1.029 ಮೆಟ್ರಿಕ್ ಟನ್ ಫ್ರೈಟ್ ಲೋಡಿಂಗ್ ಮಾಡಲಾಗಿದ್ದು, ಕಳೆದ ವರ್ಷದ ಆ ತಿಂಗಳಿಗಿಂತ ಶೇ.53.13ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ. ಕಬ್ಬಿಣದ ಅದಿರು, ಮಿನರಲ್ ಆಯಿಲ್, ಆಹಾರ ಧಾನ್ಯ, ಆಟೋ ಮೊಬೈಲ್ ನಂತಹ ಸರಕು ಸಾಗಣೆಯಲ್ಲಿ ಮೈಸೂರು ರೈಲ್ವೇ ವಿಭಾಗವು ಗಣನೀಯ ಪ್ರಗತಿ ಸಾಧಿಸಿರುವುದಕ್ಕೆ ವಿಭಾಗೀಯ ರೈಲ್ವೇ ಮ್ಯಾನೇಜರ್ ಶಿಲ್ಪಿ ಅಗರವಾಲ್ ಅವರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಅವರು : "ಮದುವೆಯಾದ ಮೇಲೆ ನಿಮ್ಮ ಸಂಸಾರದಲ್ಲಿ ಆದ ಮುಖ್ಯ ಬದಲಾವಣೆ ಏನು?"

ಇವರು : "ತುಂಬಾ ಸಿಂಪಲ್, ನನ್ನ ಹೆಂಡತಿ ಅಡುಗೆ ಮಾಡೋದು ಮರೆತಳು. ನಾನು ಅಡುಗೆ ಮಾಡೋದು ಕಲಿತೆ!"

ಮೈಸೂರು ಮಿತ್ರ

ಭಾನುವಾರ, 3 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಈ ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ. ಆದರೆ ನ್ಯೂನತೆಗಳನ್ನು ಇಲ್ಲವಾಗಿಸಿಕೊಂಡು ಪರಿಪೂರ್ಣತೆಯನ್ನು ಸಾಧಿಸುವ ನಮ್ಮ ಪ್ರಯತ್ನ ನಿರಂತರವಾಗಿರಬೇಕು. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲೋಕ ತಿಳಿಬೇಕು, ಲೆಕ್ಕ ಕಲಿಯಬೇಕು

ನಿಮ್ಮ ಪತ್ರಗಳು

ಭ್ರೂಣ ಹತ್ಯೆಯ ಪ್ರಕರಣಗಳು ಮರುಕಳಿಸದಿರಲಿ

ಮಾನ್ಯರೆ,

ಹೆಣ್ಣಿನ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ ಜನ ಭ್ರೂಣಹತ್ಯೆ ವಿಷಯ ಜಗಜ್ಜಾಹೀರಾದಾಗ ಹೆಣ್ಣಿನ ಬಗ್ಗೆ ಅವರ ಹೇಳಿಕೆಗಳು ಎಲ್ಲಿ ಹೋದವು. ಹೆಣ್ಣು ಎಂದರೆ ಭಾಷಣದಲ್ಲಿ ಸಹನಾಮೂರ್ತಿ, ಕ್ಷಮಯಾಧರಿತ್ರಿ ಹಾಗೂ ಭೂತಾಯಿ ಹೋಲಿಕೆಗೆ ಮೀಸಲಾದರೆ ಅಷ್ಟೇ ಸಾಕೆ. ಯಾವುದೇ ಹೆಣ್ಣಾದರೂ ತನ್ನ ಕರುಳಕುಡಿಯನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಭ್ರೂಣಹತ್ಯೆ ಪ್ರಕರಣವು ಗಮನಿಸಿದರೆ ಇದರ ಹಿಂದೆ ಮತ್ತೊಬ್ಬ ಹೆಣ್ಣು (ಅತ್ತೆ ಗಂಡ, ಮಾವ) ಇರುತ್ತಾರೆ. ಈ ಕಲಿಯುಗದಲ್ಲಿ ಹೆಣ್ಣು ಎಂದರೆ ಖರ್ಚು ಮಾಡಿಸುವುದಕ್ಕೆ ಎಂಬ ಅಭಿಪ್ರಾಯ ತಾಳಿದಂತಿದೆ. ಈ ಎಲ್ಲಾ ಅಭಿಪ್ರಾಯಕ್ಕಾಗಿ ಹೆಣ್ಣು ಭ್ರೂಣಹತ್ಯೆ ನಡೆಯುತ್ತಿದೆ. ಹೆಣ್ಣು ಭ್ರೂಣ ಹತ್ಯೆಯಲ್ಲಿ ವೈದ್ಯರು ಸೇರಿರುವುದು ಆಘಾತಕಾರಿ ವಿಷಯವಾಗಿದೆ. ವೈದ್ಯರಾಗಿ ಜೀವ ಉಳಿಸುವ ಕೆಲಸ ಮಾಡದೆ ಕಣ್ಣು ಬಿಡುವ ಮುನ್ನ ಹೆಣ್ಣು ಜೀವವನ್ನು ಕೊಲ್ಲಲು ಮುಂದಾಗುತ್ತಿರುವುದು ಅತ್ಯಂತ ಹೀನಾಯ ವಿಷಯವಾಗಿದೆ. ಎಷ್ಟೋ ಪ್ರಕರಣಗಳಲ್ಲಿ ಹೆಣ್ಣು ಹುಟ್ಟಿತೆಂದು ಉಸಿರುಗಟ್ಟಿಸಿ, ರಸ್ತೆ ಬದಿಯಲ್ಲಿ ಬಿಸಾಕುವುದು ಮತ್ತು ರೈಲ್ವೇ ನಿಲ್ದಾಣಗಳಲ್ಲಿ ಬಿಟ್ಟುಹೋಗುವುದು ನಡೆಯುತ್ತಿದೆ. ಮತ್ತೊಂದು ಪ್ರಕರಣದಲ್ಲಿ ಒಬ್ಬ ವಿಜ್ಞಾನ ಶಿಕ್ಷಕ ತನಗೆ ತ್ರಿವಳಿ ಹೆಣ್ಣು ಮಕ್ಕಳು ಹುಟ್ಟಿದರು ಎಂಬ ಕಾರಣಕ್ಕೆ ಹೆಂಡತಿ ಮಕ್ಕಳಿಂದ ದೂರಾದ ಪ್ರಕರಣಗಳು ಇದೆ. ವಿಜ್ಞಾನ ಇಷ್ಟು ಮುಂದುವರೆದಿರುವಾಗ ಭ್ರೂಣಹತ್ಯೆಗೆ ಹೆಣ್ಣು ಮೌನವಾಗಿರುವುದು ಸರಿಯೇ. ಇಂತಹ ಅಪರಾಧಿಗಳಿಗೆ ಪೊಲೀಸ್ ಠಾಣೆ ಮೆಟ್ಟಿಲೇರಿ ದೂರನ್ನು ನೀಡಬೇಕು.

ಸಮಾಜದಲ್ಲಿ ಸಾರ್ವಜನಿಕರು ಭ್ರೂಣಹತ್ಯೆ, ಅನೈತಿಕ ಚಟುವಟಿಕೆ ಹಾಗೂ ಅಪರಾಧಗಳು, ಇಂತಹ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂಬ ವಿಷಯ ತಿಳಿದರೆ ನೆರೆಹೊರೆಯವರು ಮೌನವಹಿಸುವುದು ಸರಿಯಲ್ಲ. ಖುದ್ದಾಗಿ ತಾವೇ ಇಂತಹ ಪ್ರಕರಣಗಳನ್ನು ಪೊಲೀಸರಿಗೆ ಮುಟ್ಟಿಸಿದರೆ ಅನೇಕ ಭ್ರೂಣಹತ್ಯೆ ಪ್ರಕರಣ ತಪ್ಪಿಸಿದಂತಾಗುತ್ತದೆ. ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣದ ಅರಿವು ಇರಬೇಕಾಗುತ್ತದೆ. ಇದರಿಂದ ಅನೇಕ ಅಪರಾಧಗಳು ತಪ್ಪಿದಂತಾಗುತ್ತದೆ. ಯಾವುದೇ ಸ್ಕ್ಯಾನಿಂಗ್ ಮಿಷಿನ್ ಖರೀದಿಸಿದರೂ ಅದಕ್ಕೆ ಅಗತ್ಯ ದಾಖಲಾತಿಗಳು ನೀಡಬೇಕು. ಯಾವುದೇ ಹೆಣ್ಣು ಸ್ಕ್ಯಾನಿಂಗ್‌ಗೆ ಒಳಪಟ್ಟರೆ ಆರೋಗ್ಯ ದೃಷ್ಟಿಯಿಂದ ಇರಬೇಕು. ಲಿಂಗಪತ್ತೆ ಮಾಡುವ ಉದ್ದೇಶವಿರಬಾರದು ಸೂಕ್ತ ಕಾರಣವಿದ್ದರೆ ಮಾತ್ರ ಭ್ರೂಣಹತ್ಯೆಗೆ ಅವಕಾಶ ನೀಡಬೇಕು. (ಅಂಗವಿಕಲತೆ, ಹೃದಯದಲ್ಲಿ ರಂಧ್ರವಿರುವುದು) ಸಮಾಜದಲ್ಲಿ ಭ್ರೂಣಹತ್ಯೆ ಪ್ರಕರಣದಲ್ಲಿನ ಅಪರಾಧಿಗಳಿಗೆ ಉಗ್ರ ಶಿಕ್ಷೆ ನೀಡಿದರೆ ಮತ್ತೆ ಇಂತಹ ಪ್ರಕರಣಗಳು ಮರುಕಳಿಸುವುದಿಲ್ಲ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.


ದೇವರಾಜ ಮಾರುಕಟ್ಟೆ : ಪ್ರಜ್ಞಾವಂತರ ನಡೆ ಸರಿಯೇ?

ಮಾನ್ಯರೆ,

ಮೈಸೂರಿನ ದೇವರಾಜ ಮಾರುಕಟ್ಟೆಯ ಒಂದು ಭಾಗ ಕುಸಿದ ನಂತರ ಅದನ್ನು ನೆಲಸಮಗೊಳಿಸಿ, ಅಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ನಗರಪಾಲಿಕೆಯಲ್ಲಿನ ಕೌನ್ಸಿಲ್ ಒಪ್ಪಿಗೆ ಸೂಚಿಸಿತ್ತು. ಆದರೆ ಪಾರಂಪರಿಕ ಕಟ್ಟಡವಾದ ಈ ಮಾರುಕಟ್ಟೆಯನ್ನು ನೆಲಸಮಗೊಳಿಸದೆ ನವೀಕರಣ ಮಾಡಬೇಕೆಂದು ಮೈಗ್ರಾಪ ಸದಸ್ಯರು ಮತ್ತಿತರೆ ಪಾರಂಪರಿಕ ಕಟ್ಟಡಗಳ ಬಗ್ಗೆ ಕಾಳಜಿ ಇರುವವರು ವಿರೋಧಿಸಿದ್ದರು. ಅದರಂತೆ ಸರ್ಕಾರ ತಜ್ಞರ ಸಮಿತಿ ರಚಿಸಿ ಅಭಿಪ್ರಾಯ ಕೇಳಿತ್ತು. ಆದರೆ ಮಾರುಕಟ್ಟೆಯನ್ನು ಕೆಡವಿ ಹೊಸ ಕಟ್ಟಡ ಕಟ್ಟುವಂತೆ ತಜ್ಞರ ಸಮಿತಿ ಸರ್ಕಾರಕ್ಕೆ ಮನವಿ ಸಲ್ಲಿಸಿತು. ಅದನ್ನು ವಿರೋಧಿಸಿ ಕೆಲವು ಪಾರಂಪರಿಕ ಕಟ್ಟಡಗಳ ಬಗ್ಗೆ ಕಾಳಜಿ ಇರುವವರು ಹೈಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿದ್ದರು. ಆದರೆ ಹೈಕೋರ್ಟ್ ಸದರಿ ಅರ್ಜಿಯನ್ನು ವಜಾಗೊಳಿಸಿ ಹೊಸ ಕಟ್ಟಡ ಕಟ್ಟುವುದಕ್ಕೆ ಅನುಮತಿ ನೀಡಿತು. ಆದರೆ ದುರದೃಷ್ಟಕರ ವಿಷಯವೆಂದರೆ, ಹೈಕೋರ್ಟಿನ ಈ ತೀರ್ಪಿನ ಬಗ್ಗೆ ಬೇಸರ ವ್ಯಕ್ತಪಡಿಸಿರುವ ಕೆಲವು ಸದಸ್ಯರು ಮತ್ತು ಮೈಸೂರು ಗ್ರಾಹಕರ ಪರಿಷತ್ ಸದಸ್ಯರು, ಸದರಿ ಆದೇಶವನ್ನು ವಿರೋಧಿಸಿ ಸಂಬಂಧಪಟ್ಟ ಅಧಿಕಾರಿಗಳ ಮೂಲಕ ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ದೇವರಾಜ ಮಾರುಕಟ್ಟೆಯನ್ನು ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನ ಎಷ್ಟು ಸರಿ ಎಂಬುದು ಶ್ರೀಸಾಮಾನ್ಯರ ಪ್ರಶ್ನೆ. ಈ ವಿಷಯ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಅವರ ಈ ಪ್ರಯತ್ನ ಹೈಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆಯಾಗುವುದಿಲ್ಲವೆ! ಇದು ವಿರೋಧಿಸುವವರಿಗೆ ಅರಿವಿಲ್ಲವೇನು! ಅರಿವಿದ್ದರೂ, ಇವರುಗಳ ಈ ನಡೆ ಸರಿಯೇ ಎಂಬುದನ್ನು ಪ್ರಜ್ಞಾವಂತರು ತಿಳಿಸಿಕೊಡಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಗುಂಡಿ ಬಿದ್ದಿರುವ ಹೊರ ವರ್ತುಲ ರಸ್ತೆ ಸರಿಪಡಿಸಿ



ಮಾನ್ಯರೆ,

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಶೇಷಾದ್ರಿಪುರಂ ಕಾಲೇಜಿನ ಬಳಿ, ಕೂರ್ಗಳ್ಳಿಗೆ ಹೋಗುವ ರಸ್ತೆ, ಆಟೋಮೋಟಿವ್ ಆಕ್ಸೆಲ್ಸ್‌ನ ಕಾರ್ಖಾನೆ ಸೇರುವ ರಸ್ತೆ, ಬಿಇಎಂಎಲ್ ಕಾರ್ಖಾನೆ ಪಕ್ಕದಲ್ಲಿರುವ ರಸ್ತೆ ಹಾಗೂ ಬಿಇಎಂಎಲ್ ಕಾರ್ಖಾನೆಯಿಂದ ಆರಂಭವಾಗಿ ಇನ್ಫೋಸಿಸ್ ಕಂಪನಿಯವರೆಗೆ ರಸ್ತೆಗಳು ಗುಂಡಿ ಬಿದ್ದು, ಸಾರ್ವಜನಿಕರು, ಕಾರ್ಮಿಕರು ಹಾಗೂ ವಾಹನ ಸವಾರರ ಸಂಚರಿಸಲು ತುಂಬಾ ತೊಂದರೆಯಾಗಿದೆ. ಇದು ಕೈಗಾರಿಕಾ ಪ್ರದೇಶವಾಗಿರುವುದರಿಂದ ಈ ರಸ್ತೆಗಳಲ್ಲಿ ಪ್ರತಿನಿತ್ಯ ಸಾವಿರಾರು ಜನರು ಸಂಚರಿಸುತ್ತಾರೆ. ರಾತ್ರಿ ವೇಳೆಯಂತೂ ಈ ರಸ್ತೆಯಲ್ಲಿ ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತೆ ಪರಿಸ್ಥಿತಿ ಇದೆ. ಅನೇಕ ಬಾರಿ ಅಪಘಾತಗಳು ಸಂಭವಿಸಿರುವ ಉದಾಹರಣೆಗಳುಂಟು. ಈ ಸಂಬಂಧ ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ರಸ್ತೆ ಸರಿಪಡಿಸಿ ಕಾರ್ಮಿಕರ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ನೊಂದ ಕಾರ್ಮಿಕರು, ಮೈಸೂರು.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ



ಬೆಳಗಾವಿಯ ಅಧಿವೇಶನ ಗಂಭೀರ ಚರ್ಚೆಗಿಂತ ಜಂಗೀಕುಸ್ತಿಗೆ ಆದ್ಯತೆ!



ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ಸೋಮವಾರ(ಡಿ.4) ಆರಂಭವಾಗುವ ವಿಧಾನಮಂಡಲದ ಚಳಿಗಾಲದ ಜಂಟಿ ಅಧಿವೇಶನವು ಒಂದು ರೀತಿಯಲ್ಲಿ 'ಮಂತ್ರಕ್ಕಿಂತ ಉಗುಳೇ ಜಾಸ್ತಿ' ಎಂಬಂತೆ, ಗಂಭೀರ ಚರ್ಚೆಗಿಂತ ಆರೋಪ–ಪ್ರತ್ಯಾರೋಪಗಳಿಂದಾಗಿ ಜಂಗೀಕುಸ್ತಿ ಅಖಾಡವಾಗುವ ಸಂಭವವೇ ಜಾಸ್ತಿ.

> ಮೂರು ಪಕ್ಷಗಳಲ್ಲೂ 'ಆಂತರಿಕ ಅಪಸ್ವರ' ಇದ್ದೇ ಇದೆ. ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಇದು ಸರ್ವೇಸಾಮಾನ್ಯ. ಅತೃಪ್ತರನ್ನು ಸಮಾಧಾನ ಮಾಡಿ ತಹಬದಿಗೆ ತರುವುದೇ ಹರಸಾಹಸ. ಇದು ಎಲ್ಲಾ ಪಕ್ಷಕ್ಕೂ ಅನ್ವಯವಾಗುತ್ತದೆ. ಇನ್ನು ಆಡಳಿತ ಪಕ್ಷವೇನಾದರೂ ಈ ಸಂದರ್ಭದಲ್ಲಿ ನಿಗಮ–ಮಂಡಳಿಗೆ ಅಧ್ಯಕ್ಷರ ನೇಮಕಕ್ಕೆ 'ಕೈ' ಹಾಕಿದರೆ, ಜೇನುಗೂಡಿಗೆ ಕಲ್ಲು ಎಸೆದಂತೆ. ಇನ್ನು ಶಾಸಕರ ಪಾಲಿಗೆ ಈ ಅಧಿವೇಶನ ಮೋಜು–ಮಸ್ತಿಗೆ ಸೀಮಿತ. ಏಕೆಂದರೆ ಸದನದಲ್ಲಿ ಯಾರೋ ಮೂರ್‍ನಾಲ್ಕು ಜನ ಮಾತನಾಡುತ್ತಾರೆ. ಉಳಿದವರು ಮೂಕಪ್ರೇಕ್ಷಕರು. ಹಾಗಾಗಿ ರಾತ್ರಿಯಾದರೆ ಗುಂಪು–ಗುಂಪಾಗಿ ಚಳಿ ಕಾಯಿಸಿಕೊಳ್ಳುತ್ತಾರೆ. ಸಮಸ್ಯೆಗಳು–ಪರಿಹಾರ ಅದೆಲ್ಲಾ ಸರ್ಕಾರಕ್ಕೆ ಸೇರಿದ್ದು ಎಂಬಂತೆ ಆರಾಮವಾಗಿರುವವರ ಸಂಖ್ಯೆಯೇ ಹೆಚ್ಚು. ಅಲ್ಲದೆ ಬೆಳಗಾವಿಯ ಅಧಿವೇಶನ ಕಣ್ಣೊರೆಸುವ ತಂತ್ರ ಅಷ್ಟೇ.

ಸರ್ಕಾರದ ಆರೇಳು ತಿಂಗಳ ಸಾಧನೆಗಳಿಗಿಂತ, ಗ್ಯಾರಂಟಿಗಳ ಭರಾಟೆ ಸದ್ದೇ ಜಾಸ್ತಿ. ರಚನಾತ್ಮಕ ಕೆಲಸಗಳಿಗಿಂತ ಪ್ರಚಾರದ್ದೇ ಅಬ್ಬರ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಎಲ್ಲಾ ಪಕ್ಷಗಳು ಹಾಗೂ ನಾಯಕರ ಗುರಿ ಜನಮನ ಗೆಲ್ಲುವುದು.

ಸರ್ಕಾರ ಹಾಗೂ ವಿರೋಧ ಪಕ್ಷಗಳ ನಾಯಕರಿಗೆ ಬರ ಹಾಗೂ ಬಗೆಹರಿಯದ ಕಾವೇರಿ ನೀರಿನ ಸಮಸ್ಯೆ, ರೈತರ ಸಂಕಷ್ಟ, ವರ್ಗಾವಣೆ ದಂಧೆ, ಕಮಿಷನ್ 40–80% ಏರಿದ್ದು, ಕರೆಂಟ್ ಕಳ್ಳ, ಲುಲು ಮಾಲ್ ಜಾಗ ಕಬಳಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಡಾ. ಯತೀಂದ್ರ ಅವರ ಸೆಲ್ ಫೋನ್ ಭಾಷಣ, ಜಾತಿ ಗಣತಿ... ಹೀಗೆ ಹಲವು ವಿಷಯಗಳು ಸರ್ಕಾರ ಹಾಗೂ ವಿರೋಧ ಪಕ್ಷಗಳ ಜಟಾಪಟಿಗೆ ನಾಂದಿ ಹಾಡಲಿದೆ.

ಈ ನಡುವೆ ನನೆಗುದಿಗೆ ಬಿದ್ದಿದ್ದ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಮಾಜಿ ಸಚಿವ ಆರ್.ಅಶೋಕ್‌ಗೆ ಪಟ್ಟ ಕಟ್ಟಿದ್ದು, ಶಾಸಕ ಹಾಗೂ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರರಿಗೆ ಪಕ್ಷದ ಅಧ್ಯಕ್ಷ ಸ್ಥಾನಕ್ಕೇರಿಸಿದ್ದು, ಬಿಜೆಪಿಯೊಳಗೆ ಅಸಮಾಧಾನ ಹೊಗೆ ಎಬ್ಬಿಸಿದೆ. ಆದರೂ ಇರುವ ಮೂರು ಪಕ್ಷಗಳಿಗೆ ಹೋಲಿಸಿದರೆ 'ಶಿಸ್ತಿನ' ಪಕ್ಷದ ಮುಖವಾಡ ಹಾಕಿರುವ ಬಿಜೆಪಿ ವರಿಷ್ಠರು ಈ ಅತೃಪ್ತಿಗೆ ಅಂತ್ಯ ಹಾಡಬಹುದು.

ಅಶೋಕ್ ಹಾಗೂ ವಿಜಯೇಂದ್ರರ ಪಾಲಿಗೆ ಇದು ಚೊಚ್ಚಲ ಅಧಿವೇಶನ, ಜೊತೆಗೆ ಅಗ್ನಿ ಪರೀಕ್ಷೆ. ರಾಜ್ಯದ ಜನತೆ ಹಾಗೂ ಪಕ್ಷದ ವರಿಷ್ಠರು ಈ ಇಬ್ಬರ ಮೇಲೆ ಅಪಾರ ನಂಬಿಕೆ ಇಟ್ಟುಕೊಂಡಿದ್ದಾರೆ. ಇಬ್ಬರಿಗೂ ಸ್ಥಾನ–ಮಾನದ ಬಗ್ಗೆಯೂ ಅರಿವಿದೆ. ಹೀಗಾಗಿ ಪಕ್ಷದ ರಥ ಎಳೆಯಬೇಕಾಗಿರುವ ಇಬ್ಬರೂ ಹಗಲು–ರಾತ್ರಿ ಕೆಲಸ ಮಾಡಿ ಸರ್ಕಾರವನ್ನು ತುದಿಗಾಲಲ್ಲಿ ನಿಲ್ಲಿಸಬೇಕಾದ ಹೊಣೆ 69 ಶಾಸಕರ ಬೆಂಬಲದಲ್ಲಿ ಅಡಗಿದೆ.

ಇಬ್ಬರೇ ಸೇರಿಕೊಂಡು ಚಪ್ಪಾಳೆ ಹೊಡೆದರೆ ಸಾಲದು. ಇಡೀ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ವಿಧಾನಮಂಡಲದ ಕಲಾಪದಲ್ಲಿ ಬಿ.ಎಸ್.ಯಡಿಯೂರಪ್ಪ ಯಾವ ಸ್ಥಾನದಲ್ಲಿ ಇದ್ದಾಗಲೂ ಅವರು ಬಾಯಿ ತೆಗೆದರೆ ವಿಧಾನಸೌಧವೇ ಅಲುಗಾಡುತ್ತದೆಂಬ ಮಾತಿತ್ತು. ಹಾಗಿರಬೇಕು ನಿಮ್ಮ ಬಾಣ–ಬಿರುಸುಗಳ ಸದ್ದು.

ನಿಮ್ಮ 69 ಶಾಸಕರಿಗೆ ಆನೆ ಬಲ ನೀಡುವಂತೆ ಜೆಡಿಎಸ್‌ನ 19 ಶಾಸಕರಿದ್ದಾರೆ. ಎಲ್ಲರಿಗಿಂತ ಮಿಗಿಲಾಗಿ ಕುಮಾರಸ್ವಾಮಿ ಅವರು ಬೆನ್ನೆಲುಬಾಗುತ್ತಾರೆ. ಅವರ ಅನುಭವ, ಮಾಹಿತಿ ಸಂಗ್ರಹದಲ್ಲಿ ಎತ್ತಿದ 'ಕೈ'

ಕುಮಾರಸ್ವಾಮಿ ಬಾಯಿ ಬಿಟ್ಟರೆ 'ಬಾಂಬ್' ಸಿಡಿಯುತ್ತದೆ. 'ಹಾವಿನ ಬುಟ್ಟಿ' ಬದಲು ಈಗ 'ಪೆನ್ ಡ್ರೈವ್' ಪ್ರದರ್ಶಿಸಿದರೆ ಬೆಚ್ಚಿ ಬೀಳುವಂತಾಗುತ್ತದೆ. ಹೀಗೆ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಆಡಳಿತ ಪಕ್ಷವನ್ನು ಕಟ್ಟಿಹಾಕುವ ತಂತ್ರಗಾರಿಕೆ ಮಾಡಬೇಕು.

ಆದರೆ ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಎದುರಿಸುವ ಎದೆಗಾರಿಕೆ ವಿರೋಧ ಪಕ್ಷದಲ್ಲಿ ಯಾರಲ್ಲೂ ಕಾಣುವುದಿಲ್ಲ. ಮುಖ್ಯಮಂತ್ರಿ ಅವರ ಆಡಳಿತ ಹಾಗೂ ಅನುಭವ ಆ ಪಕ್ಷಕ್ಕೆ ದೊಡ್ಡ ವರ. ಇವರಿಗೆ ಸಾಥ್ ನೀಡಲು ಕನಕಪುರದ 'ಬಂಡೆ' ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅಷ್ಟೇ ಸಮರ್ಥರು.

ಆದರೆ, ಆಡಳಿತ ಪಕ್ಷವಾದ್ದರಿಂದ ಸಮಸ್ಯೆಗಳು ನೂರಾರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಲಿನ ದೂರುಗಳು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪುತ್ರ ಡಾ. ಯತೀಂದ್ರ ವಿರುದ್ಧ ಆರೋಪಗಳಿಗೆ ಉತ್ತರ ಕೊಡುವುದು ಅಷ್ಟು ಸುಲಭವಲ್ಲ.

ಅಲ್ಲದೇ, ಮೂರು ಪಕ್ಷಗಳಲ್ಲೂ 'ಆಂತರಿಕ ಅಪಸ್ವರ' ಇದ್ದೇ ಇದೆ. ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಇದು ಸರ್ವೇಸಾಮಾನ್ಯ. ಅತೃಪ್ತರನ್ನು ಸಮಾಧಾನ ಮಾಡಿ ತಹಬದಿಗೆ ತರುವುದೇ ಹರಸಾಹಸ. ಇದು ಎಲ್ಲಾ ಪಕ್ಷಕ್ಕೂ ಅನ್ವಯವಾಗುತ್ತದೆ. ಇನ್ನು ಆಡಳಿತ ಪಕ್ಷವೇನಾದರೂ ಈ ಸಂದರ್ಭದಲ್ಲಿ ನಿಗಮ–ಮಂಡಳಿಗೆ ಅಧ್ಯಕ್ಷರ ನೇಮಕಕ್ಕೆ 'ಕೈ' ಹಾಕಿದರೆ, ಜೇನುಗೂಡಿಗೆ ಕಲ್ಲು ಎಸೆದಂತೆ.

ಮೂರು ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಅಧ್ಯಕ್ಷರು ವಿಧಾನ ಸಭೆಯ ಸದಸ್ಯರೂ ಆಗಿರುವುದು ಮತ್ತೊಂದು ವಿಶೇಷ. ಹಾಗಾಗಿ ಪಕ್ಷ ಪ್ರಭಾವ ಹೆಚ್ಚಿಸಿಕೊಳ್ಳಲು ಈ ಮೂವರು ಪವಾಡ ಪುರುಷರಂತೆ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ಅವಕಾಶವೂ ಇದೆ.

ಇನ್ನು ಶಾಸಕರ ಪಾಲಿಗೆ ಈ ಅಧಿವೇಶನ ಮೋಜು–ಮಸ್ತಿಗೆ ಸೀಮಿತ. ಏಕೆಂದರೆ ಸದನದಲ್ಲಿ ಯಾರೋ ಮೂರ್‍ನಾಲ್ಕು ಜನ ಮಾತನಾಡುತ್ತಾರೆ. ಉಳಿದವರು ಮೂಕ ಪ್ರೇಕ್ಷಕರು. ಹಾಗಾಗಿ ರಾತ್ರಿಯಾದರೆ ಗುಂಪು–ಗುಂಪಾಗಿ ಚಳಿ ಕಾಯಿಸಿಕೊಳ್ಳುತ್ತಾರೆ. ಸಮಸ್ಯೆಗಳು–ಪರಿಹಾರ ಅದೆಲ್ಲಾ ಸರ್ಕಾರಕ್ಕೆ ಸೇರಿದ್ದು ಎಂಬಂತೆ ಆರಾಮವಾಗಿರುವವರ ಸಂಖ್ಯೆಯೇ ಹೆಚ್ಚು. ಅಲ್ಲದೆ ಬೆಳಗಾವಿಯ ಅಧಿವೇಶನ ಕಣ್ಣೊರೆಸುವ ತಂತ್ರ ಅಷ್ಟೇ. ಹಗ್ಗ–ಜಗ್ಗಾಟ ಬಿಟ್ಟರೆ ಫಲಶೃತಿ ಮಾತ್ರ ಶೂನ್ಯ?

ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಸ್ಮರಣಾರ್ಥ ಸಂಗೀತ ಸಮ್ಮೇಳನ–2023

ಮೈಸೂರು ಕಲೆ, ಸಾಹಿತ್ಯ, ಸಾಂಸ್ಕೃತಿಕ ನೆಲೆ

ಬೆಂಗಳೂರು ವಿಶ್ವವಿದ್ಯಾನಿಲಯ (ಉತ್ತರ) ಕುಲಪತಿ ಪ್ರೊ.ನಿರಂಜನವಾನಳ್ಳಿ ಅಭಿಮತ

ಮೈಸೂರು, ಡಿ.2(ಎಸ್‌ಪಿಎನ್)– ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಸ್ಮರಣಾರ್ಥ ನಡೆದ 28ನೆಯ ಸಂಗೀತ ಸಮ್ಮೇಳನ–2023ಕ್ಕೆ ಶನಿವಾರ ಚಾಲನೆ ದೊರೆಯಿತು.

ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಹಯೋಗದೊಂದಿಗೆ ಶನಿವಾರದಿಂದ ಡಿ.6ರವರೆಗೆ (ಐದು ದಿನಗಳು) ನಡೆಯುವ 28ನೇ ಸಂಗೀತ ಸಮ್ಮೇಳನ–2023ಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯ(ಉತ್ತರ)ದ ಕುಲಪತಿ ಡಾ. ನಿರಂಜನವಾನಳ್ಳಿ ಚಾಲನೆ ನೀಡಿದರು.

ವಿದೇಶಿಗರು ಭಾರತೀಯ ಪರಂಪರೆ ಬಗ್ಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಮೈಸೂರು ವಿವಿಯಲ್ಲಿ ಪತ್ರಿಕೋದ್ಯಮ ವಿಭಾಗದಲ್ಲಿದ್ದ ಸಂದರ್ಭದಲ್ಲಿ ಭಾರತ ಮತ್ತು ಕಜಕಿಸ್ತಾನ ಸಾಂಸ್ಕೃತಿಕ ವಿನಿಮಯ ಒಪ್ಪಂದದಡಿ ನಾನು ಕಜಕಿಸ್ತಾನಕ್ಕೆ ಹೋಗುವ ಸಂದರ್ಭ ಬಂತು. ಅಲ್ಲಿನ ಜನರಿಗೆ ಭಾರತೀಯ ಪರಂಪರೆ ಬಗ್ಗೆ ಕಲಿಸಲು ಮುಂದಾದಾಗ ಅಲ್ಲಿನ ನಾಗರಿಕರು ನಮ್ಮ ಕಲೆ, ಸಾಹಿತ್ಯ, ಭರತ ನಾಟ್ಯ ಕಲಿಕೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದರು ಎಂದು ತಿಳಿಸಿದರು. ಮೈಸೂರು ಸಾಂಸ್ಕೃತಿಕ ಕಲೆಗಳನ್ನು ಬಿಂಬಿಸುವ ರಂಗಾಯಣ, ಸಂಗೀತ ವಿವಿ, ಲಲಿತಾ ಕಲಾ ಕಾಲೇಜು ಸೇರಿದಂತೆ ಇತರೆ ಸಂಸ್ಥೆಗಳು ಕಾರ್ಯ



ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಹಯೋಗದೊಂದಿಗೆ ಶನಿವಾರದಿಂದ ಡಿ.6ರವರೆಗೆ (ಐದು ದಿನಗಳು) ನಡೆಯುವ 28ನೇ ಸಂಗೀತ ಸಮ್ಮೇಳನ–2023ಕ್ಕೆ ಬೆಂಗಳೂರು ವಿಶ್ವವಿದ್ಯಾನಿಲಯ(ಉತ್ತರ)ದ ಕುಲಪತಿ ಡಾ.ನಿರಂಜನವಾನಳ್ಳಿ ಉದ್ಘಾಟಿಸಿದರು. ಈ ವೇಳೆ ಸಮ್ಮೇಳನಾಧ್ಯಕ್ಷ ವಿದ್ವಾನ್. ಎ.ವಿ.ಆನಂದ್, ಮಾಜಿ ವಿಧಾನ ಪರಿಷತ್ ಸದಸ್ಯ ಗೋ.ಮಧುಸೂದನ್, ವಿದ್ವಾನ್ ಮೈಸೂರು ಎಂ.ಮಂಜುನಾಥ್, ಮೈಸೂರು ನಾಗರಾಜು ಸೇರಿದಂತೆ ಇತರರಿದ್ದರು. ಹೇರಂಭ ಮತ್ತು ಹೇಮಂತ ಕಲಾವಿದರು ದ್ವಂದ್ವ ಕೊಳಲು ವಾದನ ನಡೆಸಿಕೊಟ್ಟರು.

ನಿರ್ವಹಿಸುತ್ತಿವೆ. ಆದರೆ, ಈ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಮೈಸೂರಿನ ಬಹುತೇಕ ಜನರಿಗೆ ತಿಳಿದೇ ಇಲ್ಲ ಎಂದರು.

ರಂಗಾಯಣದಲ್ಲಿ ನಾಟಕ ಪ್ರದರ್ಶನ ಎಂದರೆ, ಇಡೀ ನಾಡಿನ ಪ್ರಜ್ಞಾವಂತರು ಕಿವಿಗೊಡುತ್ತಾರೆ. ಆದರೆ ಇಲ್ಲಿನ ಸಾಮಾನ್ಯ ಜನರು ಇದರ ಬಗ್ಗೆ ಒಲವು ತೋರುತ್ತಿಲ್ಲ. ಅಲ್ಲದೇ ಮೈಸೂರು ಬಿಟ್ಟು ರಾಜ್ಯದ ಬೇರೆ ಯಾವ ಜಿಲ್ಲೆಗಳಲ್ಲೂ ಇಷ್ಟೊಂದು ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜನೆಗೊಳ್ಳುವುದಿಲ್ಲ. ಇದಕ್ಕೆ ಬೆಂಗಳೂರು, ಹುಬ್ಬಳ್ಳಿಯೂ ಹೊರತಲ್ಲ. ನಾನು ಕಳೆದ ಮೂರು ವರ್ಷಗಳಿಂದ ಕೋಲಾರ, ಬೆಂಗಳೂರಿನಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದೇನೆ. ಈ ವೇಳೆ ಮೈಸೂರಿನ ಅನೇಕ ಸಂಗತಿಗಳನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ ಅನ್ನಿಸುತ್ತದೆ. ವಾರಾಂತ್ಯದಲ್ಲಿ ಬೇಗ ಮೈಸೂರು ಸೇರಿಕೊಳ್ಳೋಣ ಎಂದು ಮನಸ್ಸು ತವಕಿಸುವ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ಸಮ್ಮೇಳನಾಧ್ಯಕ್ಷ ಖ್ಯಾತ ಮೃದಂಗ ವಾದಕ ವಿದ್ವಾನ್ ಎ.ವಿ.ಆನಂದ್ ಮಾತನಾಡಿ, ಮೈಸೂರಿಗೆ ಸಾಂಸ್ಕೃತಿಕ ನಗರಿ ಬಿರುದು ಸುಮ್ಮನೆ ಬಂದಿಲ್ಲ. ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀಡುತ್ತಿದ್ದ ರಾಜಾಶ್ರಯವೇ ಕಾರಣ. ಹಾಗಾಗಿ ಮೈಸೂರು ಸಂಸ್ಥಾನ ಕಲೆ, ಸಾಹಿತ್ಯ, ನಾಟಕ, ನೃತ್ಯ, ಚಿತ್ರಕಲೆ ಸೇರಿದಂತೆ ಇತರೆ ಲಲಿತ ಕಲೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದ ಕಾರಣ ಇಂದಿಗೂ ಮೈಸೂರನ್ನು ಸಾಂಸ್ಕೃತಿಕ ನಗರಿ ಎಂದು ದೇಶ–ವಿದೇಶಗಳಲ್ಲಿ ಕರೆಯುತ್ತಾರೆ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಮಾತನಾಡಿ, ಯುವಕರು ಗುಜರಾತಿನ ಗಾಳಿ ಉಸಿರಾಡಿದರೆ ಹೇಗೆ ವ್ಯಾಪಾರ ಗುಣ ಬೆಳೆಸಿಕೊಳ್ಳುತ್ತಾರೋ ಅದೇ ರೀತಿ ಮೈಸೂರಿನ ಗಾಳಿ ಉಸಿರಾಡಿದರೆ ಸಂಗೀತ, ನಾಟ್ಯ, ನಾಟಕ ಕಲಿಯುವ ಮನಸ್ಥಿತಿ ಯುವಕರಲ್ಲಿ ಬೆಳೆಯುತ್ತದೆ. ಸಂಗೀತ ಎಂದರೆ ರಾಗ–ತಾಳ–ಸಾಹಿತ್ಯ ನಂತರ ಜೀವನದ ಮೋಕ್ಷವನ್ನು ಕಂಡುಕೊಳ್ಳಲು ಸಂಗೀತದಿಂದ ಸಾಧ್ಯ ಎಂದು ಹೇಳಿದರು.

ಇದಕ್ಕೂ ಮೊದಲು ಸಮ್ಮೇಳನಾಧ್ಯಕ್ಷ ವಿದ್ವಾನ್ ಎ.ವಿ.ಆನಂದ್ ಅವರನ್ನು ಜೆಎಸ್‌ಎಸ್ ಮಹಿಳಾ ಕಾಲೇಜು ಪ್ರವೇಶ ದ್ವಾರದಿಂದ ಮೆರವಣಿಗೆಯೊಂದಿಗೆ ಸ್ವಾಗತಿಸಲಾಯಿತು. ವೇದಿಕೆ ಕಾರ್ಯಕ್ರಮದ ನಂತರ ಹೇರಂಭ ಮತ್ತು ಹೇಮಂತರ ಕಲಾವಿದರಿಂದ ದ್ವಂದ್ವ ಕೊಳಲು ವಾದನ ನಡೆಸಿಕೊಟ್ಟರು. ಇವರಿಗೆ ವೈಭವ್ ರಮಣಿ(ವೈಲಿನ್), ಅರ್ಜುನ್ ಕುಮಾರ್ (ಮೃದಂಗ), ಜಿ.ಎಸ್.ರಾಮಾನುಜನ್(ಘಟಂ) ಸಾಥ್ ನೀಡಿದರು.

ಕೆಂಚಲಗೂಡು ಮುಜರಾಯಿ ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶ

ಅರ್ಚಕರಿಗೆ ಕಾನೂನು ಅರಿವು ಮೂಡಿಸಿದ ತಾಲೂಕು ಆಡಳಿತ

ಮೈಸೂರು, ಡಿ.2(ಎಂಕೆ)– ಮೈಸೂರು ತಾಲೂಕಿನ ಜಯಪುರ ಹೋಬಳಿಯ ಕೆಂಚಲಗೂಡು ಗ್ರಾಮದಲ್ಲಿರುವ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಲಕ್ಷ್ಮಿನಾರಾಯಣಸ್ವಾಮಿ, ಮಾರಮ್ಮ ಹಾಗೂ ಮಾಳಿಗಮ್ಮ ದೇವಾಲಯಗಳಲ್ಲಿ ದಲಿತರಿಗೆ ಪ್ರವೇಶ ನಿಷಿದ್ಧವಾಗಿದ್ದ ಹಿನ್ನೆಲೆಯಲ್ಲಿ ಶನಿವಾರ ಕೆಂಚಲಗೂಡು ಗ್ರಾಮಕ್ಕೆ ಭೇಟಿ ನೀಡಿದ ಮೈಸೂರು ತಾಲೂಕು ಆಡಳಿತವು ದೇವಾಲಯದ ಒಳಗೆ ದಲಿತರಿಗೆ ಪ್ರವೇಶ ನೀಡಿ, ಅರ್ಚಕರ ಮೂಲಕ ಮಂಗಳಾರತಿ ಕೊಡಿಸಿ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದಾರೆ. ಗ್ರಾಮದಲ್ಲಿ ಪರಿಶಿಷ್ಟ ಜಾತಿಯ 40, ಪರಿಶಿಷ್ಟ ವರ್ಗದ 80 ಹಾಗೂ ಅರಸು ಸಮುದಾಯದ 4 ಕುಟುಂಬಗಳಿವೆ. ಮೇಲ್ವರ್ಗದವರ ಆಣತಿಯಂತೆ ಅರ್ಚಕರು ದಲಿತರಿಗೆ ದೇವಾಲಯ ಪ್ರವೇಶ ನಿರಾಕರಿಸುತ್ತಿದ್ದರಿಂದಾಗಿ ಗ್ರಾಮಸ್ಥರಾದ ಮರಂಕಯ್ಯ, ಮುದ್ದುರಾಜು, ಜೆ.ಸ್ವಾಮಿ, ಚಲುವರಾಜು ಮತ್ತು ಶಿವಪ್ಪ ಎಂಬುವರು ಜಿಲ್ಲಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ ಹಾಗೂ ಸಂಬಂಧಪಟ್ಟ ಸಚಿವರಿಗೆ ದೇವಾಲಯಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವಂತೆ ಮನವಿ ಸಲ್ಲಿಸಿದ್ದರು.

ನಂತರ ಜಿಲ್ಲಾಧಿಕಾರಿಗಳ ಸೂಚನೆಯಂತೆ ಜಯಪುರ ಹೋಬಳಿ ನಾಡಕಛೇರಿ ಉಪ ತಹಶೀಲ್ದಾರ್ ಆರ್.ನಿಂಗಪ್ಪ, ಕಂದಾಯ ಅಧಿಕಾರಿ ಲೋಹಿತ್ ಇನ್ನಿತರ ಅಧಿಕಾರಿ–ಸಿಬ್ಬಂದಿಗಳು ಕೆಂಚಲಗೂಡು ಗ್ರಾಮಕ್ಕೆ ಭೇಟಿ ನೀಡಿ ಮುಜರಾಯಿ ಇಲಾಖೆಯ ದೇವಾಲಯಗಳ ಬಾಗಿಲು ತೆರೆಸಿ, ಅರ್ಚಕರಿಗೆ ಕಾನೂನಿನ ಅರಿವು ಮೂಡಿಸಿದರಲ್ಲದೆ ದಲಿತ ಮುಖಂಡರಿಗೆ ದೇವಾಲಯಕ್ಕೆ ಪ್ರವೇಶ ಕೊಡಿಸಿದ್ದಾರೆ.

ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧ: ಕಾನೂನಿನ ಪ್ರಕಾರ ದೇವಾಲಯಗಳು, ಧಾರ್ಮಿಕ ಸ್ಥಳಗಳು, ಮಂದಿರ, ದೇವಸ್ಥಾನಗಳು, ಸಾರ್ವಜನಿಕ ಪ್ರದೇಶಗಳು, ಸಾರ್ವಜನಿಕರಿಗೆ ಮುಕ್ತವಾಗಿರಬೇಕು. ಅಸ್ಪೃಶ್ಯತೆ ಆಚರಣೆ ಶಿಕ್ಷಾರ್ಹ ಅಪರಾಧವಾಗಿದೆ. ಕಾನೂನಿನ ಮುಂದೆ ಎಲ್ಲರೂ ಸರಿಸಮಾನರು. ದಲಿತರು ದೇವಾಲಯ ಪ್ರವೇಶಕ್ಕೆ ಆಕ್ಷೇಪ ವ್ಯಕ್ತಪಡಿಸುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಗ್ರಾಮದಲ್ಲಿ ಎಲ್ಲಾ ಜಾತಿ– ಜನಾಂಗದವರು ಸೌಹಾರ್ದಯುತವಾಗಿ ಸಹಬಾಳ್ವೆ ನಡೆಸಬೇಕು ಎಂದು ಉಪತಹಶೀಲ್ದಾರ್ ಆರ್.ನಿಂಗಪ್ಪ ಸೂಚಿಸಿದರು.

ಭದ್ರತೆಗೆ ಆಗ್ರಹ: ದೇವಾಲಯಕ್ಕೆ ಪ್ರವೇಶ ಕೊಡಿಸುವಂತೆ ಕಳೆದ ಮೂರು ದಶಕಗಳಿಂದಲೂ ಹೋರಾಟ ಮಾಡಿಕೊಂಡು ಬರಲಾಗುತ್ತಿತ್ತು. ದೇವಾಲಯ ಪ್ರವೇಶಕ್ಕಾಗಿ ಹೋರಾಟ ನಡೆಸಿದ ಮುಖಂಡರ ಮೇಲೆ ಸವರ್ಣೀಯರು ಜಗಳ ಮಾಡುವ ಸಂಭವವಿದ್ದು, ಜನಾಂಗದವರಿಗೆ ಸೂಕ್ತ ಭದ್ರತೆ ಒದಗಿಸುವಂತೆ ದಲಿತ ಮುಖಂಡ ಪಿ.ಮರಂಕಯ್ಯ ಆಗ್ರಹಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಭಾನುವಾರ 3 ಡಿಸೆಂಬರ್ 2023

ಮೈಸೂರು ಗ್ರಾವೆಲ್ ಫೆಸ್ಟ್ ಆಟೊಕ್ರಾಸ್ ರೇಸ್‌ಗೆ ಚಾಲನೆ

ಇಂದು ಮೈನವಿರೇಳಿಸುವ ಫಾಸ್ಟ್ ಕಾರ್ ರೇಸ್





ಮೈಸೂರು, ಡಿ.2(ಎಂಕೆ)–ಮೈಸೂರಿನ ಲಲಿತಮಹಲ್ ಹೆಲಿಪ್ಯಾಡ್ ಮೈದಾನದಲ್ಲಿ ನಾಳೆ(ಡಿ.3) ಧೂಳೆಬ್ಬಿಸುವ 'ಮೈಸೂರು ಗ್ರಾವೆಲ್ ಫೆಸ್ಟ್ ಆಟೊಕ್ರಾಸ್ ರೇಸ್'ಗೆ ಶನಿವಾರ ಚಾಲನೆ ನೀಡಲಾಯಿತು.

ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಆಟೊಮೋಟಿವ್ ಸ್ಪೋರ್ಟ್ಸ್ ಕ್ಲಬ್ ಆಫ್ ಮೈಸೂರು (ಅಸ್ಮಾಮ್) ಸಂಸ್ಥೆ ವತಿಯಿಂದ ಆಯೋಜಿಸಿರುವ 'ಮೈಸೂರು ಗ್ರಾವೆಲ್ ಫೆಸ್ಟ್ ಆಟೊಕ್ರಾಸ್ ರೇಸ್'ಗೆ ಲಲಿತಮಹಲ್ ಪ್ಯಾಲೆಸ್ ಎದುರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ಉದ್ಯಮಿ ಆರ್.ಗುರು ಫ್ಲಾಗ್ ತೋರಿ ಚಾಲನೆ ನೀಡಿದರಲ್ಲದೆ ರಾಜ್ಯದ ವಿವಿಧ ಭಾಗಗಳಿಂದ ಬಂದಂಥ ರೇಸ್ ಕಾರ್ ಚಾಲಕರಿಗೆ ಶುಭ ಕೋರಿದರು.

ಬಳಿಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಕಾರ್ ರೇಸ್ ಸ್ಪರ್ಧೆ ಮೂಲಕ ಮೈಸೂರಿನಲ್ಲಿ ಹೊಸ ಹುರುಪು ಕಾಣುತ್ತಿದೆ. ಸ್ಪರ್ಧೆಗಳು ನಮ್ಮನ್ನು ಸದಾ ಜಾಗೃತ ಮತ್ತು ಸದೃಢವಾಗಿರುಸುತ್ತದೆ. ಆಟೊಕ್ರಾಸ್ ರೇಸ್ ಯಶಸ್ವಿಯಾಗಲಿ ಎಂದು ಆಶಿಸಿದರು. ಹಾಗೆಯೇ ಉದ್ಯಮಿ ಆರ್.ಗುರು ಮಾತನಾಡಿ, 'ಮೈಸೂರು ಗ್ರಾವೆಲ್ ಫೆಸ್ಟ್ ಆಟೊಕ್ರಾಸ್ ರೇಸ್'ಗೆ ಯುವಕರು ಉತ್ಸಾಹದಿಂದ ಭಾಗವಹಿಸುತ್ತಿರುವುದು ಸಂತಸ ತಂದಿದೆ. ಇದೆಲ್ಲವನ್ನು ದೇಶ ಮುನ್ನಡೆಯುತ್ತಿರುವ ಭಾಗವಾಗಿ ನಾನು ಗ್ರಹಿಸುತ್ತೇನೆ ಎಂದರು.

100ಕ್ಕೂ ಹೆಚ್ಚು ಕಾರ್‌ಗಳು ಭಾಗಿ: ಕ್ಲಬ್ ಅಧ್ಯಕ್ಷ ಫಾಲ್ಗುಣ ವಿ.ಅರಸ್ ಮಾತನಾಡಿ, ದೇಶದ ವಿವಿಧ ಭಾಗಗಳಿಂದ 100ಕ್ಕೂ ಹೆಚ್ಚು ಕಾರ್‌ಗಳು ರೇಸ್‌ನಲ್ಲಿ ಭಾಗವಹಿಸಲಿವೆ. ಇದುವರೆಗೆ 160 ಪ್ರವೇಶಾತಿ ಬಂದಿದೆ, ಒಂದೇ ಕಾರನ್ನು ಇಬ್ಬರೂ ಬೇರೆ ಬೇರೆ ಸ್ಪರ್ಧೆಗೆ ಬಳಸುತ್ತಾರೆ. 9 ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದ್ದು, ಮಹಿಳಾ ಚಾಲಕರು ಸೇರಿದಂತೆ ದೆಹಲಿ, ಮಹಾರಾಷ್ಟ್ರ, ಗೋವಾ, ತೆಲಂಗಾಣ, ಆಂಧ್ರ ತಮಿಳುನಾಡು, ಮತ್ತು ಕೇರಳ ಮೂಲದ ಚಾಲಕರು ಬಂದಿದ್ದಾರೆ. ಲಡಾಖ್‌ನಿಂದಲೂ ಚಾಲಕರು ಬಂದಿರುವುದು ವಿಶೇಷ ಎಂದರು.

9 ಲಕ್ಷ ರೂ., ನಗದು ಬಹುಮಾನ: ಅತ್ಯಂತ ವೇಗದ ಚಾಲಕನಿಗೆ 'ಮೈಸೂರು ಗ್ರಾವೆಲ್ ಕಿಂಗ್–2023' ಬಿರುದುನೊಂದಿಗೆ 9 ಲಕ್ಷ ರೂ., ನಗದು ಬಹುಮಾನ ನೀಡಲಾಗುವುದು. ಹಾಗೆಯೇ ವಿಜೇತರಿಗೆ ಬೆಳ್ಳಿಯ ಟ್ರೋಫಿಗಳನ್ನು ನೀಡಲಾಗುವುದು. ಗ್ರಾವೆಲ್ ಫೆಸ್ಟ್ ದೇಶದ ನಂ.1 ರೇಸ್ ಎಂದು ಹೆಗ್ಗಳಿಕೆ ಪಡೆದಿದ್ದು, ಯುವ ಸಮೂಹ ಆಕರ್ಷಣೆಯಾಗಿದೆ ಎಂದರು.


ಬೆಳಗ್ಗೆ 8.30ಕ್ಕೆ ರೇಸ್ ಪ್ರಾರಂಭ...

ನಾಳೆ(ಡಿ.3) ಬೆಳಿಗ್ಗೆ 8.30ಕ್ಕೆ ರೇಸ್ ಪ್ರಾರಂಭವಾಗಲಿದ್ದು. ಸಂಜೆ 5ಕ್ಕೆ ಮುಗಿಯಲಿದೆ. ಮಧ್ಯಾಹ್ನ 2ರ ಹೊತ್ತಿಗೆಲ್ಲಾ ಫಾಸ್ಟ್ ರೇಸ್‌ಗಳು ನಡೆಯುತ್ತವೆ. ನಗರವಾಸಿಗಳು ಬಹಳ ಉತ್ಸಾಹ ವ್ಯಕ್ತಪಡಿಸುತ್ತಿದ್ದಾರೆ. ಡೆನ್ ತಿಮ್ಮಯ್ಯ, ಚೇತನ್ ಶಿವರಾಮ್, ಜಾಹನ್ ಗಿಲ್, ಡೀನ್ ಎಮ್, ಪ್ರಗತಿ ಗೌಡ, ನಿಕಿತಾ ತಕಲೆ ಮುಂತಾದ ದೇಶದ ಅಗ್ರಮಾನ್ಯ ಸ್ಪರ್ಧಿಗಳು ಭಾಗವಹಿಸುತ್ತಿದ್ದಾರೆ. **–ಫಾಲ್ಗುಣ ವಿ.ಅರಸ್, ಕ್ಲಬ್ ಅಧ್ಯಕ್ಷ**

ಭೂಮಿ ನೀಡಿದ ಕುಟುಂಬದವರಿಗೆ ಉದ್ಯಮಿಗಳು ಉದ್ಯೋಗ ನೀಡದಿದ್ದರೆ ಕ್ರಮ

● ಉದ್ಯಮಗಳಲ್ಲಿನ ಮಾನವ ಸಂಪನ್ಮೂಲ ವ್ಯವಸ್ಥಾಪಕರಿಗೆ ಡಿಸಿ ಎಚ್ಚರಿಕೆ ● ದೂರದ ಸಂಬಂಧಿಗಳು, ಸೂಕ್ತ ವಿದ್ಯಾರ್ಹತೆ ಇಲ್ಲದಿದ್ದವರಿಗೂ ಉದ್ಯೋಗ ನೀಡಬೇಕೆಂದು ಕಿರುಕುಳ ನೀಡುವುದು ಸರಿಯೇ?; ಉದ್ಯಮಗಳ ಅಳಲು ● ಇಮ್ಮಾವು ಕೈಗಾರಿಕಾ ಪ್ರದೇಶದ 45 ಎಕರೆ ಭೂಮಿ ಮಂಜೂರಾಗಿ, ನಕ್ಷೆ ಪಡೆದು, ಲಕ್ಷಾಂತರ ರೂ. ಹಣ ಪಾವತಿಸಿದ್ದರೂ ನಾನಾ ಅಡೆತಡೆ; ಉದ್ಯಮಿಗಳ ದೂರು ● ಸಮಸ್ಯೆ ನಿವಾರಣೆಗೆ ಅಧಿವೇಶನ ನಂತರ ಮುಖ್ಯಮಂತ್ರಿಗಳೊಂದಿಗೆ ಸಭೆ ಆಯೋಜನೆ: ಕೆಐಎಡಿಬಿ ಸಿಇಒ ಭರವಸೆ





ಮೈಸೂರು, ಡಿ. 2(ಆರ್‌ಕೆ)– ಕೈಗಾರಿಕಾ ಬಡಾವಣೆಗಾಗಿ ಭೂಮಿ ನೀಡಿದ ರೈತರ ಕುಟುಂಬದವರಿಗೆ ಉದ್ಯೋಗ ನೀಡಲು ನಿರಾಕರಿಸಿದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಉದ್ಯಮಗಳ ಮಾನವ ಸಂಪನ್ಮೂಲ ವ್ಯವಸ್ಥಾಪಕರಿಗೆ (ಹೆಚ್‌ಆರ್ ಮ್ಯಾನೇಜರ್ಸ್) ಎಚ್ಚರಿಕೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರೈತರು, ರೈತ ಸಂಘಗಳ ಮುಖಂಡರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಅಧಿಕಾರಿಗಳು ಹಾಗೂ ಕೈಗಾರಿಕಾ ಸಂಘಗಳ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಕೈಗಾರಿಕಾ ಪ್ರದೇಶ ನಿರ್ಮಾಣಕ್ಕೆ ಕೆಐಎಡಿಬಿ ಮೂಲಕ ಭೂ ಸ್ವಾಧೀನಪಡಿಸಿಕೊಂಡು, ಕಲ್ಪಿಸಿರುವ ಭೂಮಿಯಲ್ಲಿ ಸ್ಥಾಪಿಸಿರುವ ಉದ್ಯಮಗಳಲ್ಲಿ ಭೂಮಿ ನೀಡಿದ ರೈತರ ಕುಟುಂಬದ ಒಬ್ಬರಿಗೆ ಅವರ ವಿದ್ಯಾರ್ಹತೆಗನುಸಾರ ಉದ್ಯೋಗ ನೀಡಬೇಕು ಎಂದರು.

ಭೂಸ್ವಾಧೀನ ಪ್ರಕ್ರಿಯೆ ಮುಗಿದು ಭೂಮಿ ಮಂಜೂರಾತಿ ಮತ್ತು ಗುತ್ತಿಗೆ ಕರಾರು ಒಪ್ಪಂದ (ಲೀಸ್–ಕಂ–ಸೇಲ್ ಅಗ್ರಿಮೆಂಟ್) ನೋಂದಣಿ ಮಾಡುವಾಗ ವಿಧಿಸುವ ಷರತ್ತುಗಳಲ್ಲಿ ಭೂಮಿ ನೀಡಿದ ಕುಟುಂಬದವರಿಗೆ ಆಯಾಯ ಉದ್ಯಮಗಳು ಉದ್ಯೋಗ ನೀಡಬೇಕೆಂಬ ಷರತ್ತಿಗೆ ಒಪ್ಪಿಸಹಿ ಮಾಡಲಾಗಿರುತ್ತದೆ. ಅದನ್ನು ಪಾಲಿಸುವುದು ನಿವೇಶನ ಪಡೆದ ಉದ್ಯಮಿಗಳ ಜವಾಬ್ದಾರಿಯಾಗಿದೆ ಎಂದ ಜಿಲ್ಲಾಧಿಕಾರಿಗಳು, ಅದರಂತೆ ಕೆಲವರು ನಡೆದುಕೊಳ್ಳುತ್ತಿಲ್ಲ ಎಂದು ರೈತರು, ರೈತ ಸಂಘಟನೆಗಳ ಪ್ರಮುಖರು ಮುಖ್ಯಮಂತ್ರಿಗಳು ಹಾಗೂ ಜಿಲ್ಲಾಡಳಿತಕ್ಕೆ ದೂರು ನೀಡಿದ್ದಾರೆ ಎಂದರು. ಈ ಸಂಬಂಧ ಮುಖ್ಯಮಂತ್ರಿಗಳು ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎನ್.ಮಹೇಶ್ ಹಾಗೂ ತಮಗೆ ಮೌಖಿಕವಾಗಿ ನಿರ್ದೇಶನ ನೀಡಿರುವುದರಿಂದ ಭೂಮಿ ಕಳೆದುಕೊಂಡ ಕುಟುಂಬದ ಸದಸ್ಯರಿಗೆ ತಮ್ಮ ಉದ್ಯಮಗಳಲ್ಲಿ ಅವರ ವಿದ್ಯಾರ್ಹತೆಗನುಸಾರ ಉದ್ಯೋಗ ನೀಡಿ, ಅನುಪಾಲನಾ ವರದಿಯನ್ನು ಕೆಐಎಡಿಬಿ ಮೂಲಕ ಸಲ್ಲಿಸುವಂತೆಯೂ ಡಿಸಿ ಸೂಚನೆ ನೀಡಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಭೂಮಿ ನೀಡಿದ ರೈತರೊಬ್ಬರು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಮುಖ್ಯಮಂತ್ರಿಗಳು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕಾರಣ, ಅಗತ್ಯ ಕ್ರಮ ವಹಿಸಬೇಕು, ಸಾಧ್ಯವಾಗದಿದ್ದಲ್ಲಿ ಕಂಪನಿ ಬಂದ್ ಮಾಡಿ ಕೀಲಿ ಹಸ್ತಾಂತರಿಸಿ ಎಂದು ಡಾ.ರಾಜೇಂದ್ರ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಹೆಚ್‌ಆರ್ ಮ್ಯಾನೇಜರ್‌ಗಳ ಅಳಲು: ನಾವು ಷರತ್ತಿನನ್ವಯ ಕುಟುಂಬದ ಕಾನೂನು ಬದ್ಧ ವಾರಸುದಾರ (ರೈತರ ಮಕ್ಕಳಿಗೆ) ರಿಗೆ ಅವರ ವಿದ್ಯಾರ್ಹತೆಗನುಸಾರ ಕೆಲಸ ಕೊಡಲು ಸಿದ್ಧರಿದ್ದೇವೆ. ಬಹುತೇಕ ಉದ್ಯಮಗಳಲ್ಲಿ ಉದ್ಯೋಗ ನೀಡಲಾಗಿದೆ. ಆದರೆ, ಕೆಲವು ರೈತರು, ತಮ್ಮ ಕುಟುಂಬದವರಲ್ಲದ, ದೂರದ ಸಂಬಂಧಿಗಳಿಗೂ ಕೆಲಸ ಕೇಳುತ್ತಿದ್ದಾರೆ. ಉದ್ಯಮ ಕಾರ್ಯಾರಂಭಗೊಂಡು ನಾಲ್ಕೈದು ವರ್ಷಗಳ ನಂತರವೂ ಒತ್ತಾಯಿಸುತ್ತಿದ್ದಾರೆ. ಭೂಮಿ ನೀಡಿದ ಕುಟುಂಬದವರೆಂದರೆ ಯಾರಿಗೆ ಉದ್ಯೋಗ ನೀಡಬೇಕೆಂಬುದರ ವ್ಯಾಖ್ಯಾನದ ಬಗ್ಗೆ ಗೊಂದಲವಿದೆ. ಕೆಐಎಡಿಬಿ ಅದರ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ಉದ್ಯಮಗಳ ಹೆಚ್‌ಆರ್ ಮ್ಯಾನೇಜರ್‌ಗಳು ಜಿಲ್ಲಾಧಿಕಾರಿಗಳು ಮತ್ತು ಕೆಐಎಡಿಬಿ ಸಿಇಒ ಅವರಲ್ಲಿ ತಮ್ಮ ಅಳಲು ತೋಡಿಕೊಂಡರು.

ಕಟ್ಟಡ ನಿರ್ಮಿಸಲು ಅಡ್ಡಿ: ಕೆಐಎಡಿಬಿಯಿಂದ ಹಂಚಿಕೆಯಾಗಿರುವ ಭೂಮಿಗೆ ನಿಗದಿಪಡಿಸಿರುವ ಹಣ ಪಾವತಿಸಿ ಮಂಜೂರಾತಿ, ಸ್ವಾಧೀನ, ಎಲ್‌ಸಿಎಸ್ ಪಡೆದು, ಘಟಕ ಸ್ಥಾಪನೆಗೆ ನಕ್ಷೆ ಅನುಮೋದನೆಗಾಗಿ ನಿರಾಕ್ಷೇಪಣಾ ಪತ್ರ (ಎನ್‌ಓಸಿ)ವನ್ನೂ ಪಡೆಯಲಾಗಿದೆ. ಬ್ಯಾಂಕ್‌ಗಳಿಂದಲೂ ಸಾಲ ಪಡೆದುಕೊಂಡು ಎಲ್ಲಾ ದಾಖಲಾತಿಯೊಂದಿಗೆ ಕಟ್ಟಡ ನಿರ್ಮಿಸಲು ಮುಂದಾದರೆ ಕೆಲವರು ಸಂಘಟನೆ ಹೆಸರಲ್ಲಿ ಬಂದು ಸ್ಥಳದಲ್ಲಿ ಧರಣಿ ಮಾಡಿ, ಇದು ತಮ್ಮ ಜಾಗ ಎಂದು ಪ್ರತಿಪಾದಿಸಿ ಕಾಮಗಾರಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಕಾಟ್ಕಿ ಕೈಗಾರಿಕಾ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ದೂರಿತ್ತರು.

ಇಮ್ಮಾವು ಭಾಗದ 45 ಎಕರೆ ಕೈಗಾರಿಕಾ ಪ್ರದೇಶದಲ್ಲಿ ಮಂಜೂರಾಗಿರುವ ನೂರಾರು ಉದ್ಯಮ ನಿವೇಶನಗಳಲ್ಲಿ ಕೈಗಾರಿಕಾ ಕಟ್ಟಡ ನಿರ್ಮಿಸಲು ಅಡ್ಡಿಪಡಿಸುತ್ತಿರುವುದರಿಂದ ಕೋಟ್ಯಾಂತರ ರೂ. ಹಣ ವಿನಿಯೋಗಿಸಿರುವ ನವ ಉದ್ಯಮಿಗಳಿಗೆ ಆರ್ಥಿಕ ನಷ್ಟ ಉಂಟಾಗಿದೆ. ಅವರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿವೇಶನ ಮಂಜೂರು ಮಾಡಿ ಹಣ ಕಟ್ಟಿಸಿಕೊಂಡಿರುವ ಕೆಐಎಡಿಬಿ ಅಧಿಕಾರಿಗಳು ಕ್ರಮ ವಹಿಸಿ ಸಮಸ್ಯೆ ಬಗೆಹರಿಸುತ್ತಿಲ್ಲ ಎಂದು ಸಂಘದ ಪದಾಧಿಕಾರಿಗಳು ತಮ್ಮ ಅಳಲು ತೋಡಿಕೊಂಡರು.

ನಿರುದ್ಯೋಗ ನಿವಾರಣೆಗಾಗಿ ಉದ್ಯಮ ಸ್ಥಾಪಿಸುವ ಉದ್ದೇಶದಿಂದ ಸರ್ಕಾರ ನಿವೇಶನ ನೀಡಿದ ಮೇಲೆ ಕಟ್ಟಡ ನಿರ್ಮಿಸಲು ಅಡ್ಡಿಪಡಿಸುತ್ತಿರುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸದಿದ್ದರೆ, ಕೋಟ್ಯಾಂತರ ರೂ. ಹಣ ತೊಡಗಿಸಿದವರ ಪರಿಸ್ಥಿತಿ ಏನಾಗಬೇಕು ಎಂದು ಅವರು ಇದೇ ವೇಳೆ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ಸಿಎಂ ಜೊತೆ ಸಭೆ: ಈ ಎಲ್ಲಾ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳಲು ಬೆಳಗಾವಿ ಅಧಿವೇಶನ ಮುಗಿದ ಬಳಿಕ ಮುಖ್ಯಮಂತ್ರಿಗಳ ದಿನಾಂಕ ಪಡೆದು ಸಭೆ ಆಯೋಜಿಸಲಾಗುವುದು. ಅಲ್ಲಿ ಸುದೀರ್ಘವಾಗಿ ಚರ್ಚಿಸಿ ಸೂಕ್ತ ನಿರ್ದೇಶನ ಕೊಡಿಸಲು ಯತ್ನಿಸುತ್ತೇವೆ ಎಂದು ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎನ್.ಮಹೇಶ್ ತಿಳಿಸಿದರು.

ಕೆಐಎಡಿಬಿ ವಿಶೇಷ ಭೂಸ್ವಾಧಿನಾಧಿಕಾರಿ ಪ್ರಿಯದರ್ಶಿನಿ, ಅಭಿವೃದ್ಧಿ ಅಧಿಕಾರಿ ಸುಶ್ಮಾ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ದಿನೇಶ್‌ಕುಮಾರ್, ಕಾಟ್ಕಿ ಇಂಡಸ್ಟ್ರಿಯಲ್ ಅಸೋಸಿಯೇಷನ್ ಅಧ್ಯಕ್ಷ ಪ್ರಶಾಂತ್, ರೈತ ಮುಖಂಡರಾದ ಹೊಸ ಕೋಟೆ ಬಸವರಾಜು, ವಿದ್ಯಾಶಂಕರ ಸೇರಿದಂತೆ ಇನ್ನಿತರರು ಸಭೆಯಲ್ಲಿ ಉಪಸ್ಥಿತರಿದ್ದರು.


ಫಿಲಿಪೀನ್ಸ್: 7.5 ತೀವ್ರತೆಯ ಪ್ರಬಲ ಭೂಕಂಪ

ಮಿಂಡಾನಾವೊ: ಫಿಲಿಪೀನ್ಸ್‌ನಲ್ಲಿ ರಿಕ್ಟರ್ ಮಾಪಕದಲ್ಲಿ 7.5 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ ಎಂದು ಯೂರೋಪಿಯನ್ ಮೆಡಿಟರೇನಿಯನ್ ಭೂಕಂಪನ ಕೇಂದ್ರ ತಿಳಿಸಿದೆ. ಇದರ ಬೆನ್ನಲ್ಲೇ ಸುನಾಮಿ ಎಚ್ಚರಿಕೆ ನೀಡಲಾಗಿದೆ. ಫಿಲಿಪೀನ್ಸ್‌ನ ಮಿಂಡಾನಾವೊದಲ್ಲಿ ಪ್ರಬಲ ಭೂಕಂಪ ಸಂಭವಿಸಿದೆ. ಭೂಕಂಪದ ಕೇಂದ್ರ ಬಿಂದು 63 ಕಿ.ಮೀ. ಆಳದಲ್ಲಿ ದಾಖಲಾಗಿದೆ ಎಂದು ತಿಳಿಸಿದೆ. ಸಾವು–ನೋವುಗಳ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಬಂದಿಲ್ಲ.

'ಗಡಿ ದಾಟಿದ ಹೆಣ್ಣುಗಳ ಕಥನ' ಸೇರಿ ಮೂರು ಕೃತಿಗಳ ಬಿಡುಗಡೆ

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಕನಿಷ್ಠ 50 ಮಿಲಿಯನ್ ಹೆಣ್ಣು ಭ್ರೂಣ ಹತ್ಯೆ

ಯುನೈಟೆಡ್ ನೇಷನ್ಸ್ ಪಾಪ್ಯುಲೇಷನ್ ಫಂಡ್ ವರದಿ ಉಲ್ಲೇಖಿಸಿ ಚಿಂತಕ ಜಿ.ಎಸ್.ಜಯದೇವ ಆತಂಕ



ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್ಸ್‌ಗಳ ಸಂಸ್ಥೆ ಸಭಾಂಗಣದಲ್ಲಿ ಶನಿವಾರ ಡಾ.ಹೆಚ್.ಎಸ್.ಅನುಪಮಾ ಅವರ ಮೂರು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಮೈಸೂರು,ಡಿ.2(ಪಿಎಂ)– ಪ್ರಸ್ತುತ ಹೆಣ್ಣು ಭ್ರೂಣ ಹತ್ಯೆ ಪ್ರಕರಣವೊಂದು ಬಯಲಾಗಿದ್ದು, ಇಂದಿಗೂ ಇಂತಹ ಕೃತ್ಯ ನಡೆಯುತ್ತಿರುವುದು ದುರಂತ. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಕನಿಷ್ಠ 50 ಮಿಲಿಯನ್ ಹೆಣ್ಣು ಭ್ರೂಣ ಹತ್ಯೆಯಾಗಿದೆ ಎಂದು ಯುನೈಟೆಡ್ ನೇಷನ್ಸ್ ಪಾಪ್ಯುಲೇಷನ್ ಫಂಡ್ ವರದಿ ಹೇಳಿದೆ ಎಂದು ಚಿಂತಕ ಜಿ.ಎಸ್.ಜಯದೇವ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಅಂಗಳ ಸಾಹಿತ್ಯ ಬಳಗ ಮಾನಸ ಗಂಗೋತ್ರಿ, ಗದಗದ ಲಡಾಯಿ ಪ್ರಕಾಶನದ ಜಂಟಿ ಆಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಡಾ.ಹೆಚ್.ಎಸ್.ಅನುಪಮಾ ಅವರ 'ಜನಸೇವಾಸಕ್ತೆ ಯಶೋಧರ ದಾಸಪ್ಪ', 'ಗಡಿ ದಾಟಿದ ಹೆಣ್ಣುಗಳ ಕಥನ', 'ಪ್ಲಾಸ್ಟಿಕ್ ಪರಿಸರ' ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇತ್ತೀಚೆಗಿನ ವರದಿಯಲ್ಲಿ ಈ ಅಂಶ ಕಂಡು ಬಂದಿದೆ. ಹೀಗಾಗಿ ಪುರುಷರ ಮತ್ತು ಮಹಿಳೆಯರ ನಡುವಿನ ಲಿಂಗಾನುಪಾತದಲ್ಲಿ ವ್ಯತ್ಯಾಸ ಉಂಟಾಗಿದ್ದು, ಮಹಿಳೆಯರ ಸಂಖ್ಯೆ ಕಡಿಮೆಯಾಗಿದೆ ಎಂದು ವಿಷಾದಿಸಿದರು.

ಪುರುಷ ಪ್ರಧಾನ ಸಮಾಜದಲ್ಲಿ ಸಮಾನತೆ ಕನಸನ್ನು ಜೀವಂತವಾಗಿ ಇಟ್ಟುಕೊಂಡು ಅದನ್ನು ಪೋಷಿಸಿಕೊಂಡು ಬರುವುದು ಕೇವಲ ಮಹಿಳೆಯರ ಕೆಲಸ ಮಾತ್ರವಲ್ಲ. ಇದರಲ್ಲಿ ಪುರುಷರ ಜವಾಬ್ದಾರಿಯೂ ಇದೆ. ಶಕ್ತಿಧಾಮ ಸಂಸ್ಥೆಯಲ್ಲಿ ಸುಮಾರು 25 ವರ್ಷಗಳಿಂದ ಕೆಲಸ ಮಾಡಿದ್ದೇನೆ. ಹಾಗಾಗಿ ಮಹಿಳೆಯರು ಅನುಭವಿಸಿದ ಕಷ್ಟಗಳನ್ನು ಹತ್ತಿರದಿಂದ ಕಂಡಿದ್ದೇನೆ. ಏನೂ ತಪ್ಪು ಮಾಡದೇ ಜೈಲಿಗೆ ಹೋದ ಎಷ್ಟೋ ಮಹಿಳೆಯರನ್ನೂ ನೋಡಿದ್ದೇನೆ. ಎಲ್ಲೋ ಒಂದು ಕಡೆ ಸ್ತ್ರೀ ದ್ವೇಷದ ಮನೋಭಾವ ಬಹಳ ಕಾಲದಿಂದ ನಮ್ಮ ನಡುವೆ ನಡೆದು ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ತ್ರೀಯರ ಮೇಲಿನ ದ್ವೇಷವನ್ನು ಎಲ್ಲಾ ಸಂಸ್ಕೃತಿಗಳಲ್ಲೂ ಕಾಣಬಹುದು. ನಮ್ಮಲ್ಲಿಯೂ ಸಂಸ್ಕೃತಿ, ಸಾಹಿತ್ಯ, ಸಂಗೀತ ಸೇರಿದಂತೆ ಪ್ರತಿಯೊಂದರಲ್ಲೂ ಎಲ್ಲೋ ಒಂದು ಕಡೆ ಮಹಿಳೆಯರನ್ನು ನಿಯಂತ್ರಣದಲ್ಲಿ ಇಡುವುದನ್ನೇ ನೋಡುತ್ತಿದ್ದೇವೆಯೇ ಹೊರತು ಸಮಾನವಾಗಿ ನೋಡುವುದು ವಿರಳ. ಸಮಾನತೆ ಎನ್ನುವುದು ವರದಾನವಲ್ಲ. ಅದು ವಿವೇಕ ಎಂದು ಭಾವಿಸಬೇಕು ಎಂದರು.


'ಜನಸೇವಾಸಕ್ತೆ ಯಶೋಧರ ದಾಸಪ್ಪ' ಕೃತಿ ಕುರಿತು ಮಾತನಾಡಿದ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಕಳೆದ 9 ವರ್ಷಗಳಲ್ಲಿ ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಎಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ನ್ಯಾಷನಲ್ ಕ್ರೈಂ ರೆಕಾರ್ಡ್ಸ್ ಬ್ಯುರೋದ ಅಂಕಿ–ಅಂಶದಲ್ಲಿ ಕಾಣಬಹುದು. ಪ್ರತಿ 20 ನಿಮಿಷಕ್ಕೊಂದು ಅತ್ಯಾಚಾರ ನಡೆಯುತ್ತಿದೆ. ಹೆಣ್ಣಿನ ಮೇಲಿನ ದೌರ್ಜನ್ಯ ಯಾವುದೇ ಒಂದು ಧರ್ಮ–ಜಾತಿ ಮತ್ತು ಪ್ರದೇಶಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಈ ಕೃತಿಯಲ್ಲಿ ಯಶೋಧರ ದಾಸಪ್ಪರ ಬಗ್ಗೆ ಮಾತ್ರವಲ್ಲದೆ, ಆ ಕಾಲದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಯನ್ನು ಕಾಣಬಹುದು. ಕನ್ನಡದಲ್ಲಿ ರಾಜಕೀಯ ಇತಿಹಾಸ ಕುರಿತು ಸರಿಯಾದ ಪುಸ್ತಕಗಳು ಇಂದಿಗೂ ಬಂದಿಲ್ಲ. ಹಾಗಾಗಿ ಕರ್ನಾಟಕದ ರಾಜಕೀಯದ ಇತಿಹಾಸ ಅರಿಯಲು ಇಂತಹ ಪುಸ್ತಕಗಳು ಸಹಕಾರಿ. ಈ ಕೃತಿ ಓದಿದರೆ ಯಶೋಧರ ದಾಸಪ್ಪರ ಬದುಕಿನ ಕಥೆಗಳು ಇಂದಿನ ವರ್ತಮಾನಕ್ಕೆ ಮುಖಾಮುಖಿ ಆಗುವುದನ್ನೂ ಕಾಣಬಹುದು. ಈ ಕೃತಿಯಲ್ಲಿ ಕಾಂಗ್ರೆಸ್ ಇತಿಹಾಸವೂ ದೊರೆಯಲಿದೆ. ಯಶೋಧರ ದಾಸಪ್ಪ ಅವರು ಕಾಂಗ್ರೆಸ್ ಪಕ್ಷದ ಮೊದಲ ಮತ್ತು ಕೊನೆಯ ಮಹಿಳಾ ಅಧ್ಯಕ್ಷರು. ಇಂದಿಗೂ ಇನ್ನೊಬ್ಬ ಮಹಿಳೆ ಅಧ್ಯಕ್ಷೆಯಾಗಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಯಶೋಧರ ದಾಸಪ್ಪ ಅವರಿಗೆ ಕೆಲ ಅನುಕೂಲಗಳೂ ಇದ್ದವು. ಪ್ರಖ್ಯಾತ ವಕೀಲರೂ ಆಗಿ ಅಂದಿನ ಮೈಸೂರು ಅರಸರ ಸಂಸ್ಥಾನದೊಂದಿಗೆ ಉತ್ತಮ ಬಾಂಧವ್ಯವನ್ನೂ ಹೊಂದಿದ್ದ ರಾಮಯ್ಯನವರು ತಮ್ಮ ಪುತ್ರಿ ಯಶೋಧರ ದಾಸಪ್ಪರಿಗೆ ಪ್ರೋತ್ಸಾಹ ನೀಡದರು. ಸಿಕ್ಕ ಅನುಕೂಲತೆ ಬಳಸಿಕೊಂಡು ಯಶೋಧರ ದಾಸಪ್ಪ ಬೆಳೆದರು. ಯಶೋಧರ ದಾಸಪ್ಪ ಪಕ್ಷಕ್ಕೆ ಬದ್ಧತೆಯಿಂದ ಇದ್ದರು. ಪಾನ ನಿಷೇಧ ವಿಚಾರದಲ್ಲೂ ಅದೇ ರೀತಿಯಲ್ಲಿ ಬದ್ಧತೆ ಹೊಂದಿದ್ದ ಅವರು ಇದೇ ಕಾರಣಕ್ಕೆ ಪಕ್ಷಕ್ಕೆ ರಾಜೀನಾಮೆ ಕೊಟ್ಟರು ಎಂದರು. ವಿಧಾನಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಸಮಾಜಶಾಸ್ತ್ರಜ್ಞೆ ಪ್ರೊ.ಆರ್.ಇಂದಿರಾ, ಲಡಾಯಿ ಪ್ರಕಾಶನದ ಪ್ರಕಾಶಕ ಬಸವರಾಜ ಸೂಳಿಬಾವಿ, ಪತ್ರಕರ್ತರಾದ ಎಸ್.ರಶ್ಮಿ, ವಿನೋದ್ ಮಹದೇವಪುರ, ಕೃತಿಗಳ ಕರ್ತೃ ಡಾ.ಹೆಚ್.ಎಸ್.ಅನುಪಮಾ ಮತ್ತಿತರರು ಹಾಜರಿದ್ದರು.

ಜಿಲ್ಲೆಗೊಂದು ವಿಶ್ವವಿದ್ಯಾನಿಲಯದ ಫಲ

ಮೈಸೂರು ವಿವಿ ಪ್ರವೇಶಾತಿ ಕುಸಿತ



ಮೈಸೂರು,ಡಿ.2(ಎಂಕೆ)–ಶತಮಾನದ ಇತಿಹಾಸ ಹೊಂದಿರುವ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸಕ್ತ ವರ್ಷದ ಪ್ರವೇಶಾತಿ ಕುಸಿತ ಕಂಡಿದೆ. ಮೈಸೂರು ವಿಶ್ವವಿದ್ಯಾಲಯಲಕ್ಕೆ ಸೇರ್ಪಡೆಯಾಗಿದ್ದ ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ಪ್ರತ್ಯೇಕ ವಿಶ್ವವಿದ್ಯಾಲಯಗಳು ಆರಂಭಗೊಂಡ ಹಿನ್ನೆಲೆಯಲ್ಲಿ ಈ ವರ್ಷ ಮೈಸೂರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಕಡಿಮೆ ಆಗಿದೆ.

ಕಳೆದ ವರ್ಷ ವಿವಿಧ ಸ್ನಾತಕೋತ್ತರ ಹಾಗೂ ಪದವಿ ಕೋರ್ಸ್‌ಗಳಿಗೆ 36 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಆದರೆ, ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಸುಮಾರು 26 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, 10 ಸಾವಿರ ಕಡಿಮೆ ಆದಂತಾಗಿದೆ.

111ಕ್ಕೆ ಇಳಿಕೆ: ಮೈಸೂರು ವಿವಿ ವ್ಯಾಪ್ತಿಯಲ್ಲಿದ್ದ 232 ಕಾಲೇಜುಗಳ ಸಂಖ್ಯೆ 111ಕ್ಕೆ ಇಳಿದಿದೆ. ಬೋಧಕ–ಬೋಧಕೇತರ ಸೇರಿದಂತೆ ಖಾಯಂ ನೌಕರರಿಗೆ ಸರ್ಕಾರದಿಂದಲೇ ವೇತನ ಬರುತ್ತದೆ. ಅತಿಥಿ ಉಪನ್ಯಾಸಕರು ಸೇರಿದಂತೆ ಖಾಯಂ ಅಲ್ಲದ ಸಿಬ್ಬಂದಿಗೆ ವಿವಿಯೇ ವೇತನ ಭರಿಸಬೇಕಿದೆ.

ಹುದ್ದೆ ಖಾಲಿ: ಮೈಸೂರು ವಿವಿಗೆ ಸುಮಾರು 665 ಖಾಯಂ ಪ್ರಾಧ್ಯಾಪಕರ ಅಗತ್ಯವಿದೆ. ಆದರೆ, ಪ್ರಸ್ತುತ ಕೇವಲ 245 ಖಾಯಂ ಪ್ರಾಧ್ಯಾಪಕರು ಕರ್ತವ್ಯ ನಿರ್ವಹಿಸುತ್ತಿದ್ದು, ಸುಮಾರು 420 ಹುದ್ದೆ ಖಾಲಿ ಉಳಿದಿದೆ. ಬೋಧಕರೇತರರು ವೃಂದದಲ್ಲೂ ತಾತ್ಕಾಲಿಕ ಸಿಬ್ಬಂದಿ ಸಂಖ್ಯೆ ಹೆಚ್ಚಿದ್ದು, ಮೈಸೂರು ವಿವಿಯು 900 ಅತಿಥಿ ಉಪನ್ಯಾಸಕರಿಂದಲೇ ನಡೆಯುತ್ತಿದೆ. ಇದರ ಪರಿಣಾಮ ವಿವಿಯ ಗುಣಮಟ್ಟದ ಶಿಕ್ಷಣಕ್ಕೆ ತೊಂದರೆಯಾಗುತ್ತಿದ್ದು, ಸಂಶೋಧನೆಗೂ ತೊಡಕಾಗಿದೆ. ಕಳೆದ ಬಾರಿ ನ್ಯಾಕ್‌ನಿಂದ 'ಎ' ಗ್ರೇಡ್ ಪಡೆಯುಲು ಅಧ್ಯಾಪಕರ ಕೊರತೆಯೇ ಪ್ರಮುಖ ಕಾರಣವಾಗಿದ್ದು, ಮೈಸೂರು ವಿವಿಯ ಹಿರಿಮೆ ಮತ್ತಷ್ಟು ಕುಸಿಯುವ ಆತಂಕ ಎದುರಾಗಿದೆ.

ಸರ್ಕಾರದಿಂದ ಅನುದಾನವಿಲ್ಲ



ಜಿಲ್ಲೆಗೊಂದು ವಿವಿ ಸ್ಥಾಪನೆಯಾದ ಬಳಿಕ ಮೈಸೂರು ವಿವಿ ಕಾರ್ಯ ವ್ಯಾಪ್ತಿ ಮೈಸೂರು ಜಿಲ್ಲೆಗಷ್ಟೇ ಸೀಮಿತಗೊಂಡಿದೆ. ಇದರಿಂದ ಸ್ನಾತಕೋತ್ತರ ಹಾಗೂ ಪದವಿ ಕೋರ್ಸ್ ಪ್ರವೇಶಾತಿಯಲ್ಲಿ 10 ಸಾವಿರ ವಿದ್ಯಾರ್ಥಿಗಳು ಕಡಿಮೆ ಆಗಿದ್ದಾರೆ. ಅಲ್ಲದೆ ಸರ್ಕಾರ ಹಾಗೂ ಯುಜಿಸಿಯಿಂದ ಬರುತ್ತಿದ್ದ ಅನುದಾನವೂ ಕಡಿಮೆ ಆಗಿದೆ. **–ಪ್ರೊ.ಎನ್.ಕೆ.ಲೋಕನಾಥ್, ಮೈಸೂರು ವಿವಿ ಕುಲಪತಿ**

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಭೇಟಿಯಾದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶನಿವಾರ ನವ ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಹೂಗುಚ್ಛ ನೀಡಿ, ಕೃತಜ್ಞತೆ ಸಮರ್ಪಿಸಿ, ಆಶೀರ್ವಾದ ಪಡೆದರು.

ಮೈಸೂರು,ಡಿ.2(ಪಿಎಂ)–ಪಕ್ಷದ ರಾಜ್ಯಾಧ್ಯಕ್ಷರಾಗಿ ಜವಾಬ್ದಾರಿ ಸ್ವೀಕರಿಸಿರುವ ಬಿ.ವೈ.ವಿಜಯೇಂದ್ರ, ಈ ಹಿನ್ನೆಲೆಯಲ್ಲಿ ಇಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ, ಕೃತಜ್ಞತೆ ಸಮರ್ಪಿಸಿ, ಆಶೀರ್ವಾದ ಪಡೆದರು.

ಅಲ್ಲದೆ, ಇಂದು ಜೆ.ಪಿ.ನಡ್ಡಾ ಅವರ ಜನ್ಮದಿನವೂ ಆಗಿರುವ ಹಿನ್ನೆಲೆಯಲ್ಲಿ ಇಂದೇ ಅವರನ್ನು ಭೇಟಿ ಮಾಡಿದ ಬಿ.ವೈ.ವಿಜಯೇಂದ್ರ, ಇದೇ ವೇಳೆ ಹುಟ್ಟುಹಬ್ಬದ ಶುಭಾಷಯವನ್ನೂ ಕೋರಿದರು. ಭಾರತೀಯ ಜನತಾ ಪಾರ್ಟಿಗೆ ಹೊಸ ಚೈತನ್ಯ ತುಂಬಲು ಯುವ ಪೀಳಿಗೆಯನ್ನು ಉತ್ತೇಜಿಸುತ್ತಿರುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ನನ್ನ ಬಗ್ಗೆ ಇರಿಸಿರುವ ಅಚಲ ನಂಬಿಕೆಯ ನುಡಿಗಳು ಅದಮ್ಯ ಆತ್ಮವಿಶ್ವಾಸದ ಉತ್ಸಾಹ ಮೂಡಿಸಿದೆ. ಅಲ್ಲದೆ, ಇದು ಬಹು ದೊಡ್ಡ ಹೊಣೆಗಾರಿಕೆಯನ್ನೂ ನೆನಪಿಸಿತು ಎಂದು ಬಿ.ವೈ.ವಿಜಯೇಂದ್ರ ಇದೇ ವೇಳೆ ತಿಳಿಸಿದರು.

ವರಿಷ್ಠರು ಇರಿಸಿರುವ ನಿರೀಕ್ಷೆಯ ಗುರಿ ತಲುಪುವುದೇ ನನ್ನ ಮಹಾ ಸಂಕಲ್ಪವಾಗಿದೆ ಎಂದೂ ಹೇಳಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಜಿ.ವಿ.ರಾಜೇಶ್ ಮತ್ತಿತರರು ಹಾಜರಿದ್ದರು.

ದೊಡ್ಡಕಾನ್ಯ ಬಳಿ ಹುಲಿ ಸೆರೆಗಾಗಿ ಹೈರಾಣಾದ ಅರಣ್ಯ ಸಿಬ್ಬಂದಿ

● ವದಂತಿ, ಸುಳ್ಳು ಮಾಹಿತಿಯಿಂದ ಗೊಂದಲ ● ರಾತ್ರಿಯಿಡೀ ಕಾಯ್ದರೂ ಚಳ್ಳೆಹಣ್ಣು ತಿನ್ನಿಸಿ, ಅಜ್ಞಾತವಾಗುತ್ತಿರುವ ಹುಲಿರಾಯ



ಹುಲಿ ಸೆರೆಗೆ ರಾತ್ರಿ ವೇಳೆ ಕಾರ್ಯಾಚರಣೆ ನಡೆಸುತ್ತಿರುವುದು.

ಮೈಸೂರು,ಡಿ.2(ಎಂಟಿವೈ)–ಮೈಸೂರು ತಾಲೂಕಿನ ದೊಡ್ಡಕಾನ್ಯ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಭೀತಿಯುಂಟು ಮಾಡಿರುವ ಹುಲಿ ಸೆರೆಗೆ ನಾಲ್ಕನೇ ದಿನವೂ ವ್ಯಾಪಕ ಕಾರ್ಯಾಚರಣೆ ಮುಂದುವರೆಸಿದ್ದು, ಶನಿವಾರ ದಿನವಿಡೀ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದರೂ ಹುಲಿ ಸುಳಿವು ಪತ್ತೆಯಾಗಿಲ್ಲ.

ಕಳೆದ 5 ದಿನಗಳಿಂದ ಹುಲಿ ಕಣ್ಣಾಮುಚ್ಚಾಲೆ ಆಟ ಆಡುತ್ತಿದ್ದು, ಸುರಕ್ಷಿತವಾಗಿ ಹುಲಿ ಸೆರೆ ಹಿಡಿಯಲೇಬೇಕೆಂದು ಅರಣ್ಯ ಇಲಾಖೆ ಬಿಗಿಪಟ್ಟಿನೊಂದಿಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದೆ. ಮೂರು ದಿನಗಳಿಂದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಕಾಣಿಸಿಕೊಂಡು ಕಣ್ಮರೆಯಾಗುತ್ತಿರುವ ಹುಲಿಯನ್ನು ಬೋನ್‌ಗೆ ಕೆಡವಲು ಅರಣ್ಯ ಇಲಾಖೆ ಸಂಚು ನಡೆಸಿದ್ದರೆ, ಹುಲಿ ಬೋನ್ ಬಳಿ ಬಂದು ಎಚ್ಚೆತ್ತುಕೊಂಡು ವಾಪಸ್ಸಾಗುವ ಮೂಲಕ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ.

ಹುಲಿ ಸೆರೆಗೆ 60 ಸಿಬ್ಬಂದಿ, 7 ಅಧಿಕಾರಿಗಳು, 30 ನೈಟ್ ವಿಷನ್ ಥರ್ಮಲ್ ಸೆನ್ಸರ್ ಕ್ಯಾಮರಾ, 8 ಜಿಎಸ್‌ಎಂ ಕ್ಯಾಮರಾ, 2 ಪಿಟಿಝಡ್ ಕ್ಯಾಮರಾ, 4 ಐಆರ್ ಸಿಸಿ ಕ್ಯಾಮರಾ ಹಾಗೂ 3 ದೊಡ್ಡ ಬೋನ್ ಹಾಗೂ 8ಕ್ಕೂ ಹೆಚ್ಚು ಸಣ್ಣ ಬೋನ್ ಇಟ್ಟು ಕಾರ್ಯಾಚರಣೆ ಮುಂದುವರೆಸಿದ್ದಾರೆ. ಡಿ.1ರಂದು ಸಂಜೆ ದೊಡ್ಡಕಾನ್ಯ ಬಳಿ ಟಾಟಾ ಮೈನಿಂಗ್ ಪ್ರದೇಶದಲ್ಲಿ ಹುಲಿ ನೋಡಿರುವುದಾಗಿ ಕೆಲವರು ಮಾಹಿತಿ ನೀಡಿದ್ದರು. ಸಂಜೆ ಟಿವಿಎಸ್ ಫ್ಯಾಕ್ಟರಿಯ ಸೀವೆಜ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಹಿಂಭಾಗ ಹುಲಿ ಕಂಡಿರುವುದಾಗಿ ಮತ್ತೊಂದು ಮಾಹಿತಿ ಬಂದಿತ್ತು. ಆದರೆ ಎರಡೂ ಸ್ಥಳದಲ್ಲೂ ಡ್ರೋನ್ ಕ್ಯಾಮರ ಬಳಸಿ ಪರಿಶೀಲಿಸಲಾಯಿತು. ಬಳಿಕ ಅರಣ್ಯ ಸಿಬ್ಬಂದಿ ಹಾಗೂ ಎಲ್‌ಟಿಎಫ್ ತಂಡ ಕೂಂಬಿಂಗ್ ಕಾರ್ಯಾಚರಣೆ ಮಾಡಿದರೂ ಹುಲಿ ಪತ್ತೆಯಾಗಲೇ ಇಲ್ಲ.

ಹುಲಿ ಬದಲು ಚಿರತೆ ದೃಶ್ಯ ಸೆರೆ: ಹುಲಿ ಜಾಡು ಪತ್ತೆಗಾಗಿ ವಿವಿಧೆಡೆ ಅಳವಡಿಸಿರುವ ಕ್ಯಾಮರಾ ಟ್ರ್ಯಾಪ್‌ನಲ್ಲಿ ದಾಖಲಾಗುವ ಪ್ರತಿಯೊಂದು ಚಿತ್ರವನ್ನು ಕೂಲಂಕಷವಾಗಿ ಪರಿಶೀಲಿಸಲು ತಂಡವೊಂದನ್ನು ನಿಯೋಜಿಸಲಾಗಿದೆ. ಟಿವಿಎಸ್ ಫ್ಯಾಕ್ಟರಿ ಸೀವೆಜ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಬಳಿ ಅಳವಡಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಚಿರತೆ ಸಂಚಾರದ ದೃಶ್ಯ ಸೆರೆ ಸಿಕ್ಕಿದೆ. ಆ ಚಿರತೆ ಸೆರೆಗೂ ಬೋನ್ ಇಡಲಾಗಿದೆ.

ಮುಂದುವರೆದ ಕಾರ್ಯಾಚರಣೆ: ಹುಲಿ ಪತ್ತೆಗಾಗಿ ಶನಿವಾರ ರಾತ್ರಿಯೂ ಕಾರ್ಯಾಚರಣೆ ಮುಂದುವರೆಸಲಾಗಿದೆ. ಸ್ಥಳದಲ್ಲಿ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿಪ್ರಿಯಾ, ಡಿಸಿಎಫ್ ಡಾ.ಕೆ.ಎನ್. ಬಸವರಾಜು, ಎಸಿಎಫ್ ಎನ್.ಲಕ್ಷ್ಮೀಕಾಂತ, ಆರ್‌ಎಫ್‌ಓ ಸುರೇಂದ್ರ ಹಾಗೂ ಹಲವು ಡಿಆರ್‌ಎಫ್ ಸೇರಿದಂತೆ ಎಲ್‌ಟಿಎಫ್ ಸಿಬ್ಬಂದಿಗಳು ಹುಲಿ ಜಾಡು ಪತ್ತೆ ಕಾರ್ಯಾಚರಣೆಯಲ್ಲಿ ತೊಡಗಿದ್ದಾರೆ.

ರಾತ್ರಿ ವೇಳೆ ಓಡಾಡಬೇಡಿ, ವದಂತಿಗಳಿಗೆ ಹೆದರಬೇಡಿ

"ಹುಲಿ ಪತ್ತೆಗೆ ಸೆರೆಗೆ ಎಲ್ಲಾ ರೀತಿಯ ಆಯಾಮಗಳಲ್ಲೂ ಕಾರ್ಯಾಚರಣೆ ನಡೆಸಲಾಗುತ್ತಿದೆ. ಹಗಲು, ರಾತ್ರಿ ನಮ್ಮ ತಂಡ ಹುಲಿ ಸೆರೆ ಹಿಡಿಯಲೇಬೇಕೆಂದು ಶ್ರಮಿಸುತ್ತಿದೆ. ಅರಣ್ಯ ಸಿಬ್ಬಂದಿಗಳ ಕಾರ್ಯಾಚರಣೆಗೆ ಕೆಲವು ಕಿಡಿಗೇಡಿಗಳು ಹಬ್ಬಿಸುವ ವದಂತಿ ಹಿನ್ನಡೆಯಾಗುವಂತೆ ಮಾಡಿದೆ. ಅರಣ್ಯ ಇಲಾಖೆಗೆ ಗ್ರಾಮಸ್ಥರು ಸಹಕರಿಸಬೇಕು. ಹುಲಿ ಸೆರೆ ಹಿಡಿಯುವವರೆಗೂ ರಾತ್ರಿ ವೇಳೆ ಓಡಾಡಬಾರದು. ವದಂತಿಗೆ ಹೆದರಬಾರದು. ನೈಜ ದೂರು ಬಂದ ಸ್ಥಳದಲ್ಲಿ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸಲಾಗಿದೆ. **–ಡಾ.ಕೆ.ಎನ್.ಬಸವರಾಜು, ಡಿಸಿಎಫ್**

ಹೆಣ್ಣು ಭ್ರೂಣ ಪತ್ತೆ, ಹತ್ಯೆ ತಡೆಯಲು ಜಾಗೃತ ದಳ ರಚನೆ

ಮಂಡ್ಯ, ಡಿ.2– ಹೆಣ್ಣು ಮಕ್ಕಳ ಜನನ ಸುರಕ್ಷಿತಗೊಳಿಸಲು, ಖಾತ್ರಿಪಡಿಸಲು ಹಾಗೂ ಹೆಣ್ಣು ಮಕ್ಕಳ ರಕ್ಷಣೆಗಾಗಿ ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣ ಲಿಂಗ ಪತ್ತೆ ನಿಷೇಧ ಕಾಯ್ದೆ (PC&PNDT) Prohibition of sex selection act–1994ನ್ನು ರೂಪಿಸಲಾಗಿದ್ದು, ಹಾಗೂ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಕಾಯ್ದೆ 2007 (KPMEA) ಕಾಯ್ದೆಗಳು ಯಾವುದೇ ಆಸ್ಪತ್ರೆಗಳಲ್ಲಾಗಲೀ, ಲ್ಯಾಬ್‌ಗಳಲ್ಲಾಗಲೀ, ಕ್ಲಿನಿಕ್‌ಗಳಲ್ಲಾಗಲೀ ಹಾಗೂ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಾಗಲೀ ಕಾನೂನುಬಾಹಿರವಾಗಿ ಭ್ರೂಣಲಿಂಗ ಪತ್ತೆ ಹಚ್ಚುವುದು ಹಾಗೂ ಕುಟುಂಬದವರಿಗೆ ಮಾಹಿತಿ ನೀಡುವುದನ್ನು ನಿಷೇಧಿಸಿದೆ. ಈ ಬಗ್ಗೆ ಜಿಲ್ಲಾ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿ ಕಾರ್ಯ ನಿರ್ವಹಿಸುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಇತ್ತೀಚೆಗೆ ಮಂಡ್ಯ ತಾಲೂಕಿನ ಹಾಡ್ಯ ಗ್ರಾಮದಲ್ಲಿ ಕಾನೂನಿನ ಕಣ್ಣಿಗೆ ಮಣ್ಣೆರಚಿ, ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣ ಲಿಂಗ ಪತ್ತೆ ಪರೀಕ್ಷೆ ನಡೆಸಿ, ಬೇರೆ ಬೇರೆ ಸ್ಥಳಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ವರದಿಯಂತೆ ವಿವಾದಿತ ವಿಷಯ ಬಹಳಷ್ಟು ಸುದ್ದಿಯಾಗಿದೆ ಆದ್ದರಿಂದ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ಬಗ್ಗೆ ಸಾರ್ವಜನಿಕವಾಗಿ ಋಣಾತ್ಮಕ ಅಭಿಪ್ರಾಯ ಉಂಟಾಗಿದ್ದು, ಈ ಬಗ್ಗೆ ಬೆಂಗಳೂರಿನ ಬೈಯಪ್ಪನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಈ ಪ್ರಕರಣದಲ್ಲಿ ಕೆಲವು ದುಷ್ಟರು ಸ್ಥಳೀಯರ ಸಹಕಾರ ಪಡೆದು, ಮುಚ್ಚಿ ಹೋಗಿರುವ ಆಲೆಮನೆಯಲ್ಲಿ ರಹಸ್ಯವಾಗಿ ಗರ್ಭಿಣಿಯರನ್ನು ಕರೆತಂದು ಭ್ರೂಣ ಲಿಂಗ ಪತ್ತೆ ಹಚ್ಚಿ, ಹೆಣ್ಣು ಭ್ರೂಣ ಹತ್ಯೆಗೆ ಕಾರಣಕರ್ತರಾಗಿರುತ್ತಾರೆ ಎಂಬುದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಇದು ಜಿಲ್ಲಾಡಳಿತಕ್ಕೆ ಮುಜುಗರ ಉಂಟು ಮಾಡುವಂತಹ ವಿಷಯ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹೆಣ್ಣು ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆಯಂತಹ ಪ್ರಕರಣಗಳು ನಡೆಯದಂತೆ ತೀವ್ರ ನಿಗಾ ವಹಿಸಲು ತಾಲೂಕು ಹಾಗೂ ಗ್ರಾಪಂ ಮಟ್ಟದಲ್ಲಿ ಜಾಗೃತ ದಳ ರಚಿಸಿದ್ದು, ತಾಲೂಕು ಮಟ್ಟದ ಜಾಗೃತ ದಳದಲ್ಲಿ ತಹಸೀಲ್ದಾರ್ ಅಧ್ಯಕ್ಷರಾಗಿ, ತಾಪಂ ಇಓ ಸಹ ಅಧ್ಯಕ್ಷರಾಗಿ, ಶಿಶು ಅಭಿವೃದ್ಧಿ ಅಧಿಕಾರಿ, ಸಿಪಿಐ, ತಾಲೂಕು ಸಮಾಜ ಕಲ್ಯಾಣ ಅಧಿಕಾರಿ, ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಸದಸ್ಯರಾಗಿ ಹಾಗೂ ತಾಲೂಕು ಆರೋಗ್ಯ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದಿದ್ದಾರೆ.

ಗ್ರಾಪಂ ಮಟ್ಟದ ಜಾಗೃತ ದಳದಲ್ಲಿ ಪಿಡಿಓ ಅಧ್ಯಕ್ಷರಾಗಿ, ಉಪ ತಹಸೀಲ್ದಾರ್ ಸಹ ಅಧ್ಯಕ್ಷರಾಗಿ, ರಾಜಸ್ವ ನಿರೀಕ್ಷಕರು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಸ್ಥಳೀಯ ಶಾಲಾ ಮುಖ್ಯೋಪಾಧ್ಯಾಯರು, ಗ್ರಾಮ ಗಸ್ತು ಸಿಬ್ಬಂದಿ (ಪೊಲೀಸ್ ಇಲಾಖೆ), ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಸದಸ್ಯರಾಗಿ ಹಾಗೂ ಸಮುದಾಯ ಆರೋಗ್ಯ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಗ್ರಾಮ ಮಟ್ಟದ ಸಮಿತಿಯಲ್ಲಿ ರಾಜಸ್ವ ನಿರೀಕ್ಷಕರು ಅಧ್ಯಕ್ಷರಾಗಿ, ಗ್ರಾಮ ಆಡಳಿತ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಗಸ್ತು ಸಿಬ್ಬಂದಿ (ಪೊಲೀಸ್ ಇಲಾಖೆ) ಹಾಗೂ ಗ್ರಾಮ ಸಹಾಯಕರು ಸದಸ್ಯರಾಗಿರುತ್ತಾರೆ ಎಂದು ವಿವರಿಸಿದ್ದಾರೆ.

ಜಿಲ್ಲಾಧಿಕಾರಿ ಡಾ.ಕುಮಾರ್



ರಚಿಸಲಾಗಿರುವ ಸಮಿತಿ/ ಜಾಗೃತದಳ ತಮ್ಮ ವ್ಯಾಪ್ತಿಯಲ್ಲಿ ಗರ್ಭ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ಕಾರ್ಯ ನಡೆಯದಂತೆ ತೀವ್ರ ನಿಗಾ ವಹಿಸಬೇಕು. ಗ್ರಾಪಂ ಸದಸ್ಯರ ಸಹಕಾರ ಪಡೆದು ಭ್ರೂಣ ಲಿಂಗ ಪತ್ತೆ ಅಪರಾಧವೆಂಬುದರ ಬಗ್ಗೆ ಗ್ರಾಪಂ ಮಟ್ಟದಲ್ಲಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಿದ್ದು, ಸ್ಥಳೀಯ ಮುಖಂಡರು ಜನಪ್ರತಿನಿಧಿಗಳೊಂದಿಗೆ ನಿರಂತರ ಸಂಪರ್ಕ ಸಾಧಿಸಿ ನಕಲಿ ವೈದ್ಯರು ಇರುವ ಬಗ್ಗೆ ಗೌಪ್ಯ ಸ್ಥಳಗಳಲ್ಲಿ ಅಕ್ರಮ ಮತ್ತು ಅಕ್ಷಮ್ಯ ಅಪರಾಧ ಎಸಗುತ್ತಿರುವವರನ್ನು ಪತ್ತೆ ಹಚ್ಚುವುದು. ಪಿಸಿ ಮತ್ತು ಪಿಎನ್‌ಡಿಟಿ ಕಾಯ್ದೆಯಂತೆ ರಚಿಸಿರುವ ಜಿಲ್ಲಾ ಮಟ್ಟದ ಸಮಿತಿಯೊಂದಿಗೆ ಸಮನ್ವಯ ಸಾಧಿಸಿ ಮಾಹಿತಿ ನೀಡಬೇಕಿದೆ ಎಂದು ಹೇಳಿದ್ದಾರೆ.

ಪೊಲೀಸ್ ಇಲಾಖೆ ಸಹಕಾರ ಪಡೆಯುವುದು ಹಾಗೂ ಗುಪ್ತಚರ ದಳ ಅಧಿಕಾರಿಗಳೊಂದಿಗೆ ತಾಲೂಕು ಮಟ್ಟದ ಸಮಿತಿ ಸಮನ್ವಯ ಸಾಧಿಸುವುದು. ಆಸ್ಪತ್ರೆ, ಕ್ಲಿನಿಕ್, ಲ್ಯಾಬ್ ಮತ್ತು ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಆಗಿಂದಾಗ್ಗೆ ಭೇಟಿ ಕೊಟ್ಟು ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿರುವ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು. ಭ್ರೂಣ ಲಿಂಗ ಪತ್ತೆಯಂತಹ ಘಟನೆಗಳ ಬಗ್ಗೆ ಸಂಶಯ ಉಂಟಾದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ವರದಿ ಮಾಡುವುದು. ಗ್ರಾಮ ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತರು ಗ್ರಾಮದ ಹೆಣ್ಣು ಮಕ್ಕಳ ರಕ್ಷಣೆ ದೃಷ್ಟಿಯಿಂದ ಜಾಗೃತರಾಗಿ ವಿಶೇಷ ಆಸಕ್ತಿ ವಹಿಸಿ ಕೆಲಸ ನಿರ್ವಹಿಸಬೇಕಾಗಿದೆ. ಒಂದು ಅಥವಾ ಎರಡು ಹೆಣ್ಣುಮಕ್ಕಳಿರುವ ಪೋಷಕರೊಂದಿಗೆ ಸಮನ್ವಯ ಸಾಧಿಸಿ, ಹೆಣ್ಣು ಮತ್ತು ಗಂಡು ಈ ಸಮಾಜದಲ್ಲಿ ಸಮಾನರು ಎಂಬುದರ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ತಿಳಿಸಿದ್ದಾರೆ.

ಪ್ರತಿ ಗ್ರಾಮದ ಗರ್ಭಿಣಿ ಮಹಿಳೆಯರ ಮಾಹಿತಿಯನ್ನು ಆರೋಗ್ಯ ಇಲಾಖೆಯ PORTALನಿಂದ ಪಡೆದುಕೊಂಡು ಅವರ ಸ್ಥಿತಿಗತಿ/ ಚಲನ–ವಲನಗಳ ಬಗ್ಗೆ ಗಮನ ಹರಿಸುವುದು. ಸದರಿ ಮಾಹಿತಿಯನ್ನು ತಾಲೂಕು ಆರೋಗ್ಯಾಧಿಕಾರಿಗಳು ತಂಡಕ್ಕೆ ಮಾಹಿತಿ ನೀಡಬೇಕು. ವಿಶೇಷವಾಗಿ ಸ್ತ್ರೀಶಕ್ತಿ/ ಸ್ವಸಹಾಯ ಗುಂಪುಗಳ ಮೂಲಕ ಸಭೆ ನಡೆಸಿ ಅರಿವು ಮೂಡಿಸಿ ಭ್ರೂಣ ಹತ್ಯೆ ಕೃತ್ಯಗಳ ಬಗ್ಗೆ ಅನುಮಾನಗಳಿದ್ದಲ್ಲಿ ಕೂಡಲೇ ವರದಿ ಮಾಡಬೇಕು. ಪ್ರತಿ 15 ದಿನಗಳಿಗೊಮ್ಮೆ ಸಭೆ ನಡೆಸಿ, ತೆಗೆದುಕೊಂಡ ಕ್ರಮಗಳ ಬಗ್ಗೆ ಆಯಾ ಉಪವಿಭಾಗಾಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು. 3 ಜಾಗೃತದಳ ತಂಡದವರು ಯಾವುದೇ ಲೋಪಕ್ಕೆ ಆಸ್ಪದ ನೀಡದಂತೆ ಕಾರ್ಯ ನಿರ್ವಹಿಸುವುದು, ಒಂದು ವೇಳೆ ಕರ್ತವ್ಯ ನಿರ್ಲಕ್ಷ್ಯ ಕಂಡುಬಂದರೆ ತಂಡದ ಸದಸ್ಯರ ವಿರುದ್ಧ ಸೂಕ್ತ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ವಿದ್ಯಾರ್ಥಿಗಳು ಶಿಸ್ತು, ನಾಯಕತ್ವ ಗುಣ ಬೆಳೆಸಿಕೊಳ್ಳಿ

ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಸಲಹೆ



ಕೆ.ಆರ್.ಪೇಟೆ, ಡಿ.2– ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸೇವಾ ಗುಣಗಳನ್ನು ಬೆಳೆಸಿಕೊಳ್ಳಬೇಕು. ಗ್ರಾಮ ನೈರ್ಮಲ್ಯ, ಪರಿಸರ ಸ್ವಚ್ಛತೆಯ ಬಗ್ಗೆ ಗ್ರಾಮೀಣ ಜನರಲ್ಲಿ ಅರಿವು ಮೂಡಿಸಬೇಕು ಎಂದು ಸಮಾಜ ಸೇವಕ, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ್ ಸಲಹೆ ನೀಡಿದರು.

ತಾಲೂಕಿನ ಮಾಳಗೂರು ಗ್ರಾಮದಲ್ಲಿ ಕೆ.ಆರ್.ಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ಶ್ರಮದಾನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮಾನವೀಯ ಮೌಲ್ಯ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಎನ್‌ಎಸ್‌ಎಸ್ ಶಿಬಿರ ಸಹಕಾರಿ. ಪ್ರತಿಯೊಬ್ಬರೂ ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ಹಳ್ಳಿಗಳಲ್ಲಿ ಶ್ರಮದಾನ ಮಾಡಿ ಗ್ರಾಮಾಭಿವೃದ್ಧಿಗೆ ಶ್ರಮಿಸಬೇಕು. ಆ ಮೂಲಕ ಜನರಲ್ಲಿ ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು. ಪರಿಸರ ಸ್ವಚ್ಛತೆಗೆ ತಿಳಿಸಬೇಕು. ಜೊತೆಗೆ ಕಠಿಣ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುವ ಮೂಲಕ ಉನ್ನತ ಶಿಕ್ಷಣ ಪಡೆದು ಸಂಸ್ಕಾರವಂತರಾಗಬೇಕು. ವಿದ್ಯಾರ್ಥಿಗಳು ಗಮನ ಬೇರೆಡೆ ಹರಿಸದೆ ಏಕಾಗ್ರತೆಯಿಂದ ಅಭ್ಯಾಸ ಮಾಡಿ ಸಾಧನೆ ಮಾಡುವ ಮೂಲಕ ತಂದೆ, ತಾಯಿ ಹಾಗೂ ಓದಿದ ಶಾಲೆ ಮತ್ತು ಹುಟ್ಟೂರಿಗೆ ಹೆಸರು ತರಬೇಕು. ಶಿಕ್ಷಣದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಾಂಕಿತ ವ್ಯವಸ್ಥಾಪಕ ಮಂಜುನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಸೀತಾರಾಂ ಮಾತನಾಡಿದರು. ಎನ್‌ಎಸ್‌ಎಸ್ ಅಧಿಕಾರಿ ಆರ್.ಎಸ್.ಪದ್ಮನಾಭ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ಸಿಆರ್‌ಪಿ ಕೃಷ್ಣನಾಯಕ್, ಗ್ರಾಪಂ ಉಪಾಧ್ಯಕ್ಷೆ ಸುಧಾ, ಗ್ರಾಪಂ ಸದಸ್ಯ ಅಗ್ರಹಾರಬಾಚಹಳ್ಳಿ ಶ್ರೀನಿವಾಸ್, ಗ್ರಾಪಂ ಮಾಜಿ ಅಧ್ಯಕ್ಷೆ ಪದ್ಮ, ರಂಗನಾಥಪುರ ಕ್ರಾಸ್ ಪಿಎಸಿಎಸ್ ನಿರ್ದೇಶಕ ವೆಂಕಟೇಶ್, ಶಿಕ್ಷಕರಾದ ರಂಗಸ್ವಾಮಿ, ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಆರ್.ಚಂದ್ರಶೇಖರ್, ಜನಪದ ಗಾಯಕ ಮಂಜೇಗೌಡ ಮತ್ತು ಮಂಜೇಶ್ ಸೇರಿದಂತೆ ಇತರರಿದ್ದರು.

ವೈದ್ಯ ಡಾ.ಸತೀಶ್ ಅಂತ್ಯಕ್ರಿಯೆ

ಮಂಡ್ಯ, ಡಿ.2– ಭ್ರೂಣ ಲಿಂಗ ಪತ್ತೆ, ಹತ್ಯೆ ಪ್ರಕರಣದ ಶಂಕಿತ ವೈದ್ಯ ಡಾ.ಸತೀಶ್ ಆತ್ಮಹತ್ಯೆಗೆ ಸಂಬಂಧಿಸಿದಂತೆ ಪಾರ್ಥಿವ ಶರೀರದ ಮರಣೋತ್ತರ ಪರೀಕ್ಷೆ ಬಳಿಕ ಜಿಲ್ಲೆಯ ಪಾಂಡವಪುರದ ವಿಶ್ವೇಶ್ವರ ಬಡಾವಣೆಯಲ್ಲಿರುವ ಸತೀಶ್ ನಿವಾಸಕ್ಕೆ ಪಾರ್ಥಿವ ಶರೀರವನ್ನು ಶನಿವಾರ ತರಲಾಯಿತು.

ಡಾ.ಸತೀಶ್ ವಿರುದ್ಧ ಘಟನೆ ನಡೆದ ಆಲೆಮನೆ ಬಳಿಯ ಸ್ಥಳೀಯರು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್‌ಗೆ ದೂರು ನೀಡಿದ್ದರು. ಈ ಸಂಬಂಧ ವಾಟ್ಸ್‌ಪ್ ಮೂಲಕ ಸತೀಶ್‌ಗೆ ನೋಟೀಸ್ ಸಹ ಜಾರಿ ಮಾಡಲಾಗಿತ್ತು ಇದಕ್ಕೆ ಹೆದರಿ ಕುಶಾಲನಗರದಲ್ಲಿ ಡಾ. ಸತೀಶ್ ಆತ್ಮಹತ್ಯೆ ಮಾಡಿಕೊಂಡಿದ್ದರು. ಸ್ವಗೃಹದಲ್ಲಿ ಡಾ.ಸತೀಶ್ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಟ್ಟು ನಂತರ ಅಂತ್ಯಕ್ರಿಯೆ ನಡೆಸಲಾಯಿತು. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಮಂಡ್ಯ ತಾಲೂಕಿನ ಶಿವಳ್ಳಿಯಲ್ಲಿ ಲಕ್ಷ್ಮಿ ವೆಂಕಟೇಶ್ವರ ಖಾಸಗಿ ಕ್ಲಿನಿಕ್ ನಡೆಸುತ್ತಿದ್ದ ಸತೀಶ್, ಪಿರಿಯಾಪಟ್ಟಣದ ಕೋಣನಹಳ್ಳಿಯ ಸರ್ಕಾರಿ ಆಯುಷ್ ಆಸ್ಪತ್ರೆಯಲ್ಲಿ ಗುತ್ತಿಗೆ ವೈದ್ಯರಾಗಿ ಕೆಲಸ ಮಾಡುತ್ತಿದ್ದರು. ಬೆಳಗ್ಗೆ 8 ರಿಂದ 10 ಗಂಟೆ, ಸಂಜೆ 6ರಿಂದ 10.30ವರೆಗೆ ಶಿವಳ್ಳಿ ಕ್ಲಿನಿಕ್‌ನಲ್ಲಿ ಇರುತ್ತಿದ್ದ ಸತೀಶ್, ಈ ಮಧ್ಯ ಕೋಣನೂರಿಗೆ ಹೋಗುತ್ತಿದ್ದರು.

ಭ್ರೂಣ ಪತ್ತೆ ಪ್ರಕರಣದಲ್ಲಿ 9 ಮಂದಿ ಆರೋಪಿಗಳು ಬಂಧನವಾದ ಬಳಿಕ ಕ್ಲಿನಿಕ್ ಬಾಗಿಲು ಹಾಕಿದ್ದರು. ಗುರುವಾರ ಹುಳ್ಳೇನಹಳ್ಳಿ ಆಲೆಗೆ ಭೇಟಿ ನೀಡಿದ್ದ ಸಚಿವ ದಿನೇಶ್ ಗುಂಡೂರಾವ್‌ಗೆ ಸ್ಥಳೀಯರು ಡಾ.ಸತೀಶ್ ಬಗ್ಗೆ ಆರೋಪ ಮಾಡಿದ್ದರು.

ಬಳಿಕ ಸತೀಶ್‌ಗೆ ನೋಟೀಸ್ ನೀಡಿ ವಿಚಾರಣೆ ಮಾಡಲು ಆರೋಗ್ಯಾಧಿಕಾರಿಗೆ ದಿನೇಶ್ ಗುಂಡೂರಾವ್ ಸೂಚನೆ ನೀಡಿದ್ದ ಬೆನ್ನಲ್ಲೇ ಗುರುವಾರ ರಾತ್ರಿ ವಾಟ್ಸ್‌ಪ್ ಮೂಲಕ ಮಂಡ್ಯ ಆರೋಗ್ಯ ಇಲಾಖೆಯಿಂದ ಡಾ.ಸತೀಶ್‌ಗೆ ನೋಟೀಸ್ ನೀಡಲಾಗಿತ್ತು. ಶುಕ್ರವಾರ ಮಧ್ಯಾಹ್ನ ಕುಶಾಲನಗರದ ಬಳಿ ಸತೀಶ್ ಆತ್ಮಹತ್ಯೆ ಮಾಡಿಕೊಂಡಿದ್ದರು. ತನಿಖೆಗೆ ಹೆದರಿ ಆತ್ಮಹತ್ಯೆಗೆ ಶರಣಾಗಿದ್ದಾರಾ ಎಂಬ ಅನುಮಾನ ಸಹ ಇದೀಗ ವ್ಯಕ್ತವಾಗಿದೆ.

ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಇಂದು ಪತ್ರಿಕಾ ದಿನಾಚರಣೆ

ಮಂಡ್ಯ, ಡಿ.2– ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಡಿ.3ರಂದು ಪತ್ರಿಕಾ ದಿನಾಚರಣೆ ಸಮಾರಂಭ, ನೂತನ ಅಧ್ಯಕ್ಷರ ಪದಗ್ರಹಣ, ಜೀವಮಾನ ಸಾಧನೆ ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ, ನವೀಕೃತ ಕೊಠಡಿ ಉದ್ಘಾಟನೆ, ಪ್ರತಿಭಾ ಪುರಸ್ಕಾರ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಪತ್ರಕರ್ತರ ಸಂಘದ ಬಳಿ ನಡೆಯುವ ಸಮಾರಂಭದ ಸಾನ್ನಿಧ್ಯವನ್ನು ಚಿಕ್ಕಮಗಳೂರು ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸಮಾರಂಭ ಉದ್ಘಾಟಿಸಲಿದ್ದಾರೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಪ್ರಧಾನ ಭಾಷಣ ಮಾಡಲಿದ್ದು, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಮಾಡುವರು. ಶಾಸಕ



ರವಿಕುಮಾರ್ ಕ್ರೀಡಾ ವಿಜೇತರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ. ಶಾಸಕ ಹೆಚ್.ಟಿ.ಮಂಜು ನವೀಕೃತ ಕೊಠಡಿ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಬಿ.ಪಿ.ಪ್ರಕಾಶ್ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ನಿರ್ಗಮಿತ ಅಧ್ಯಕ್ಷ ಕೆ.ಸಿ.ಮಂಜುನಾಥ ಅಧಿಕಾರ ಹಸ್ತಾಂತರ ಮಾಡಲಿದ್ದು, ವಿಶೇಷ ಆಹ್ವಾನಿತರಾಗಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಸಂಚಾಲಕ ಎಚ್.ಬಿ.ಮದನ್‌ಗೌಡ, ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್, ಮುಖಂಡ ಸಚ್ಚಿದಾನಂದ ಭಾಗವಹಿಸುವರು. ಸಂಘದ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ನಿರ್ದೇಶಕ ಸಿ.ಎನ್.ಮಂಜುನಾಥ್, ರಾಷ್ಟ್ರೀಯ ಸಮಿತಿ ಸದಸ್ಯ ಜೆ.ಎಂ.ಬಾಲಕೃಷ್ಣ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಇದೇ ಸಂದರ್ಭ ಜೀವಮಾನ ಶ್ರೇಷ್ಠ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಡಿ.ಎಲ್.ಲಿಂಗರಾಜು ಅವರಿಗೆ ಪ್ರದಾನ ಮಾಡಲಾಗುವುದು, ವಾರ್ಷಿಕ ಪ್ರಶಸ್ತಿ ಪುರಸ್ಕೃತರಾದ ಯೋಗೇಶ್, ಆರ್.ಎನ್.ನಂಜುಂಡಸ್ವಾಮಿ, ಪುಟ್ಟರಾಜು, ಜಯರಾಜು ಹಾಗೂ ಮಹೇಶ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ಸಂಘದ ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು ಮಾತನಾಡಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಗುವುದು ಎಂದರು.

ಹೊಲಿಗೆ ಯಂತ್ರ ತರಬೇತಿ: ಅರ್ಜಿ ಆಹ್ವಾನ

ಮಂಡ್ಯ, ಡಿ.2– ಮದ್ದೂರಿನ ಅಪ್ಪಿರಿಯಲ್ ಟ್ರೈಯಲ್ ಆಂಡ್ ಡಿಸೈನ್ ಸೆಂಟರ್ ತರಬೇತಿ ಸಂಸ್ಥೆ ವತಿಯಿಂದ ಗ್ರಾಮೀಣ ಮತ್ತು ನಗರದ ನಿರುದ್ಯೋಗಿ ಯುವಕ ಯುವತಿಯರಿಗೆ ಉಚಿತ ಎಂಪ್ಲಾಯಿಡ್ ಟೈಲರ್ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ.

ತರಬೇತಿ ಮೂರು ತಿಂಗಳ ಅವಧಿ ಹೊಂದಿದ್ದು, ಅರ್ಜಿ ಸಲ್ಲಿಸುವವರು 18 ರಿಂದ 35 ವರ್ಷ ವಯೋಮಿತಿ ಇರಬೇಕು. ಓಬಿಸಿ ವರ್ಗಕ್ಕೆ ಸೇರಿದವರಾಗಿರಬೇಕು. ಹೆಚ್ಚಿನ ಮಾಹಿತಿಗೆ 08232–232500, 9632768639 ಸಂಪರ್ಕಿಸಬಹುದು.

ನಿಧನ

ಸುರೇಶ್ ಕುಮಾರ್



ಕೆ.ಆರ್.ಪೇಟೆ ಡಿ.2–ತಾಲೂಕಿನ ತೆರ್ನೇನಹಳ್ಳಿ ಶಾಲೆ ಸಹ ಶಿಕ್ಷಕ ಸುರೇಶ್ ಕುಮಾರ್ (48) ಶನಿವಾರ ಸಂಜೆ ನಿಧನರಾದರು.

ಮೃತರು ಪತ್ನಿ ಮೈಲನಹಳ್ಳಿ ಶಾಲೆ ಸಹ ಶಿಕ್ಷಕಿ ನಾಗಮ್ಮ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಜಕ್ಕನಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈಗಿನ ಮಕ್ಕಳಿಗೆ ಮೊಬೈಲೇ ಮೊದಲ ಪಾಠಶಾಲೆಯಾಗಿದೆ

ಶೇಷಾದ್ರಿಪುರಂ ಕಾಲೇಜು ಪ್ರಾಧ್ಯಾಪಕಿ ಡಾ.ಲಾವಣ್ಯ ವಿಷಾದ



ಮೈಸೂರು, ಡಿ.2(ಎಸ್‌ಪಿಎನ್)– ಹನ್ನೆರಡನೆ ಶತಮಾನದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ರಾಜಕೀಯ ವಲಯಗಳಲ್ಲಿ ಗೊಂದಲ ತುಂಬಿದ್ದಾಗ ವಚನ ಚಳವಳಿ ಮೂಲಕ ಶರಣರು ಎಲ್ಲಾ ಗೊಂದಲಗಳಿಗೆ ಅಂತ್ಯವಾಡಿದ್ದರು ಎಂದು ಶೇಷಾದ್ರಿಪುರಂ ಕಾಲೇಜು ಪ್ರಾಧ್ಯಾಪಕಿ ಡಾ.ಲಾವಣ್ಯ ತಿಳಿಸಿದರು.

ಮೈಸೂರು ವಿಜಯನಗರ ಎರಡನೇ ಹಂತದ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪಿಯು ಕಾಲೇಜು ಸಭಾಂಗಣದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ಹಾಗೂ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸಹಯೋಗದೊಂದಿಗೆ ಆಯೋಜಿಸಿದ್ದ ವಚನ ಗಾಯನ ವಾಚನ– ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅಶಾಂತಿಯ ತೋಟವಾಗಿದ್ದ ಸಮಾಜವನ್ನು ಧಾರ್ಮಿಕ ನೆಲೆಗಟ್ಟಿನ ಮೇಲೆ ಶಾಂತಿ ನೆಲೆಸುವಂತೆ ಮಾಡಿದ ಕೀರ್ತಿ 12ನೇ ಶತಮಾನದ ಶರಣರಿಗೆ ಸಲ್ಲುತ್ತದೆ ಎಂದ ಅವರು, ಹಿಂದೆ ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆಯಾಗಿತ್ತು. ಇಂದು ಮೊಬೈಲೇ ಮೊದಲ ಪಾಠಶಾಲೆ ಯಂತಾಗಿರುವುದು ದುರಂತವೇ ಸರಿ ಎಂದು ಬೇಸರ ವ್ಯಕ್ತಪಡಿಸಿದರು.

ಮಕ್ಕಳಲ್ಲಿ ಮೊಬೈಲ್ ವಿಪರೀತ ಬಳಕೆಯಿಂದ ಅವರ ಮುಂದಿನ ಭವಿಷ್ಯ ಹೇಗೆ ಎಂಬುದೇ ಯಕ್ಷ ಪ್ರಶ್ನೆಯಾಗಿದೆ. ಅಲ್ಲದೆ, ಶರಣರ ಕಾಲದಲ್ಲಿ ಮಾನವ ಕಲ್ಯಾಣವನ್ನು ಅವರ ಬದುಕಿನ ಸರಿ–ತಪ್ಪುಗಳನ್ನು ವಚನಗಳ ಮೂಲಕ ತಿದ್ದಿ, ಸಮುದಾಯದ ನಡೆ–ನುಡಿಯಲ್ಲಿ ಒಂದಾಗುವಂತೆ ನೋಡಿಕೊಂಡಿದ್ದ ಪ್ರಸಂಗವನ್ನು ವಿವರಿಸಿದರು.

ಪ್ರಸ್ತುತ ಸಮಾಜದಲ್ಲಿ ಜಾತಿ ಅಸಮಾನತೆ, ಮತ್ತೊಂದೆಡೆ ಹೆಣ್ಣು–ಗಂಡಿನ ನಡುವೆ ಅಸಮಾನತೆ ಇದೆ. ಇದನ್ನು ಹೋಗಲಾಡಿಸಲು ಶರಣರು ವಚನಗಳ ಮೂಲಕ ಸಮಾಜದಲ್ಲಿ ಸಮಾನತೆ ತರಲು ಪ್ರಯತ್ನಿಸಿದ್ದರು. ಇಂದು ನೆರೆಹೊರೆಯೇ ಹೊರೆ ಎಂದು ಭಾವಿಸುವ ದಿನಮಾನಗಳಲ್ಲಿ ಕಾಗೆಯೊಂದು ಅಗುಳ ಕಂಡರೆ ಕೂಗಿ ಕರೆದು ತನ್ನ ಬಳಗವೆಲ್ಲವ ಹಂಚಿ ತಿನ್ನುವ ಬದುಕನ್ನು ಪ್ರತಿಪಾದಿಸಿದರಲ್ಲದೆ, ಹಸಿದವರಿಗೆ ಅನ್ನವನಿಕ್ಕಿ ಮಾನವೀಯತೆ ಮೆರೆಯುವುದೇ ನಿಜವಾದ ಭಕ್ತಿ ಎಂದು ಶರಣರು ನಂಬಿದ್ದರು.

ಪ್ರಸ್ತುತ ಪ್ರತಿನಿತ್ಯವೂ ಒಂದಿಲ್ಲೊಂದು ಅಪರಾಧ ಕೃತ್ಯದ ಹೆಚ್ಚು ಸುದ್ದಿ ಇರುತ್ತದೆ. 12ನೇ ಶತಮಾನದಲ್ಲಿ ಶರಣರು, ತಾಳ್ಮೆ, ಸಹನೆ ಹಾಗೂ ನುಡಿ ತೋರಣ ಬೆಳಕನ್ನು ಬಿತ್ತಿ ಸಮಾಜದಲ್ಲಿ ನಡೆಯುವ ಅಪರಾಧ ಕೃತ್ಯಗಳ ತಡೆಗಟ್ಟಲು ಧಾರ್ಮಿಕ ನೆಲೆಗಟ್ಟಿನಲ್ಲಿ ಪ್ರಯತ್ನಿಸುತ್ತಿದ್ದರು ಎಂದು ತಿಳಿಸಿದರು.

ಈ ವೇದಿಕೆಯಲ್ಲಿ ರಂಗಾಯಣದ ನಿವೃತ್ತ ಉಪನಿರ್ದೇಶಕ ಮ.ಗು.ಸದಾನಂದಯ್ಯ, ಮಿಸ್ ಕಾಲ್ ಕಾಂತರಾಜ್, ದತ್ತಿ ದಾನಿಗಳಾದ ರಾಜೇಂದ್ರ ಸ್ವಾಮಿ ದಂಪತಿಗಳು, ಮಲ್ಲಿಕಾರ್ಜುನ ಸ್ವಾಮಿ, ರವಿ, ಲೋಕೇಶ್ ಚನ್ನಬಸಪ್ಪ, ಕುಮಾರ ಸ್ವಾಮಿ, ಮಂಜುಳಾ ರವಿ, ಬಿ.ಎ.ನಂದೀಶ್, ಅಂಬಿಕಾ ಪಾಟೀಲ್, ಲತಾ, ಮುಖ್ಯಶಿಕ್ಷಕ ನಾಗೇಶ್ ಉಪಸ್ಥಿತರಿದ್ದರು. ಈ ವೇಳೆ 20ಕ್ಕೂ ವಿದ್ಯಾರ್ಥಿಗಳು ವಿವಿಧ ಶರಣ ವೇಷಧರಿಸಿ, ಪ್ರೇಕ್ಷಕರ ಮನಸೆಳೆದರು.

ವಯೋ ಸೇವಾ ನಿವೃತ್ತಿ: ಸಾರಿಗೆ ಸಂಸ್ಥೆಯ ಸಿಬ್ಬಂದಿಗೆ ಸನ್ಮಾನ



ಮೈಸೂರು, ಡಿ.2(ಎಸ್‌ಪಿಎನ್)– ಕೆಎಸ್ ಆರ್‌ಟಿಸಿ ಮೈಸೂರು ವಿಭಾಗದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ 8 ಮಂದಿ ತಾಂತ್ರಿಕ ಸಿಬ್ಬಂದಿ, ಚಾಲಕ ಮತ್ತು ನಿರ್ವಾಹಕರನ್ನು ಮೈಸೂರು ಗ್ರಾಮಾಂತರ ವಿಭಾಗೀಯ ಕಚೇರಿಯಲ್ಲಿ ಜಿಲ್ಲಾ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಸನ್ಮಾನಿಸಿದ್ದಾರೆ.

ನಿವೃತ್ತಿ ಹೊಂದಿದ ತಾಂತ್ರಿಕ ಸಿಬ್ಬಂದಿಗಳಾದ ಬಿ.ಎಂ.ಕಾಳಾಚಾರಿ, ನಂಜುಂಡೇಗೌಡ, ಬಿ.ಎಸ್.ಸುರೇಶ್ ಹಾಗೂ ಚಾಲಕ ಮತ್ತು ನಿರ್ವಾಹಕರಾದ ಚಂದ್ರು, ನಾಗರಾಜು, ದಿನೇಶ್ ಸಿಂಗ್, ಸ್ವಾಮೀಗೌಡ, ಸಂಚಾರ ನಿಯಂತ್ರಕ ರಮೇಶ್‌ಗೌಡ ಅವರನ್ನು ಸನ್ಮಾನಿಸಿ, ಶುಭ ಹಾರೈಸಿದ್ದಾರೆ. ಈ ವೇಳೆ ಕೆಎಸ್‌ಆರ್‌ಟಿಸಿಯ ಡಿಟಿಓ ದಿನೇಶ್, ಡಿಎಂಇ ಚಂದ್ರಪ್ಪ, ಕಾರ್ಮಿಕಾಧಿಕಾರಿ ಪುಟ್ಟೇಗೌಡ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಮತದಾರರ ಪಟ್ಟಿಗೆ ವಿಶೇಷ ನೋಂದಣಿ

ಮೈಸೂರು, ಡಿ.2(ಎಸ್‌ಬಿಡಿ)– ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ ಭಾನುವಾರ ವಿಶೇಷ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ತಮ್ಮ ಕಚೇರಿಯ ನ್ಯಾಯಾಲಯ ಸಭಾಂಗಣದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು, 2024ರ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಡಿ.9ರೊಳಗೆ ಸೇರ್ಪಡೆಯಾಗುವ ಹೆಸರುಗಳು ಅಂತಿಮ ಮತದಾರರ ಪಟ್ಟಿಯಲ್ಲಿ ಪ್ರಕಟಗೊಳ್ಳಲಿದೆ. ಈ ನಿಟ್ಟಿನಲ್ಲಿ ಬೂತ್ ಮಟ್ಟದಲ್ಲಿ ಭಾನುವಾರ(ಡಿ.3) ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ವಿಶೇಷ ನೋಂದಣಿ ನಡೆಯಲಿದ್ದು, 18–19 ವಯಸ್ಸಿನ ಯುವಕ–ಯುವತಿಯರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಂಖ್ಯೆ ಕ್ಷೀಣ: ಯುವ ಮತದಾರರ ನೋಂದಣಿಯ ಪ್ರಮಾಣ ಕಡಿಮೆ ಇದೆ. ಈ ದಿನದವರೆಗೆ 41,421 ಯುವ ಮತದಾರರು ಮತದಾರರ ಪಟ್ಟಿಗೆ ಸೇರ್ಪಡೆಯಾಗಿದ್ದು, ಕಳೆದ ಬಾರಿಗೆ ಹೋಲಿಸಿದರೆ 25 ಸಾವಿರ ಕಡಿಮೆಯಾಗಿದೆ. ಮುಂದಿನ ಏಪ್ರಿಲ್ 1ಕ್ಕೆ 18 ವರ್ಷ ಪೂರೈಸುವ ಎಲ್ಲಾ ಯುವಕ–ಯುವತಿಯರೂ ತಪ್ಪದೇ ಅಗತ್ಯ ದಾಖಲೆಗಳೊಂದಿಗೆ ನಮೂನೆ–6ರಲ್ಲಿ ಅರ್ಜಿ ಸಲ್ಲಿಸಿ, ಮತದಾರರ ಪಟ್ಟಿಗೆ ಸೇರ್ಪಡೆ ಮಾಡಿಕೊಳ್ಳಬಹುದು. ಅದರಲ್ಲೂ ಯುವತಿಯರ ನೋಂದಣಿ ಕಡಿಮೆಯಿದ್ದು, ಇದರಲ್ಲಿ ಶೇ.100ರಷ್ಟು ಸಾಧನೆ ಮಾಡುವ ಪ್ರಮುಖ ಜವಾಬ್ದಾರಿ ಇದೆ ಎಂದರು. ವಯೋಮಾನದ ಆಧಾರದಲ್ಲಿ 34 ಸಾವಿರ ಮಂದಿ ಯುವ ಮತದಾರರ ವಿಭಾಗದಿಂದ ಸಾಮಾನ್ಯ ಪಟ್ಟಿಗೆ ಸೇರಿದ್ದಾರೆ ಎಂದು ಇದೇ ವೇಳೆ ತಿಳಿಸಿದರು.

ಒಂದನೇ ಪುಟದಿಂದ

ನಾಲ್ಕು ರಾಜ್ಯಗಳ ಚುನಾವಣೆ ಫಲಿತಾಂಶ

ಹಾಗೂ ಕಾಂಗ್ರೆಸ್ ಮಧ್ಯೆ ನೇರ ಪೈಪೋಟಿ ಇದೆ. ಅದರಲ್ಲೂ, ಕಳೆದ ಬಾರಿ ಬಿಜೆಪಿಗಿಂತ ಹೆಚ್ಚಿನ ಸ್ಥಾನ ಪಡೆದಿದ್ದ ಕಾಂಗ್ರೆಸ್ ಅನ್ನು ಬಿಜೆಪಿ ಓವರ್‌ಟೇಕ್ ಮಾಡಿ ಅಧಿಕಾರ ಹಿಡಿದಿದೆ. ಈಗ ಮತ್ತೆ ಬಹುಮತ ಸಾಧಿಸಿ ಅಧಿಕಾರದ ಗದ್ದುಗೆಯೇರಲು ಕಾಂಗ್ರೆಸ್ ಇನ್ನಿಲ್ಲದ ರಣತಂತ್ರ ರೂಪಿಸಿದೆ. ಮತ್ತೊಂದೆಡೆ, ಕಳೆದ ಬಾರಿ ಸಾಧಿಸದ ಬಹುಮತವನ್ನು ಈ ಬಾರಿ ಸಾಧಿಸುವ ಮೂಲಕ ಮತ್ತೆ ಅಧಿಕಾರ ಹಿಡಿಯಲು ಹವಣಿಸುತ್ತಿದೆ. ಹಾಗಾಗಿ, ಈ ಬಾರಿಯ ಚುನಾವಣೆಯು ತೀವ್ರ ಹಣಾಹಣಿಯಿಂದ ಕೂಡಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಮಧ್ಯೆ ನೇರ ಹಣಾಹಣಿ ಇದೆ. ಅಶೋಕ್ ಗೆಹ್ಲೋಟ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವದಲ್ಲಿದ್ದು, ಈ ಬಾರಿಯೂ ಗೆದ್ದು ಬೀಗುವ ಉತ್ಸಾಹದಲ್ಲಿದೆ. ಮತ್ತೊಂದೆಡೆ, 2018ರಲ್ಲಿ ಅಧಿಕಾರ ಕಳೆದುಕೊಂಡಿರುವ ಬಿಜೆಪಿಯು ಈ ಬಾರಿ ಗೆದ್ದು, ಮತ್ತೆ ಅಧಿಕಾರ ಪಡೆಯಲು ಯತ್ನಿಸುತ್ತಿದೆ. ಹಾಗಾಗಿಯೇ, ಚುನಾವಣೆ ಪ್ರಚಾರದ ವೇಳೆ ಕಾಂಗ್ರೆಸ್ ಹಾಗೂ ಬಿಜೆಪಿ ಜನರಿಗೆ ಉಚಿತ ಕೊಡುಗೆಗಳ ಮಹಾಪೂರವೇ ಹರಿಸಿವೆ. ಆದರೆ ಮತದಾರನ ಒಲವು ಯಾರ ಪರ ಇದೆ ಎಂಬುದು ನಾಳೆ ಬಹಿರಂಗವಾಗಲಿದೆ.

ಪೋಕ್ಸೊದಡಿ ಪ್ರಕರಣ ದಾಖಲು

ಪ್ರವಾಸದಿಂದ ಮರಳುವಾಗ ಬಸ್ಸಿನಲ್ಲಿ ಬಾಲಕಿಯರು, ಬಾಲಕರನ್ನು ಪ್ರತ್ಯೇಕವಾಗಿ ಕೂರಿಸಿದ್ದರು. ಇದಕ್ಕೂ ಆಕ್ಷೇಪ ವ್ಯಕ್ತಪಡಿಸಿದ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್, ಶಿಕ್ಷಕಿಯರ ಜೊತೆ ಜಗಳ ತೆಗೆದು ರಾದ್ಧಾಂತ ಮಾಡಿದ ವಿಷಯವನ್ನು ಶಿಕ್ಷಕ ವೃಂದ ತಮಗೆ ತಿಳಿಸಿತು ಎಂದು ಅವರು ವಿವರಿಸಿದರು.

ಇದಲ್ಲದೆ ಮುಖ್ಯ ಶಿಕ್ಷಕ ನಾಗಣ್ಣ ಮತ್ತು ಅಟೆಂಡರ್ ರಮೇಶ್, ಬಸ್ಸಿನಲ್ಲೂ ತಮ್ಮಗಳ ಮಧ್ಯದಲ್ಲಿ ಕುಳಿತು ಅಸಭ್ಯವಾಗಿ ವರ್ತಿಸಿದರು. ನಾವು ಎಷ್ಟೇ ವಿರೋಧಿಸಿದರೂ ಬಿಡದೆ ಕಾಡಿದರು ಎಂದು ವಿದ್ಯಾರ್ಥಿನಿಯರು ತಮಗೆ ತಿಳಿಸಿದರು ಎಂದು ಆಶಾ ಹೇಳಿದರು. ಕೆಲವು ವಿದ್ಯಾರ್ಥಿನಿಯರು ಘಟನೆಯಿಂದ ಮನನೊಂದು ಶಾಲೆಗೆ ಹಾಜರಾಗಿರಲಿಲ್ಲ. ಅವರುಗಳ ಊರಿಗೇ ಹೋಗಿ, ಅವರನ್ನು ಭೇಟಿ ಮಾಡಿ, ಅವರಿಂದಲೂ ದೌರ್ಜನ್ಯ ಕುರಿತು ವಿವರಣೆ ಪಡೆಯಲಾಯಿತು ಎಂದು ತಿಳಿಸಿದರು.

ಈ ವೇಳೆ ಕೆಲವು ವಿದ್ಯಾರ್ಥಿನಿಯರು ನಾಗಣ್ಣ ಸರ್ ಮತ್ತು ರಮೇಶ್, ನಮ್ಮ ಜೊತೆ ತೀರಾ ಕೆಟ್ಟದಾಗಿ ನಡೆದುಕೊಂಡರು. ಅವರು ಈ ರೀತಿ ಮಾಡ್ತಾರೆ ಅಂದುಕೊಂಡಿರಲಿಲ್ಲ. ಈಗ ನಮಗೆ ಶಾಲೆಗೆ ಹೋಗುವುದೇ ಬೇಡ, ವಿದ್ಯಾಭ್ಯಾಸವೇ ಬೇಡ ನಿಲ್ಲಿಸಿಬಿಡೋಣ ಎಂದು ತೀರ್ಮಾನಿಸಿರುವುದಾಗಿ ತಮ್ಮ ಬಳಿ ಅಳಲು ತೋಡಿಕೊಂಡರು ಎಂದು ಅವರು ನುಡಿದರಲ್ಲದೆ, ನಾವು ವಿದ್ಯಾರ್ಥಿನಿಯರನ್ನು ಸಮಾಧಾನಪಡಿಸಿ, ಧೈರ್ಯ ತುಂಬಿದೆವು ಎಂದರು. ಈ ಎಲ್ಲಾ ವಿವರಗಳನ್ನು ಆಧರಿಸಿ ಅಂತರಸಂತೆ ಪೊಲೀಸ್ ಠಾಣೆಗೆ ಲಿಖಿತವಾಗಿ ದೂರು ನೀಡಿರುವುದಾಗಿ ಆಶಾ ತಿಳಿಸಿದ್ದು, ಇದೀಗ ಪ್ರಕರಣ ದಾಖಲಾಗಿ, ತನಿಖೆ ಮುಂದುವರೆದಿದೆ ಎಂದರು.



ಕೆ.ಜಿ.ಕೊಪ್ಪಲು ಸಿದ್ದಪ್ಪಾಜಿ ದೇವಸ್ಥಾನದ ಕುಂಭಾಭಿಷೇಕ





ಮೈಸೂರಿನ ಕನ್ನೇಗೌಡನ ಕೊಪ್ಪಲು ಶ್ರೀ ಮಹಾಗಣಪತಿ, ಶ್ರೀ ಸಿದ್ದಪ್ಪಾಜಿ, ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ 13ನೇ ವರ್ಷದ ಕುಂಭಾಭಿಷೇಕ ಮಹೋತ್ಸವದ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ(ಎಡಚಿತ್ರ), ಶಾಸಕ ಕೆ.ಹರೀಶ್‌ಗೌಡ, ಮಾಜಿ ಕಾರ್ಪೋರೇಟರ್ ಗೋಪಿ, ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.2– ಮೈಸೂರಿನ ಕನ್ನೇಗೌಡನ ಕೊಪ್ಪಲು ಪೈಲ್ವಾನ್ ಬಸವಯ್ಯನವರ ವೃತ್ತದ ಬಳಿಯಿರುವ ಅಶ್ವಥಕಟ್ಟೆ ಶ್ರೀ ಮಹಾಗಣಪತಿ, ಶ್ರೀ ಸಿದ್ದಪ್ಪಾಜಿ, ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದ 13ನೇ ವರ್ಷದ ಕುಂಭಾಭಿಷೇಕ ಮಹೋತ್ಸವ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ ಪೂರ್ಣಾಹುತಿ ಬಳಿಕ ಧನಸ್ಸು ಲಗ್ನದಲ್ಲಿ ಕುಂಭಾಭಿಷೇಕ ಅಲಂಕಾರ ಸಹಿತ ಮಹಾಮಂಗಳಾರತಿ ನೆರವೇರಿತು. ನಂತರ ಮಧ್ಯಾಹ್ನ 12.30ಕ್ಕೆ ತೀರ್ಥ ಪ್ರಸಾದ ವಿನಿಯೋಗದ ನಂತರ ಅನ್ನ ಸಂತರ್ಪಣೆಯಲ್ಲಿ 8 ಸಾವಿರಕ್ಕೂ ಹೆಚ್ಚು ಭಕ್ತರು ಪ್ರಸಾದ ಸ್ವೀಕರಿಸಿದರು. ಶುಕ್ರವಾರ ಅನುಜ್ಞೆ, ಅಗ್ರತೀರ್ಥಸಂಗ್ರಹ, ಯಾಗಶಾಲಾ ಪ್ರವೇಶ, ಗಣಪತಿ ಪೂಜಾ ಪೂರ್ವಕ, ಪುಣ್ಯಾಹ, ಪಂಚಗವ್ಯ ಸಾಧನ, ಸಂಪ್ರೋಕ್ಷಣೇ, ಗಣಹೋಮ, ನವಗ್ರಹಪೂಜೆ ಮೃತ್ಯುಂಜಯ ಪೂಜೆ ಹೋಮ ಪ್ರಧಾನ ಕಳಸ ಸ್ಥಾಪನೆ ಇನ್ನಿತರ ಕೈಂಕರ್ಯಗಳು ಜರುಗಿದವು.

ಅಯೋಧ್ಯೆ ರಾಮಮಂದಿರದ ಮಾದರಿ ಪ್ರದರ್ಶನ ಉದ್ಘಾಟನೆ



ಮೈಸೂರು, ಡಿ. 2– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ವಿದ್ಯಾಸಂಸ್ಥೆಯ ಎಂ.ವೆಂಕಟ ಕೃಷ್ಣಯ್ಯ ಸಭಾಂಗಣದಲ್ಲಿ ಅಯೋಧ್ಯೆ ರಾಮಮಂದಿರದ ಮಾದರಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ.

ಈ ಸಂಬಂಧ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಶಾಸಕ ಟಿ.ಎಸ್.ಶ್ರೀವತ್ಸ, ಸನಾತನ ಧರ್ಮವನ್ನು ನಾವು ಉಳಿಸಿ, ಬೆಳೆಸಬೇಕಾಗಿದೆ. ರಾಮನ ವ್ಯಕ್ತಿತ್ವ ಹಾಗೂ ಆದರ್ಶ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಇತರರಿಗೂ ಪ್ರೇರಣೆ ಆಗಬೇಕಿದೆ. ರಾಮಮಂದಿರ ಅಯೋಧ್ಯೆಯಲ್ಲಿ ಕೆಲವೇ ದಿನಗಳಲ್ಲಿ ಉದ್ಘಾಟನೆಗೊಳ್ಳುತ್ತಿದ್ದು, ಭವ್ಯವಾದ ಇತಿಹಾಸ, ಪರಂಪರೆವುಳ್ಳ ಅನುಭವಿ ಕಲಾವಿದರು ಇದನ್ನು ಸಿದ್ಧಪಡಿಸುತ್ತಿದ್ದಾರೆ. ಅಯೋಧ್ಯೆಗೆ ಹೋಗಲು ಸಾಧ್ಯವಾಗದ ಜನರಿಗೆ ಇಂತಹ ಮಾದರಿ ರಾಮಮಂದಿರದ ಪ್ರದರ್ಶನ ಅತ್ಯಂತ ಉಪಯುಕ್ತಕಾರಿ ಎಂದು ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎನ್. ಸುಬ್ಬರಾಯ, ಸಂಸ್ಥೆಯ ಆಡಳಿತ ಮಂಡಳಿ ಹಿರಿಯ ಸದಸ್ಯ ಎಸ್.ಎಲ್.ರಾಮಚಂದ್ರ, ಆರ್.ನರಸಿಂಹ, ಎಸ್.ನಾಗರಾಜು, ಶಾರದಾ ವಿಲಾಸ ಔಷಧ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಶಿ, ನಿವೃತ್ತ ಶಿಕ್ಷಕರಾದ ವೆಂಕಟರಮಣ ಭಟ್, ಕಲಾವಿದರಾದ ವಿನಯ್ ರಾಮ್ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ವಿದ್ಯಾವರ್ಧಕ ಕಾಲೇಜಿನಲ್ಲಿ ಕಲಾಸಂಭ್ರಮ



ಮೈಸೂರು, ಡಿ. 2–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ 2023ರ 'ಕಲಾಸಂಭ್ರಮ' ವನ್ನು ಆಯೋಜಿಸಲಾಗಿತ್ತು.

ಅಂಕಣಕಾರ, ಖ್ಯಾತಕವಿ ಡಾ.ಜಯಪ್ಪ ಹೊನ್ನಾಳ್ಳಿ ಅವರು ಜ್ಯೋತಿ ಬೆಳಗಿಸುವುದರ ಮುಖೇನ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ಮಾತ ನಾಡಿದ ಅವರು, ಕಲೆ ಬದುಕಿನ ಭಾವ ಲಹರಿಯಾಗಿದ್ದು, ವಿದ್ಯಾರ್ಥಿಗಳನ್ನು ಚಿಂತಕರನ್ನಾಗಿ, ಸಾಂಸ್ಕೃತಿಕ ವ್ಯಕ್ತಿಗಳನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕಲೆ ಇರೋದು ವಿನೋದಕ್ಕಾಗಿ ಅಲ್ಲ ವಿಕಾಸಕ್ಕಾಗಿ, ನರಳಿಸುವ ಮನಸ್ಸುಗಳನ್ನು ಅರಳಿಸುವ ಶಕ್ತಿ ಕಲೆಗೆ ಇದೆ ಎಂದು ಅಭಿಪ್ರಾಯಪಟ್ಟರು.

ಮನುಷ್ಯನನ್ನು ಸೃಜನಶೀಲ ವ್ಯಕ್ತಿಯಾಗಿಸುವಲ್ಲಿ 'ಕಲೆ' ಪ್ರಧಾನವಾಗಿದೆ. ಒಂದು ದೇಶದ ಶ್ರೀಮಂತಿಕೆ ಕೂಡಿರುವುದು ಆ ದೇಶದ ಕಲೆ ಮತ್ತು ಸಂಸ್ಕೃತಿಯ ಭಾವಸಂಪತ್ತಿನಿಂದ. ಅಲ್ಪಮಾನವನ್ನು ಕಲ್ಪಮಾನವನನ್ನಾಗಿ ಮಾಡುವ ಮನಸ್ಸು ಮನಸ್ಸುಗಳನ್ನು ಸಂಸ್ಕರಿಸುವ ಶಕ್ತಿ ಕಲೆಗೆ ಇದೆ ಎಂದು ಪುರಾಣದ ಶ್ರೀ ಕೃಷ್ಣನ ಮುರಳಿಗಾನ ಅಮೃತ ಪಾನವನ್ನು ಮೊದಲುಗೊಂಡು, ಐತಿಹಾಸಿಕ ವ್ಯಕ್ತಿಗಳಾದ ಅಕ್ಬರ್, ತಾನಸಿಂಗ್, ಹಾಗೂ ಗುರು–ಹರಿದಾಸರು ಸೇರಿದಂತೆ ಶಹನಾಹಿ ವಾದಕ ಬಿಸ್ಮಿಲ್ಲಾ ಖಾನ್‌ರ ನಿದರ್ಶನಗಳನ್ನು ಉಲ್ಲೇಖಿಸಿದರು. ಕಲಾವಿದನಿಗೆ ಸತ್ಯವನ್ನು ಬೆಳಕಿಗೆ ತರುವ ಛಾತಿಯಿದ್ದು, ಸಾಧನೆಗೆ ವೇದನೆ ಬೇಕು ವೇದನೆ ಇಲ್ಲದೆ ಸಾಧನೆ ಸಾಧ್ಯವಿಲ್ಲವೆಂದರು. ಸಮತೆ ಮತ್ತು ಮಮತೆ ಕಲೆಯ ಜೀವಾಳವಾಗಿದೆ ಕಲೆ ಜೀವನ್ಮುಖಿಯಾಗಿದ್ದು, ಕಲೆಯಿಂದ ಜೀವನ ವಿಕಸನಗೊಳ್ಳುತ್ತದೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಸ್ ಮರೀಗೌಡ ಮಾತನಾಡಿ, ಹಣಮೇಲು ಸಂಸ್ಕೃತಿ ಇಂದಿನ ಸಮಾಜವನ್ನು ವ್ಯಾಪಕವಾಗಿ ಆವರಿಸುತ್ತಿದ್ದು. ಜಗತ್ತಿನಲ್ಲಿ ಖ್ಯಾತರಾದವರು ಹೇಗೆ ಹಣದ ಹಿಂದೆ ಬಿದ್ದು ಅಂತ್ಯಗೊಂಡರೆಂಬ ನಿದರ್ಶನಗಳ ತಿಳಿಸಿ, ಸಂಸ್ಕಾರ ಮನಸ್ಸಿನಿಂದ ಜೀವನ ಕಲೆಯನ್ನು ಮೈಗೂಡಿಸಿಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ಕೋಶಾಧ್ಯಕ್ಷ ಶ್ರೀಶೈಲರಾಮಣ್ಣನವರ್ ಉಪಸ್ಥಿತರಿದ್ದರು. ಕಲಾಸಂಭ್ರಮದ ಪ್ರಯುಕ್ತ ರಾಜ್ಯ ಮಟ್ಟದ ಚರ್ಚಾಸ್ಪರ್ಧೆ ಹಾಗೂ ಭಾವಗೀತೆ ಗೀತ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಅನುಸೂಚಿತ ಜಾತಿ, ಪಂಗಡಗಳ ಜಿಲ್ಲಾ ಜಾಗೃತಿ, ಉಸ್ತುವಾರಿ ಸಮಿತಿ ರಚನೆ

ಮೈಸೂರು,ಡಿ.2– ಅನುಸೂಚಿತ ಜಾತಿ ಮತ್ತು ಪಂಗಡಗಳು(ದೌರ್ಜನ್ಯ ನಿಯಂತ್ರಣ) ನಿಯಮ 1995 ನಿಯಮ 17 ರೀತ್ಯಾ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ರಚಿಸಿದ್ದು, ಸಮಿತಿಯು 3 ವರ್ಷ ಅಥವಾ ಮುಂದಿನ ಆದೇಶದವರೆಗೆ ಜಾಲ್ತಿಯಲ್ಲಿರುತ್ತದೆ.

3 ವರ್ಷಕ್ಕಿಂತ ಹೆಚ್ಚು ಅವಧಿಗೆ ಚಾಲ್ತಿಯಲ್ಲಿರುವ ಸಮಿತಿಯನ್ನು ಪುನರ್ ರಚಿಸಲು ಆದೇಶವಿರುವುದರಿಂದ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ.

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯು ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿದ ಅಧಿಕಾರೇತರ ಸದಸ್ಯರುಗಳಾದ ಜೆ.ಚಿಕ್ಕಜವರಯ್ಯ(ಅಹಿಂದ ಜವರಪ್ಪ) ಭುಗತಹಳ್ಳಿ, ವರುಣ ಹೋಬಳಿ, ಮೈಸೂರು ದೂ.ಸಂ: 9235602984, ಎನ್.ಟಿ. ರವಿಕುಮಾರ್ ಬಿನ್ ತಿಮ್ಮಾಭೋವಿ, ಪೇಟೆಬೀದಿ, ಬೆಟ್ಟದಪುರ ಗ್ರಾಮ ಮತ್ತು ಅಂಚೆ, ಪಿರಿಯಾಪಟ್ಟಣ, ದೂ.ಸಂ: 9482739001, ಭಾಗ್ಯ ಹೆಚ್.ಕೆ. ಕೋಂ ರಾಜೇಶ್, ಬೇಗೂರು ಗ್ರಾಮ, ಮುತ್ತೂರು ಅಂಚೆ, ಪಿರಿಯಾಪಟ್ಟಣ, ದೂ.ಸಂ: 9900637678, ವೇಣುಗೋಪಾಲ್ ಬಿನ್ ಲೇಟ್ ರೇವನಾಯಕ, ಬೋರೆದೇವರ ಮಂಟಿ, ಹೆಚ್.ಡಿ.ಕೋಟೆ ದೂ.ಸಂ: 9902407223 ಹಾಗೂ ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರದೇ ಇರುವ ಇತರೆ ವರ್ಗದ ಅಧಿಕಾರೇತರ ನಾಮ ನಿರ್ದೇಶಿತ ಸದಸ್ಯರುಗಳಾದ ಎಸ್.ಬಸವರಾಜು ಬಿನ್ ಶಂಬೇಗೌಡ ಕುರಹಟ್ಟಿ, ನಂಜನಗೂಡು ದೂ.ಸಂ: 9972726614, ಮಹದೇವ ಎನ್ ಕೆ ಬಿನ್ ಲೇಟ್ ಕೆಂಪೇಗೌಡ, ನೇರಳಕುಪ್ಪೆ ಗ್ರಾಮ ಮತ್ತು ಅಂಚೆ, ಹನಗೋಡು (ಹೋ) ಹುಣಸೂರು. ದೂ.ಸಂ: 9945427839 ಇವರನ್ನು ಒಳಗೊಂಡಿದೆ. ಪ್ರಸ್ತುತ ಜಿಲ್ಲಾಧಿಕಾರಿಗಳು 6 ಜನ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ಆದೇಶಿರುತ್ತಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ವಿಜಯನಗರದ ಜೆಎಸ್‌ಎಸ್ ವಿದ್ಯಾಸಂಸ್ಥೆಗಳ ಸಮುಚ್ಚಯದಲ್ಲಿ 'ವಚನ ಗಾಯನ–ವಾಚನ ಸ್ಪರ್ಧೆ'ಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಡಾ.ಸಿ.ಪಿ.ಲಾವಣ್ಯ ಉದ್ಘಾಟಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ.ಗು. ಸದಾನಂದಯ್ಯ, ಕಾಲೇಜಿನ ಪ್ರಾಂಶುಪಾಲ ಕಾಂತರಾಜ್ ಆಲನಹಳ್ಳಿ, ಮುಖ್ಯ ಶಿಕ್ಷಕ ನಾಗೇಶ್ ಹಾಗೂ ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ ಇತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಗಣತಿ ವರದಿಯನ್ನು ಜಾರಿಗೊಳಿಸುವ ದೃಢ ವಿಶ್ವಾಸ



ಬೆಂಗಳೂರು, ಡಿ.2(ಕೆಎಂಶಿ)– ಸಾಮಾಜಿಕ ನ್ಯಾಯ ಕಲ್ಪಿಸುವಲ್ಲಿ ರಾಜೀ ಇಲ್ಲ ಎನ್ನುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಆಯೋಗದ ವರದಿ ಅನುಷ್ಠಾನಗೊಳಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಅಖಿಲ ಕರ್ನಾಟಕ ಗಾಣಿಗರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಇಂದು ಮಾತನಾಡಿದ ಅವರು, ಸಮಾಜದಲ್ಲಿ ಅವಕಾಶ ವಂಚಿತ ಜನರಿಗೆ, ಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿರುವವರು, ಸಾಮಾಜಿಕ ನ್ಯಾಯದಿಂದ ಇಂದಿಗೂ ವಂಚಿತರಾದ ಜನರ ಪರವಾಗಿ ನಾವು ಇರುತ್ತೇವೆ ಎಂದರು.

ಗಾಣಿಗ ಸಮಾಜದವರು ಎಣ್ಣೆ ಉತ್ಪಾದನೆಯ ವೃತ್ತಿ ಮಾಡುತ್ತಿದ್ದವರು. ಇತ್ತೀಚಿನ ವರ್ಷಗಳಲ್ಲಿ ಕೈಗಾರೀಕರಣವಾದ ನಂತರ, ಎಣ್ಣೆ ತಯಾರಿಸುವ ವೃತ್ತಿಯನ್ನು ತೊರೆಯುವಂತಹ ಪರಿಸ್ಥಿತಿ ಇದೆ. ಅನೇಕರು ಇದರಿಂದ ನಿರುದ್ಯೋಗಿಗಳಾಗಿದ್ದಾರೆ. ಈ ಸಮಾಜದಲ್ಲಿ ಜಮೀನು ಹೊಂದಿದವರು ಬಹಳ ಕಡಿಮೆ, ಸಣ್ಣ ರೈತರು ಬಹಳ ಕಡಿಮೆ ಇದ್ದಾರೆ ಎಂದರು.

ಗಾಣಿಗರ ನಿಗಮ ಸ್ಥಾಪನೆ, ವಿಶ್ವಕರ್ಮ ಯೋಜನೆಯಡಿ ಗಾಣಿಗರನ್ನು ಕೈಬಿಟ್ಟಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಮನವಿ ಮಾಡಿದ್ದಾರೆ. ನಿಮ್ಮ ಸಮಾಜಕ್ಕೆ ಸೇರಿದ ಪ್ರಧಾನಿಗಳಿಗೆ ನಿಮ್ಮ ಸಮಸ್ಯೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ಕೂಡಲೇ ಪತ್ರ ಬರೆಯುತ್ತೇನೆ ಎಂದು ತಿಳಿಸಿದರು.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಜಾತಿ ಗಣತಿ ವರದಿಯನ್ನು ವೈಜ್ಞಾನಿಕವಾಗಿ ಸಿದ್ಧ ಮಾಡಿದ್ದು, ವರದಿಯನ್ನು ಇನ್ನೂ ನಾವು ಸ್ವೀಕಾರ ಮಾಡಿಲ್ಲ. ವರದಿಯನ್ನು ಸ್ವೀಕರಿಸಲೆಂದೇ ಆಯೋಗದ ಅವಧಿಯನ್ನು 2 ತಿಂಗಳು ಮುಂದುವರೆಸಲಾಗಿದೆ. ವರದಿ ಬಂದ ಮೇಲೆ ಎಲ್ಲರಿಗೂ ಒಳಿತಾಗುವ ತೀರ್ಮಾನ ಕೈಗೊಳ್ಳುತ್ತೇನೆ.

ಗಾಣಿಗರಿಗೆ ಹೆಚ್ಚಿನ ಸಹಾಯ ಮಾಡುವುದಾಗಿ ಇದೇ ವೇಳೆ ಭರವಸೆ ನೀಡಿದರು. ನಿಮಗೆ ನ್ಯಾಯ ಕೊಡಿಸಲು ಸದಾ ನಿಮ್ಮೊಂದಿಗೆ ಇರುತ್ತೇನೆ. ಎಲ್ಲಾ ಜಾತಿಯ ಬಡವರಿಗೆ ಗ್ಯಾರಂಟಿಗಳನ್ನು ಒದಗಿಸಲಾಗಿದೆ ಎಂದರು. ರಾಜಶೇಖರ್ ಅವರಿಗೆ ಸಹಕಾರ ರತ್ನ, ಲಕ್ಷ್ಮೀಪತಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ರಾಧಾಕೃಷ್ಣ ಅವರಿಗೆ ರಾಜ್ಯ ರೈತ ಪ್ರಶಸ್ತಿ ನೀಡಲಾಗಿದೆ. ಸಾಮಾಜಿಕವಾಗಿ ಕೆಲಸ ಮಾಡಿದವರನ್ನು ಗುರುತಿಸುವ ಕೆಲಸ ನಮ್ಮ ಸರ್ಕಾರ ಮಾಡಿದೆ. ಮುಂದೆಯೂ ಅದನ್ನು ನಾವು ಮುಂದುವರೆಸುತ್ತೇವೆ ಎಂದರು.

ಕಾರ್ಯಾಚರಣೆ ಆರಂಭಿಸಿದ ಸೋಲಾರ್ ವಿಂಡ್ ಪೇಲೋಡ್

ಬೆಂಗಳೂರು, ಡಿ.2– ಭಾರತದ ಆದಿತ್ಯ–ಎಲ್–1 ಉಪಗ್ರಹದಲ್ಲಿ ಸೋಲಾರ್ ವಿಂಡ್ ಪಾರ್ಟಿಕಲ್ ಎಕ್ಸ್‌ಪೆರಿಮೆಂಟ್ ಪೇಲೋಡ್ ತನ್ನ ಕಾರ್ಯಾಚರಣೆಯನ್ನು ಆರಂಭಿಸಿದ್ದು, ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಇಸ್ರೋ ಮಾಹಿತಿ ನೀಡಿದೆ.

ಇಸ್ರೋದ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (PSLV–ಅ57) ಸೆಪ್ಟೆಂಬರ್ 2ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ಕೇಂದ್ರದಿಂದ ಆದಿತ್ಯ–ಐ1 ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿತ್ತು. ಆದಿತ್ಯ–ಐ1 ಭೂಮಿಯಿಂದ ಸುಮಾರು 1.5 ಮಿಲಿಯನ್ ಕಿಮೀ ದೂರದಲ್ಲಿರುವ ಮೊದಲ ಸೂರ್ಯ–ಭೂಮಿಯ ಲಗ್ರಾಂಜಿಯನ್ ಪಾಯಿಂಟ್(ಐ1) ಸುತ್ತ ಕರೋನಲ್ ಕಕ್ಷೆಯಿಂದ ಸೂರ್ಯನನ್ನು ಅಧ್ಯಯನ ಮಾಡುವ ಮೊದಲ ಭಾರತೀಯ ಬಾಹ್ಯಾಕಾಶ–ಆಧಾರಿತ ವೀಕ್ಷಣಾಲಯವಾಗಿದೆ.

ಜಿಎಸ್‌ಟಿ ಸಂಗ್ರಹ ಶೇ.15ರಷ್ಟು ಹೆಚ್ಚಳ; ನವೆಂಬರ್‌ನಲ್ಲಿ 1.68 ಲಕ್ಷ ಕೋಟಿ ರೂ.

ನವದೆಹಲಿ, ಡಿ.2–ಜಿಎಸ್‌ಟಿ ಸಂಗ್ರಹವು ನವೆಂಬರ್‌ನಲ್ಲಿ 15 ಪ್ರತಿಶತದಷ್ಟು ಹೆಚ್ಚಾಗಿದ್ದು ಸುಮಾರು 1.68 ಲಕ್ಷ ಕೋಟಿ ರೂಪಾಯಿ ಸಂಗ್ರಹವಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ ಸರಕು ಮತ್ತು ಸೇವಾ ತೆರಿಗೆ (GST) ಸಂಗ್ರಹ 1.45 ಲಕ್ಷ ಕೋಟಿ ರೂಪಾಯಿ ಆಗಿದ್ದು, ನವೆಂಬರ್ 2023ರಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹವು 1,67,929 ಕೋಟಿ ರೂಪಾಯಿಗಳಷ್ಟಿದೆ ಎಂದು ಹಣಕಾಸು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.


ಇದರಲ್ಲಿ ಕೇಂದ್ರ ಜಿಎಸ್‌ಟಿ (ಸಿಜಿಎಸ್‌ಟಿ) 30,420 ಕೋಟಿ, ರಾಜ್ಯ ಜಿಎಸ್‌ಟಿ 38,226 ಕೋಟಿ, ಇಂಟಿಗ್ರೇಟೆಡ್ ಜಿಎಸ್‌ಟಿ 87,009 ಕೋಟಿ (ಸರಕು ಆಮದಿನ ಮೇಲೆ ಸಂಗ್ರಹವಾದ 39,198 ಕೋಟಿ ಸೇರಿದಂತೆ) ಮತ್ತು ಸೆಸ್ 12,274 ಕೋಟಿ (ರೂ. 1,036 ಕೋಟಿ ಸೇರಿ ಸಂಗ್ರಹವಾಗಿದೆ). ಈ ವರ್ಷದ ನವೆಂಬರ್‌ನಲ್ಲಿ ಅಕ್ಟೋಬರ್‌ನಲ್ಲಿ ಸಂಗ್ರಹವಾದ 1.72 ಲಕ್ಷ ಕೋಟಿ ರೂ.ಗಿಂತ ಕಡಿಮೆ ಸಂಗ್ರಹವಾಗಿದ್ದರೂ, ಜಿಎಸ್‌ಟಿ ಜಾರಿ ನಂತರ ಇದು ಎರಡನೇ ಅತಿ ಹೆಚ್ಚು ಸಂಗ್ರಹವಾಗಿದೆ.

ನವೆಂಬರ್ 2023ರ ಸಂಗ್ರಹವು ಕಳೆದ ವರ್ಷ ಇದೇ ತಿಂಗಳಿಗಿಂತ 15 ಪ್ರತಿಶತ ಹೆಚ್ಚಾಗಿದೆ ಎಂದು ಸಚಿವಾಲಯ ತಿಳಿಸಿದೆ. ಇದು 2023–24ರ ಅವಧಿಯಲ್ಲಿ ನವೆಂಬರ್ ವರೆಗೆ ವಾರ್ಷಿಕ ಆಧಾರದ ಮೇಲೆ ಯಾವುದೇ ತಿಂಗಳಿಗೆ ಅತ್ಯಧಿಕ ಏರಿಕೆಯಾಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನವೆಂಬರ್‌ವರೆಗಿನ ಒಟ್ಟು ಜಿಎಸ್‌ಟಿ ಸಂಗ್ರಹವು 13,32,440 ಕೋಟಿ ರೂ.ಗಳಾಗಿದ್ದು, ತಿಂಗಳಿಗೆ ಸರಾಸರಿ 1.66 ಲಕ್ಷ ಕೋಟಿ ರೂ. ಈ ಸಂಗ್ರಹಣೆಯು ಕಳೆದ ವರ್ಷದ ಇದೇ ಅವಧಿಗಿಂತ 11.9 ರಷ್ಟು ಹೆಚ್ಚಾಗಿದೆ.

ಗ್ಯಾರಂಟಿ ಹೆಸರಲ್ಲಿ ಕಾಂಗ್ರೆಸ್ ಸರ್ಕಾರ ಪುಕ್ಕಟೆ ಪ್ರಚಾರ ಪಡೆಯುತ್ತಿದೆ

● ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯ

● ಅಧಿಕಾರಕ್ಕೆ ಬಂದು ಆರು ತಿಂಗಳಲ್ಲಿ ಎಷ್ಟು ಯೋಜನೆ ಜಾರಿ ಮಾಡಿದ್ದೀರಿ?



ಬೆಂಗಳೂರು, ಡಿ.2(ಕೆಎಂಶಿ)– ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಲ್ಲಿ ಬಜೆಟ್‌ನಲ್ಲಿ ಘೋಷಿಸಿರುವ ಎಷ್ಟು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂಬ ಬಗ್ಗೆ ಮಾಹಿತಿ ನೀಡಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದು ಆರು ತಿಂಗಳಾಯಿತು. ಸರ್ಕಾರದ ಬಗ್ಗೆ ಜನರು ಭ್ರಮನಿರಸನಗೊಂಡಿದ್ದಾರೆ. ಇವರು ಪದೇ ಪದೇ ಗ್ಯಾರಂಟಿಗಳ ಬಗ್ಗೆ ಪ್ರಚಾರ ಮಾಡಿ ಕೊಳ್ಳುತ್ತಿದ್ದಾರೆ. ವಾಸ್ತವದಲ್ಲಿ ಜನರಿಗೆ ಗ್ಯಾರಂಟಿ ಯೋಜನೆಗಳು ತಲುಪುತ್ತಿಲ್ಲ. ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಹತ್ತು ಕೆಜಿ ಅಕ್ಕಿ ಕೊಡುವ ಬದಲು ಕೇಂದ್ರ ಸರ್ಕಾರ ನೀಡುವ ಐದು ಕೆಜಿ ಅಕ್ಕಿಯನ್ನೂ ಕೊಡುತ್ತಿಲ್ಲ. ಅದರ ಹೊರತಾಗಿ ಕಾಳಸಂತೆಯಲ್ಲಿ ಮುಕ್ತವಾಗಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಡೆಯಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು. ಗೃಹಲಕ್ಷ್ಮಿ ಯೋಜನೆ ಸಮೀಕ್ಷೆ ಮಾಡಿ ದರೆ ಮೊದಲ ತಿಂಗಳು ಕೇವಲ ಶೇ.35 ರಷ್ಟು ಜನರಿಗೆ ಹಣ ತಲುಪಿದೆ. ನಂತರದ ಕಂತುಗಳು ಸರಿಯಾಗಿ ಬಂದಿಲ್ಲ. ಗೃಹಲಕ್ಷ್ಮಿಯರ ಜೊತೆ ಸರ್ಕಾರ ಚೆಲ್ಲಾಟವಾಡುತ್ತಿದೆ. ವಿದ್ಯುತ್ ವಿಚಾರದಲ್ಲಂತೂ ಸರ್ಕಾರ ರೈತರಿಗೆ ಸರಿಯಾಗಿ ವಿದ್ಯುತ್ ನೀಡುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ಗಂಟೆ ನಿರಂತರ ವಿದ್ಯುತ್ ಕೊಡುವುದಾಗಿ ಹೇಳಿದ್ದಾರೆ. ಆದರೆ, ರೈತರಿಗೆ ಕೇವಲ 3 ಗಂಟೆ ಮಾತ್ರ ವಿದ್ಯುತ್ ಸಿಗುತ್ತಿದೆ. ಆದರೆ, ರಾಜ್ಯ ಕಾಂಗ್ರೆಸ್ ನಾಯಕರು ಸುಮ್ಮನೆ ತೆಲಂಗಾಣಕ್ಕೆ ಹೋಗಿ ಗ್ಯಾರಂಟಿಗಳ ಬಗ್ಗೆ ಪುಕ್ಕಟೆ ಪ್ರಚಾರ ಪಡೆದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕರ್ನಾಟಕ ಆರ್ಥಿಕವಾಗಿ ಸಬಲವಾಗಿರುವ ರಾಜ್ಯ, ಆದರೆ, ಯಾವುದೇ ಯೋಜನೆಗಳನ್ನು ಜಾರಿಗೆ ತರದ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ. ಹಿಂದಿನ ಸರ್ಕಾರ ಆರ್ಥಿಕ ಪರಿಸ್ಥಿತಿ ಸುಧಾರಣೆಗೆ ತಂದಿದ್ದು ಅದರ ಲಾಭ ಪಡೆದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಎಸ್ಸಿಪಿ, ಟಿಎಸ್‌ಪಿ ಯೋಜನೆಗಳ 11 ಸಾವಿರ ಕೋಟಿ ರೂ. ವರ್ಗಾವಣೆ ಮಾಡಿದ್ದಾರೆ. ರಾಜ್ಯದ ಸಾಲದ ಪ್ರಮಾಣ ಹೆಚ್ಚಾಗಿದೆ. ಸಾಲದ ಸುಳಿಗೆ ಸಿಲುಕಿರುವ ರಾಜಸ್ಥಾನ, ಪಂಜಾಬ್ ಸೇರಿದಂತೆ 3 ರಾಜ್ಯಗಳಿಗೆ ರಿಸರ್ವ್ ಬ್ಯಾಂಕ್ ಎಚ್ಚರಿಕೆ ಕೊಟ್ಟಿದೆ. ನಮ್ಮ ರಾಜ್ಯವನ್ನು ಆ ಪರಿಸ್ಥಿತಿಗೆ ತೆಗೆದುಕೊಂಡು ಹೋಗಬೇಡಿ ಎಂದರು.

ರಾಜ್ಯದಲ್ಲಿ ಭ್ರಷ್ಟಾಚಾರ ಎಲ್ಲ ಹಂತದಲ್ಲೂ ನಡೆಯುತ್ತಿದೆ. ಸಣ್ಣ ಪುಟ್ಟ ಕೆಲಸ ಮಾಡಿಕೊಡುವಲ್ಲಿಯೂ ವಸೂಲಿ ನಡೆಯುತ್ತಿದೆ. ವರ್ಗಾವಣೆ ನಿರಂತರವಾಗಿ ನಡೆ ಯುತ್ತಿದೆ ನಮ್ಮ ಮೇಲೆ 40% ಆರೋಪ ಮಾಡಿದ್ದರು. ಈಗ 50% ಕಮಿಷನ್ ನೇರವಾಗಿಯೇ ಭ್ರಷ್ಟಾಚಾರ ನಡೆಯುತ್ತಿದೆ. ಕಮಿಷನ್ ಆರೋಪದ ಬಗ್ಗೆ ತನಿಖೆ ನಡೆಸಲು ಸರ್ಕಾರ ಆಯೋಗ ರಚನೆ ಮಾಡಿದೆ ಎಂದರು.

'ಗೀತ್ ಸಂಗಮ್' ಸಂಗೀತ ಸಂಜೆ ಕಾರ್ಯಕ್ರಮ ಇಂದು



ಕವಿತಾ ಕಾಮತ್ | ನಿತ್ಯಾನಂದ ಕಾಮತ್ | ಸದಾಶಿವ ಶೆಣೈ | ಹೆಡತಲೆ ನಾರಾಯಣ

ಡಾ.ಸೋಮನಾಥ್ | ಡಾ.ಸೀತಾಲಕ್ಷ್ಮಿ | ಡಾ.ಮಂಜುನಾಥ್ | ಡಾ.ಭಾರತಿ



ನಿಖಿಲ್ ಪ್ರಭು | ಸುಮಾ ಪ್ರಕಾಶ್ | ಜಯಲಕ್ಷ್ಮಿ ನಾಯ್ಡು

ಮೈಸೂರು, ಡಿ.2–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಡಿ. 3 ರಂದು ಸಂಜೆ 5.30ಕ್ಕೆ ಕವಿತಾ ಕಾಮತ್ ನೇತೃತ್ವದಲ್ಲಿ ಮ್ಯೂಸಿಕ್ ಲವರ್ಸ್ ತಂಡದವರಿಂದ 'ಗೀತ್ ಸಂಗಮ್' ಸುಮಧುರ ಕನ್ನಡ ಹಾಗೂ ಹಿಂದಿ ಚಲನಚಿತ್ರಗೀತೆಗಳ ಸಂಗೀತ ರಸಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಸಂಗೀತ ಸಂಜೆಯಲ್ಲಿ ವೃತ್ತಿಪರ ಗಾಯಕರು ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಉದಯೋನ್ಮುಖ ಗಾಯಕರು ಹಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಸದಾಶಿವಶೆಣೈ, ಹೆಡತಲೆ ನಾರಾಯಣ್, ಡಾ.ಸೋಮನಾಥ್ ವಾಸುದೇವ್, ಡಾ.ಸೀತಾಲಕ್ಷ್ಮಿ, ಡಾ.ಮಂಜುನಾಥ್ ಕೆ.ಆರ್. ಡಾ. ಭಾರತಿ, ನಿಖಿಲ್ ಪ್ರಭು, ಸುಮಾಪ್ರಕಾಶ್ ಹಾಗೂ ಜಯಲಕ್ಷ್ಮಿ ನಾಯ್ಡು ಹಾಡಲಿದ್ದಾರೆ. ನಿರೂಪಣೆಯನ್ನು ಡಾ.ಆರ್.ಎಲ್. ಜಗದೀಶ್ ಮತ್ತು ಅನಿತಾ ನಿರ್ವಹಿಸಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರುತ್ತದೆ.

ಫ್ರೂಟ್ಸ್ ಐಡಿ ಮಾಡಿಸಲು ರೈತರಿಗೆ ಡಿಸಿ ಮನವಿ

ಮೈಸೂರು, ಡಿ.2(ಎಸ್‌ಬಿಡಿ)– ಜಿಲ್ಲೆಯ ಎಲ್ಲಾ ರೈತರಿಗೂ ವಾರದಲ್ಲಿ ಫ್ರೂಟ್ಸ್ ಐಡಿ ನೀಡುವ ಗುರಿಯೊಂದಿಗೆ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಸರ್ಕಾರದ ಸೌಲಭ್ಯ ಹಾಗೂ ಪರಿಹಾರ ಪಡೆಯಲು ಫ್ರೂಟ್ಸ್ ಐಡಿ ಅಗತ್ಯವಾಗಿರುವುದರಿಂದ ಆರ್‌ಟಿಸಿಯಲ್ಲಿ ಹೆಸರಿರುವ ಎಲ್ಲಾ ರೈತರೂ ಆಧಾರ್ ಕಾರ್ಡ್, ಆಧಾರ್ ಸೀಡಿಂಗ್ ಹಾಗೂ ಎನ್‌ಪಿಸಿಐ ಮ್ಯಾಪಿಂಗ್ ಆಗಿರುವ ಬ್ಯಾಂಕ್ ವಿವರ, ಆರ್‌ಟಿಸಿ ಇನ್ನಿತರ ದಾಖಲೆಗಳೊಂದಿಗೆ ವಿಎ, ಆರ್‌ಐ ಅಥವಾ ರೈತ ಸಂಪರ್ಕ ಕೇಂದ್ರಗಳಲ್ಲಿ ಫ್ರೂಟ್ಸ್ ಐಡಿ ಮಾಡಿಸಬೇಕು ಎಂದು ಮನವಿ ಮಾಡಿದರು.

ಭತ್ತ ಹೊರತುಪಡಿಸಿ ರಾಗಿ, ಹುರುಳಿ ಸೇರಿದಂತೆ ಹಲವು ಬೆಳೆ ನಷ್ಟವಾಗಿದೆ. ಜಿಲ್ಲೆಯಲ್ಲಿ ಸುಮಾರು 60 ಕೋಟಿ ರೂ. ಬೆಳೆ ನಷ್ಟವಾಗಿದೆ ಎಂದು ವರದಿ ನೀಡಲಾಗಿದೆ. ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಬೆಳೆ ನಷ್ಟಕ್ಕೆ ಪರಿಹಾರ ಸಿಗಲಿದೆ. ಮುಖ್ಯಮಂತ್ರಿಗಳು ತುರ್ತು ಬೆಳೆ ಪರಿಹಾರವಾಗಿ ಎರಡು ಸಾವಿರ ರೂ. ನೀಡುವುದಾಗಿ ಘೋಷಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಫ್ರೂಟ್ಸ್ ಐಡಿ ಮಾಡಿಸುವುದು ಅಗತ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲೆಯ ಒಟ್ಟು 10,78,637 ಪ್ಲಾಟ್‌ಗಳಲ್ಲಿ 5,96,953 ಪ್ಲಾಟ್ಸ್‌ಗಳು ಫ್ರೂಟ್ಸ್ ಐಡಿಯಲ್ಲಿ ಸೇರ್ಪಡೆಯಾಗಿದ್ದು, ಇನ್ನೂ 4,81,684 ಪ್ಲಾಟ್‌ಗಳು ಬಾಕಿ ಇವೆ. ಹೆಚ್ಚು ಸಮಯವಿಲ್ಲದ ಕಾರಣ ವಾರದಲ್ಲಿ ಶೇ.100ರಷ್ಟು ಸಾಧಿಸಬೇಕಿದೆ. ಇದಕ್ಕೆ ರೈತರು, ರೈತ ಮುಖಂಡರ ಸಹಕಾರ ಬಹಳ ಮುಖ್ಯ ಎಂದು ಹೇಳಿದರು.

ಭತ್ತ–ರಾಗಿ ಖರೀದಿಗೆ ನೋಂದಣಿ



ಕನಿಷ್ಠ ಬೆಂಬಲ ಬೆಲೆಯಡಿ ರಾಗಿ ಮತ್ತು ಭತ್ತ ಖರೀದಿಸಲು ಡಿ.1 ರಿಂದಲೇ ನೋಂದಣಿ ಆರಂಭಿಸಬೇಕಿತ್ತು. ಆದರೆ ತಾಂತ್ರಿಕ ದೋಷದಿಂದ ತಡವಾಗಿದೆ. ಡಿ.5ರ ನಂತರ ಸಾಫ್ಟ್‌ವೇರ್ ಸಮಸ್ಯೆ ಬಗೆಹರಿಯುವ ನಿರೀಕ್ಷೆಯಿದ್ದು, ಶೀಘ್ರದಲ್ಲೇ ನೋಂದಣಿ ಆರಂಭಿಸಲಾಗುವುದು.

–ಡಿಸಿ ಡಾ.ಕೆ.ವಿ.ರಾಜೇಂದ್ರ

ಡಿ.9ರಂದು ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆ

ಮೈಸೂರು, ಡಿ.2– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕರ ಶಿಕ್ಷಣ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ ಡಿ.9ರಂದು ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ 2023–24 ನೇ ಸಾಲಿನ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸುವರು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.





ಮೈಸೂರಿನ ಕರುನಾಡ ಸೇವಾ ಸೇನೆ ರಾಜ್ಯಾಧ್ಯಕ್ಷರಾದ ಬಿ.ಗಣೇಶ ಅವರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಅವರ ಅಭಿಮಾನಿಗಳು, ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಇದೇ ವೇಳೆ ಕೆ.ಆರ್.ಆಸ್ಪತ್ರೆಯ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಿದರು. ಚಿತ್ರದಲ್ಲಿ ಸಮಿತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಕುಮಾರ್, ಮುರಳಿ, ಮಂಜೇಶ, ಅನಿಲ್, ಚಂದ್ರು, ಲೋಕಿ, ಹೇಮಂತ್, ಮಹದೇವ ಸೇರಿದಂತೆ ಸಮಿತಿಯ ಇನ್ನಿತರ ಸದಸ್ಯರನ್ನು ಕಾಣಬಹುದು.

ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ 50 ಸುವರ್ಣ ಕರ್ನಾಟಕ ಸಂಭ್ರಮ



ಮೈಸೂರು, ಡಿ. 2–ಸುವರ್ಣ ಕರ್ನಾಟಕ ಸಂಭ್ರಮ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಆಚರಿಸಲಾಯಿತು.

ಈ ವೇಳೆ ಜಾನಪದ ತಜ್ಞ ಡಾ.ಪಿ.ಕೆ.ರಾಜಶೇಖರ್ ಮಾತನಾಡಿ, ಕನ್ನಡ ಭಾಷೆಗೆ 5000ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ರಾಮಾಯಣ, ಮಹಾಭಾರತದ ಕಾಲದಿಂದಲೂ ಕನ್ನಡ ಪ್ರಚಲಿತದಲ್ಲಿದೆ. ಶ್ರೀರಾಮನು ಸಹ ಕನ್ನಡ ಭಾಷೆಯನ್ನು ಮಾತನಾಡುತ್ತಿದ್ದನು. ಎಲ್ಲಮ್ಮ/ರೇಣುಕಾದೇವಿಯ ಮಗ ಪರಶುರಾಮ, ಚಂದ್ರಹಾಸ, ರಾಮಾಯಣದಲ್ಲಿ ಬರುವ ವಾಲಿ, ಸುಗ್ರೀವ, ಆಂಜನೇಯ ಅವರುಗಳು ಸಹ ಕನ್ನಡಿಗರು. ಇವರೆಲ್ಲಾ ಮೆಹಂಜೋದಾರೋ ಕಡೆಯಿಂದ ಬಂದವರಾಗಿದ್ದಾರೆ.

1915ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಾಪನೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳಲ್ಲಿ ಕರ್ನಾಟಕದ ಏಕೀಕರಣವು ಪ್ರಧಾನವಾಗಿತ್ತು. ಕರ್ನಾಟಕ ಅಂದು ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಕೊಡಗು, ಮೈಸೂರು ಪ್ರಾಂತ್ಯ, ಮದ್ರಾಸ್ ಕರ್ನಾಟಕ ಎಂದು ವಿಭಾಗವಾಗಿತ್ತು. ಏಕೀಕರಣಕ್ಕಾಗಿ ಅದಕ್ಕಾಗಿ ನಾಡಿನ ಶ್ರೇಷ್ಠ ಸಾಹಿತಿಗಳಾದ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯ, ಫಗು ಹಳಕಟ್ಟಿ, ಹೆಚ್.ವಿ. ನಂಜುಂಡಯ್ಯ, ಬಿ.ಎಂ.ಶ್ರೀ, ಡಿವಿಜಿ, ಬಿ.ಕೃಷ್ಣಪ್ಪ, ಕುವೆಂಪು, ಬೇಂದ್ರೆ, ಮಾಸ್ತಿ ಮೊದಲಾದವರು ಶ್ರಮಿಸಿದ್ದಾರೆ. ಈ ಸಂಬಂಧ ಹಲವಾರು ಕನ್ನಡ ಸಾಹಿತ್ಯ ಸಮ್ಮೇಳನಗಳು ಹಾಗೂ ಸಮಿತಿ ಸಭೆಗಳು ನಡೆದು ಅಲ್ಲಿ ಮಹಿಳೆಯರು ಸಹ ಕರ್ನಾಟಕ ಏಕೀಕರಣಕ್ಕೆ ಹೋರಾಟ ಮಾಡಿದ್ದಾರೆ. ಅದರ ಫಲವಾಗಿ ನವೆಂಬರ್ 1, 1956ರಲ್ಲಿ ಏಕೀಕರಣವಾಗಿ 'ಮೈಸೂರು ರಾಜ್ಯ'ವೆಂದು ಹೆಸರಾಯಿತು. ಈ ನೆಲದಲ್ಲಿ ಜನಿಸಿದ ನಾವುಗಳೇ ಧನ್ಯರು. ಆದ್ದರಿಂದ ನಮ್ಮ ಸ್ಥಳೀಯ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡೋಣ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ನಾಡು–ನುಡಿ, ಆಹಾರ, ವಾಸ್ತುಶಿಲ್ಪ, ಉಡುಗೆ–ತೊಡುಗೆ, ಕನ್ನಡ ಭಾಷೆಯ ವೈಶಿಷ್ಟತೆಯನ್ನು ಹೊಗಳಿದರು. ಕನ್ನಡದ ನೆಲ, ಜಲವನ್ನು ಉಳಿಸಿ, ಕನ್ನಡವನ್ನು ಪ್ರೀತಿಸಿ, ಅನ್ಯ ಭಾಷೆಯ ಬಂಧುಗಳಿಗೂ ಕನ್ನಡವನ್ನು ಕಲಿಸಿ, ಕನ್ನಡ ಮಾತನಾಡುವುದನ್ನು ಬೆಳೆಸಿ, ಗೌರವಿಸುವ, ಮತ್ತು ಪ್ರೀತಿಸುವ ಮನೋಧರ್ಮವನ್ನು ನಾಡಿನಾದ್ಯಂತ ಪಸರಿಸಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕನ್ನಡವನ್ನು ನಾವು ಬಳಸಿ, ಬೆಳೆಸಿ ಉಳಿಸಿಕೊಂಡು ಹೋಗಬೇಕು ಎಂದು ತಿಳಿಸಿದರು. ಇತಿಹಾಸ ವಿಭಾಗದ ಮುಖ್ಯಸ್ಥರು ಹಾಗೂ ಶೈಕ್ಷಣಿಕ ಡೀನ್, ಡಾ.ಶ್ರೀಧರ ಹೆಚ್, ಕನ್ನಡ ವಿಭಾ ಗದ ಸಹಾಯಕ ಪ್ರಾಧ್ಯಾಪಕ ಡಾ. ವಿನೋದಮ್ಮ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರು ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀಮತಿ ಶೃತಿಪೂಣಚ್ಚ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ಹಾಗೂ ನ್ಯಾಕ್ ಸಂಯೋಜಕಿ ಶ್ರೀಮತಿ ಗೀತಾ ಡಿ, ಕನ್ನಡ ಸಹಾಯಕ ಪ್ರಾಧ್ಯಾಪಕ ಹಾಗೂ ಪ್ರತಿಭಾವೇದಿಕೆ ಸಂಚಾಲಕ ನಾಗೇಶ ಎಂ, ಸಿ.ಎಂ. ಕಿರಣ್‌ಕುಮಾರ್, ಮನೋಜ್‌ಕುಮಾರ್ ಜೆ, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರ ವರ್ಗದವರು ಉಪಸ್ಥಿತರಿದ್ದರು.

ರಾಜ್ಯದಲ್ಲೇ ಪ್ರಪ್ರಥಮ 5–ಜಿ ಆಂಬುಲೆನ್ಸ್ ಸೇವೆ ಗೋಣಿಕೊಪ್ಪಲಿನಲ್ಲಿ ಲೋಕಾರ್ಪಣೆ

ಮೈಸೂರಿನ ಅಪೋಲೊ ಬಿ.ಜಿ.ಎಸ್ ಆಸ್ಪತ್ರೆ, ಲೋಪಾಮುದ್ರ ಆಸ್ಪತ್ರೆಯ ಸಹಯೋಗ

ಮಡಿಕೇರಿ,ಡಿ.2– ಮೈಸೂರಿನ ಅಪೋಲೊ ಬಿ.ಜಿ.ಎಸ್ ಆಸ್ಪತ್ರೆ ಹಾಗೂ ಗೋಣಿಕೊಪ್ಪಲಿನ ಲೋಪಾಮುದ್ರ ಆಸ್ಪತ್ರೆಯ ಸಹಯೋಗದಲ್ಲಿ ರಾಜ್ಯದಲ್ಲೇ ಪ್ರಥಮ ಬಾರಿಗೆ '5 ಜಿ ಆಂಬುಲೆನ್ಸ್' ಸೇವೆಯನ್ನು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಲೋಕಾರ್ಪಣೆ ಗೊಳಿಸಿದರು.



ಹೃದಯಾಘಾತವಾದ ತಕ್ಷಣ ತುರ್ತು ನೀಡಬೇಕಾದ ಪ್ರಥಮ ಹಂತದ ಔಷಧಿಯನ್ನು ಎ.ಕೆ.ಸುಬ್ಬಯ್ಯ ಮತ್ತು ಪೊನ್ನಮ್ಮ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಬಡ ರೋಗಿಗಳಿಗೆ ಉಚಿತವಾಗಿ ನೀಡುವ ಉದ್ದೇಶದಿಂದ ಔಷಧಿಗಳನ್ನು ಲೋಪಾಮುದ್ರ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ. ಅಮೃತ್ ನಾಣಯ್ಯ ಅವರಿಗೆ ಶಾಸಕ ಎ.ಎಸ್. ಪೊನ್ನಣ್ಣ ಹಸ್ತಾಂತರಿಸಿದರು.

ಈ ಸಂದರ್ಭ ಮಾತನಾಡಿದ ಶಾಸಕ ಎ.ಎಸ್ ಪೊನ್ನಣ್ಣ, ಮೈಸೂರಿನ ಅಪೋಲೊ ಬಿ.ಜಿ.ಎಸ್ ಆಸ್ಪತ್ರೆ ಹಾಗೂ ಗೋಣಿಕೊಪ್ಪಲಿನ ಲೋಪಾಮುದ್ರ ಆಸ್ಪತ್ರೆಯ ಸಹಯೋಗದಲ್ಲಿ ರಾಜ್ಯದಲ್ಲೇ ಪ್ರಥಮ ಹಾಗೂ ದೇಶದಲ್ಲಿ ಎರಡನೇಯ 5ಜಿ ಆಂಬುಲೆನ್ಸ್ ಸೇವೆಯನ್ನು ಒದಗಿಸುತ್ತಿರುವುದು ಶ್ಲಾಘನೀಯ. ಕಾಡಾನೆ ದಾಳಿಗೆ ಸಿಲುಕಿ ಗಾಯಗೊಂಡವರಿಗೆ ಮೈಸೂರಿನ ಅಪೋಲೊ ಬಿ.ಜಿ.ಎಸ್ ಆಸ್ಪತ್ರೆಯಲ್ಲಿ ತಕ್ಷಣ ಉಚಿತ ಚಿಕಿತ್ಸೆಯನ್ನು ನೀಡಲಾಗುತ್ತಿದ್ದು, ರೋಗಿಯ ಚಿಕಿತ್ಸೆಯ ವೆಚ್ಚವನ್ನು ಸರಕಾರ ಭರಿಸಲಿದೆ ಎಂದರು.

ಹೃದಯಾಘಾತವಾದ ತಕ್ಷಣ ತುರ್ತು ನೀಡಬೇಕಾದ ಪ್ರಥಮ ಹಂತದ ಔಷಧಿಯ ವ್ಯವಸ್ಥೆಯನ್ನು ಬಡ ರೋಗಿಗಳಿಗೆ ಎ.ಕೆ. ಸುಬ್ಬಯ್ಯ ಮತ್ತು ಪೊನ್ನಮ್ಮ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಗೋಣಿಕೊಪ್ಪದ ಲೋಪಾಮುದ್ರ ಆಸ್ಪತ್ರೆಯಲ್ಲಿ ಉಚಿತವಾಗಿ ನೀಡುವುದಾಗಿ ಭರವಸೆ ನೀಡಿದರಲ್ಲದೇ, ಜನರ ಪ್ರಾಣ ಉಳಿಸುವ ವ್ಯವಸ್ಥೆಯನ್ನು ಜನರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಲೋಕಾರ್ಪಣೆಗೊಂಡ ಅತ್ಯಾಧುನಿಕ 5ಜಿ ಆಂಬುಲೆನ್ಸ್ ಒಂದು ಸಂಚಾರಿ ಐಸಿಯುನಂತೆ ಕಾರ್ಯನಿರ್ವಹಿಸಲಿದ್ದು, ಹೃದಯಕ್ಕೆ ಸಂಬಂಧಿಸಿದ ವೈದ್ಯರ ನಿರಂತರ ಸಂಪರ್ಕದೊಂದಿಗೆ ರೋಗಿಯ ಜೀವ ಉಳಿಸುವಂತಹ ಯಂತ್ರೋಪಕರಣಗಳು ಲಭ್ಯವಿರಲಿದೆ.

ಲೋಪಾಮುದ್ರ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಮುಕ್ಕಾಟಿರ ಡಾ. ಅಮೃತ್ ನಾಣಯ್ಯ ಮಾತನಾಡಿ, 5 ಜಿ ಆಂಬುಲೆನ್ಸ್‌ನಲ್ಲಿರುವ ಸೇವೆಗಳ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭ ಗೋಣಿಕೊಪ್ಪಲಿನ ಲೋಪಾಮುದ್ರ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಸೌಮ್ಯ ಗಣೇಶ್ ನಾಣಯ್ಯ, ಲೋಪಾಮುದ್ರ ಆಸ್ಪತ್ರೆ ಅಧ್ಯಕ್ಷ ಕ್ಯಾಪ್ಟನ್ ಮಾದಪ್ಪ, ಅಪೋಲೊ ಬಿ.ಜಿ.ಎಸ್ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಅಮಾನ್, ಸಮಾಜ ಸೇವಕ ಸುಕೇತ್ ಪೂವಯ್ಯ, ಅಪೋಲೊ ಬಿ.ಜಿ.ಎಸ್ ಆಸ್ಪತ್ರೆ ಸೀನಿಯರ್ ಎಕ್ಸ್‌ಕ್ಯೂಟಿವ್ ರಾಕೇಶ್ ಉತ್ತಪ್ಪ ಸೇರಿದಂತೆ ಲೋಪಾಮುದ್ರ ಆಸ್ಪತ್ರೆಯ ಸಿಬ್ಬಂದಿಗಳು ಹಾಜರಿದ್ದರು.

ವಿರಾಜಪೇಟೆ ಕಾಲೇಜಿನಲ್ಲಿ ನುಡಿ ಹಬ್ಬ ಆಚರಣೆ



ಕಲಿಕೆಯಲ್ಲಿ ತಪಸ್ವಿಗಳಾದರೆ ಭವಿಷ್ಯಕ್ಕೆ ನಾಂದಿ

ವಿರಾಜಪೇಟೆ, ಡಿ.2– ವಿದ್ಯಾರ್ಥಿಗಳು ಜ್ಞಾನದಾಹಿಗಳಾಗಿ, ನಿರಂತರ ಅಧ್ಯಯನ ಶೀಲರಾಗಿ ಕ್ರಿಯಾಶೀಲರಾಗಿ ತಪಸ್ವಿಗಳಂತೆ ಪಾಲ್ಗೊಳ್ಳುವ ಉತ್ಸಾಹವೇ ಉತ್ತಮ ಭವಿಷ್ಯಕ್ಕೆ ನಾಂದಿಯಾಗುತ್ತದೆ ಎಂದು ಮೈಸೂರಿನ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಪ್ರೊ. ಎನ್.ಎಂ. ತಳವಾರ ಅವರು ಹೇಳಿದರು.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಸುವರ್ಣ ಕರ್ನಾಟಕ ಸಂಭ್ರಮ 50ರ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಕನ್ನಡ ವಿಭಾಗದ ವಿದ್ಯಾರ್ಥಿಗಳಿಂದ ರಚಿತವಾದ "ಕನ್ನಡ ಸಾಹಿತ್ಯ ಪ್ರಶ್ನೋತ್ತರ ಕೋಶ" ಪುಸ್ತಕವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಉತ್ತಮ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಜೀವನದಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸಿಕೊಳ್ಳುವಂತಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಮೈಸೂರು ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಪ್ರೊಫೆಸರ್ ಡಾ. ಕೆ.ತಿಮ್ಮಯ್ಯ ಅವರು, ಮಾತನಾಡಿ, "ಕನ್ನಡ ಭಾಷೆಯ ಸಂವರ್ಧನೆಯ ಸವಾಲು ಮತ್ತು ಸಾಧ್ಯತೆಗಳು ಕುರಿತು ತಮ್ಮ ಉಪನ್ಯಾಸದಲ್ಲಿ ಕನ್ನಡ ಕೇವಲ ಭಾಷೆ ಮಾತ್ರವಾಗಿರದೆ ಅನ್ನದ ಭಾಷೆಯಾಗಿರಬೇಕು. ಮಾತೃದೇವೋಭವ ಎನ್ನುವಷ್ಟೇ ಮಾತೃಭಾಷೆ ಮನ್ನಣೆ ಗಳಿಸಬೇಕು ಎಂದರು.

ಈ ವೇಳೆ ಕನ್ನಡ ಜ್ಯೋತಿ ಸಾಹಿತ್ಯ ಬಳಗದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕನ್ನಡ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ವೇದಿಕೆಯಲ್ಲಿ ಬಹುಮಾನ ವಿತರಿಸಲಾಯಿತು. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ಸಿ. ದಯಾನಂದ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ, ಕೆ.ಬಸವರಾಜು, ಕನ್ನಡ ಸಹಾಯಕ ಪ್ರಾಧ್ಯಾಪಕ ಆರ್.ರಘುರಾಜು, ಉಪನ್ಯಾಸಕ ಡಾ.ಡಿ.ಪ್ರಭು ಹಾಗೂ ಐ.ಕ್ಯೂ.ಎ.ಸಿ ಸಂಚಾಲಕ ಪಿ.ಎನ್. ನಾಗರಾಜಮೂರ್ತಿ ಮತ್ತು ಬೋಧಕ–ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ವೇದಿಕೆಯಲ್ಲಿ ಅತಿಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ರಾಜಾ ಮಯೂರ ವರ್ಮ, ಕಿತ್ತೂರು ರಾಣಿ ಚೆನ್ನಮ್ಮರ ಕಿರು ಪ್ರಹಸನದೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮವು ಕನ್ನಡದ ಗೀತೆಗಳು ಹಾಗೂ ನೃತ್ಯದೊಂದಿಗೆ ಮುಕ್ತಾಯಗೊಂಡಿತು. ಸಾಹಿತಿಗಳು, ಕೊಡಗಿನ ಪ್ರೇಕ್ಷಣೀಯ ಸ್ಥಳಗಳು, ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳು, ಭಿತ್ತಿಪತ್ರಿಕೆಗಳೊಂದಿಗೆ ವೇದಿಕೆಯು ಅಲಂಕೃತಗೊಂಡಿತ್ತು.

ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ ವಕೀಲರು



ಮಡಿಕೇರಿ: ಚಿಕ್ಕಮಗಳೂರಿನ ಯುವ ವಕೀಲ ಪ್ರೀತಂ ಮೇಲೆ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ವಿನಾಕಾರಣ ಅಮಾನುಷವಾಗಿ ಮನಬಂದಂತೆ ಥಳಿಸಿ ಘಾಸಿ ಮಾಡಿರುವುದನ್ನು ಖಂಡಿಸಿ ಮಡಿಕೇರಿಯಲ್ಲಿ ವಕೀಲರು ಪ್ರತಿಭಟನೆ ನಡೆಸಿದರು.

ನ್ಯಾಯಾಲಯ ಕಲಾಪದಿಂದ ಸ್ವಯಂ ಪ್ರೇರಿತರಾಗಿ ದೂರ ಉಳಿದ ವಕೀಲರು ಆರೋಪಿ ಪೊಲೀಸರನ್ನು ತಕ್ಷಣವೇ ಬಂಧಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು. ಈ ಸಂದರ್ಭ ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಎಂ.ಎ.ನಿರಂಜನ್ ಮಾತನಾಡಿ, ಯುವ ವಕೀಲರ ಮೇಲೆ ಚಿಕ್ಕಮಗಳೂರು ಪೊಲೀಸ್ ಸಿಬ್ಬಂದಿ ನಡೆಸಿರುವ ಹಲ್ಲೆ ಖಂಡನೀಯ. ವಕೀಲರು ಸಮಾಜದ ಅಭಿರಕ್ಷಕರು, ಇವರನ್ನೇ ಪೊಲೀಸ್ ಇಲಾಖೆಯವರು ಹೀಗೆ ನಡೆಸಿಕೊಂಡರೆ, ಇನ್ನು ಸಾಮಾನ್ಯ ಜನರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ಪ್ರಶ್ನೆ ವಕೀಲ ಸಮುದಾಯದಲ್ಲಿ ಮೂಡಿದೆ.

ಪ್ರಕರಣ ದಾಖಲಿಸಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾದರೂ ಕೂಡ ಆರೋಪಿಗಳನ್ನು ಬಂಧನ ಮಾಡದೇ, ಇರುವುದು ಸರಿಯಲ್ಲ. ಪ್ರಕರಣದ ಗಂಭೀರತೆಯನ್ನು ಅರಿತ ರಾಜ್ಯ ಸರ್ಕಾರವು ಆರೋಪಿಗಳನ್ನು ಸೇವೆಯಿಂದ ಅಮಾನತು ಮಾಡಿದೆ. ಆದರೆ ಅರೋಪಿಗಳನ್ನು ಬಂಧಿಸಿ ಅವರ ವಿರುದ್ಧ ಸೂಕ್ತ ರೀತಿಯಲ್ಲಿ ಕಾನೂನು ಕ್ರಮ ಜರುಗಿಸಬೇಕು ಎಂದು ವಕೀಲರ ಸಂಘ ಆಗ್ರಹಿಸಿದೆ.

ವಿಕಲಚೇತನರ ಸ್ನೇಹಿ ವಾತಾವರಣ ನಿರ್ಮಿಸಿ

ಮಡಿಕೇರಿ ಡಿ.2– ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ 'ವಿಕಲಚೇತನರ ಸ್ನೇಹಿ' ವಾತಾವರಣ ನಿರ್ಮಾಣ ಮಾಡಬೇಕು ಎಂದು ಮಡಿಕೇರಿ ಶಾಸಕ ಡಾ. ಮಂತರ್ ಗೌಡ ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಡಿಕೇರಿ ತಾಲೂಕು ಪಂಚಾಯತ್, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ಕೊಡಗು ಶಾಖೆ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ತಾ.ಪಂ.ಕಚೇರಿ ಹತ್ತಿರದ ಸಮಾಜ ಕಲ್ಯಾಣ ಇಲಾಖೆ ಸಭಾಂಗಣದಲ್ಲಿ ಶನಿವಾರ 'ವಿಶೇಷಚೇತನರ ಪುನರ್ವಸತಿ ಸಂಪನ್ಮೂಲ ಕೇಂದ್ರ' ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಕಚೇರಿಗಳಿಗೆ ವಿಕಲಚೇತನರು ಆಗಮಿಸಿದ ಸಂದರ್ಭದಲ್ಲಿ ವೀಲ್ ಚೇರ್ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ಮತ್ತಿತರ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು. ಶಿಶುವಿನಲ್ಲಿಯೇ ಮಗುವಿಗೆ ಸರಿಯಾದ ಚಿಕಿತ್ಸೆ ನೀಡಿದರೆ ವಿಕಲತೆ ಹೋಗಲಾಡಿಸಬಹುದು. ಆ ನಿಟ್ಟಿನಲ್ಲಿ ಮಕ್ಕಳ ಚಟುವಟಿಕೆ ಗಮನಿಸಬೇಕು ಎಂದು ನುಡಿದರು.



ವಿಕಲಚೇತನರಿಗೆ ವೈಜ್ಞಾನಿಕವಾಗಿ ಪುನರ್ವಸತಿ ಕಲ್ಪಿಸಿದರೆ ಇತರರಂತೆ ಬದುಕು ನಡೆಸಬಹುದು. ಆ ನಿಟ್ಟಿನಲ್ಲಿ ವಿಕಲಚೇತನರು ಯಾವುದೇ ಕಾರಣಕ್ಕೂ ಎದೆಗುಂದದೆ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು ಎಂದು ಶಾಸಕರು ಸಲಹೆ ನೀಡಿದರು.

ಡಿ.ಗಣಪತಿ ಅಧ್ಯಕ್ಷರಾಗಿ ಆಯ್ಕೆ

ಗೋಣಿಕೊಪ್ಪ: ಪೊನ್ನಂಪೇಟೆ ನಾಡು ವ್ಯವಸಾಯೋತ್ಪನ್ನ ಮಾರಾಟ ಹಾಗೂ ಪರಿವರ್ತನಾ ಸಹಕಾರ ಸಂಘದ ಅಧ್ಯಕ್ಷರಾಗಿ ಮುದ್ದಿಯಡ ಡಿ.ಗಣಪತಿ ಹಾಗೂ ಉಪಾಧ್ಯಕ್ಷರಾಗಿ ಬೊಟ್ಟಂಗಡ ದಶಮಿ ದೇಚಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನಿರ್ದೇಶಕರಾದ ಚೋಡುಮಾಡ ಪಿ.ಶ್ಯಾಮ್, ಪದಾರ್ಥಿ ಎಸ್.ಮಂಜುನಾಥ, ಮೂಕಳೇರ ಪಿ.ಶಾರದ, ಬಿಲ್ಲವ ಎಸ್.ಚಂದ್ರಶೇಖರ್, ಮಾಚಂಗಡ ಬಿ.ಮೊಣ್ಣಪ್ಪ ನಿರನ್, ಮೂಕಳೇರ ಬಿ.ರಮೇಶ್, ಬೋಡಂಗಡ ಟಿ.ಜಗದೀಶ್, ಐನಂಡ ಕೆ.ಬೋಪಣ್ಣ, ಹಾಲುಮತದ ಎಂ.ಡಿಕ್ಕಿ, ಹೆಚ್.ಹೆಚ್ ತಮ್ಮಯ್ಯ ಇದ್ದರು.

ರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಕೊಡಗಿನ ವಿದ್ಯಾರ್ಥಿಗಳಿಗೆ ಪದಕ

ಮಡಿಕೇರಿ, ಡಿ.2– ಮಂಗಳೂರಿನ ಕುದ್ರೋಳಿಯ ಕೊರಗಪ್ಪ ಕಲ್ಯಾಣ ಮಂಟಪದಲ್ಲಿ ನಡೆದ ರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಕೊಡಗಿನ ಟ್ರೆಡಿಷನಲ್ ಶೊಟೊಕಾನ್ ಕರಾಟೆ ಅಸೋಸಿಯೇಷನ್‌ನ ವಿದ್ಯಾರ್ಥಿಗಳು ಚಿನ್ನ, ಬೆಳ್ಳಿ ಮತ್ತು ಕಂಚು ಗೆದ್ದುಕೊಂಡಿದ್ದಾರೆ.

ಐಗೂರಿನ ಸಿಂಚನ ಪ್ರಭಾಕರ್ ಹಾಗೂ ಕೆ.ಆರ್. ಅನರ್ಘ್ಯ ಪೂವಯ್ಯ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಕೆ.ಆರ್.ಆರಾಧ್ಯ ಪೂವಯ್ಯ ಹಾಗೂ ಹರ್ಷಲ್ ಬೆಳ್ಳಿ ಪದಕ, ನಂಗಾರು ನಿರುಷ್, ಚಿರಾಗ್, ಯಶ್ವಂತ್ ಪೂಜಾರಿ, ಬಿಂದು ಬೆಳ್ಯಪ್ಪ, ವಿವಾನ್ ಗೌಡ ಹಾಗೂ ಮನ್ವಿತ್ ಮೋಹನ್ ಕಂಚಿನ ಪದಕ ಗೆದ್ದಿದ್ದಾರೆ. ಪದಕ ವಿಜೇತ ವಿದ್ಯಾರ್ಥಿಗಳಿಗೆ ಸಂಸ್ಥೆಯ ತರಬೇತುದಾರ ಎನ್.ಸಿ. ಸುದರ್ಶನ್ ತರಬೇತಿ ನೀಡಿದ್ದಾರೆ.

ಪಿಜಿ ಪಾಳ್ಯ ವನ್ಯಜೀವಿ ವಲಯದಲ್ಲಿ ಸಫಾರಿ ಆರಂಭ

ಸಫಾರಿಗೆ ಶಾಸಕ ಎಂ.ಆರ್.ಮಂಜುನಾಥ್ ಚಾಲನೆ

ಹನೂರು, ಡಿ.2– ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಪಿ.ಜಿ.ಪಾಳ್ಯ ವನ್ಯಜೀವಿ ವಲಯದಲ್ಲಿ ಆರಂಭಿಸಲಾಗಿರುವ ಸಫಾರಿಗೆ ಲೊಕ್ಕನಹಳ್ಳಿ ಬಳಿ ಶನಿವಾರ ಶಾಸಕ ಎಂ.ಆರ್. ಮಂಜುನಾಥ್ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಶಾಸಕರು ಮಲೆ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಪಿ.ಜಿ.ಪಾಳ್ಯ ವನ್ಯಜೀವಿ ವಲಯದಲ್ಲಿ ಸಫಾರಿ ಆರಂಭವಾಗಿರುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲವಾಗಲಿದೆ.

ಕೊಳ್ಳೇಗಾಲದಿಂದ ಸಫಾರಿ ಪ್ರದೇಶಕ್ಕೆ 24 ಕಿಮೀ, ಮೈಸೂರಿನಿಂದ ಪಿಜಿ ಪಾಳ್ಯಕ್ಕೆ 90 ಕಿಮೀ ಇರುವುದರಿಂದ ಪ್ರವಾಸಿಗರು ಸಫಾರಿಗೆ ಬರಲು ಅನುಕೂಲವಾಗಲಿದೆ ಎಂದರು.

ಹನೂರು ಭಾಗದಲ್ಲಿ ಗುಂಡಾಲ್ ಜಲಾಶಯ, ಇನ್ನಿತರ ಪ್ರವಾಸಿ ತಾಣಗಳನ್ನು ಪ್ರವಾಸಿಗರು ವೀಕ್ಷಿಸಬಹುದಾಗಿದೆ. ಈ ಭಾಗದ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವುದರಿಂದ ಸ್ಥಳೀಯರಿಗೆ ಉದ್ಯೋಗ ಅವಕಾಶಗಳು ಲಭಿಸಲಿವೆ ಹೀಗಾಗಿ ಸಫಾರಿ ಆರಂಭವಾಗಿರುವುದು ಉತ್ತಮ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು.



ಕಾಡು ಉಳಿಯಬೇಕು. ಪರಿಸರ ಸ್ನೇಹಿ ಪ್ರವಾಸೋದ್ಯಮವು ಅಭಿವೃದ್ಧಿಯಾಗಬೇಕು. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಆರಂಭಿಸಿರುವ ಸಫಾರಿ ಯಶಸ್ವಿಯಾಗಿ ಮುಂದುವರೆಯಲೆಂದು ಹಾರೈಸಿದರು.

ಅರಣ್ಯದಲ್ಲಿ ಪ್ರಾಣಿಗಳಿಗೆ ಯಾವುದೇ ತೊಂದರೆ ಉಂಟು ಮಾಡದೆ ವನ ಸಂಪತ್ತು ಮತ್ತು ಪ್ರಾಣಿಗಳನ್ನು ವೀಕ್ಷಿಸಲು ಒಳ್ಳೆಯ ಸದಾವಕಾಶ ಜನತೆಗೆ ಸಿಕ್ಕಿದೆ. ಹೀಗಾಗಿ ಸಾರ್ವಜನಿಕರು ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ತಿಳಿಸಿದರು.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸಂತೋಷ್ ಕುಮಾರ್ ಮಾತನಾಡಿ, ಮಲೆ ಮಹದೇಶ್ವರ ವನ್ಯಜೀವಿ ವಿಭಾಗವು ಕೊಳ್ಳೇಗಾಲ ಮತ್ತು ಹನೂರು ತಾಲೂಕಿನಲ್ಲಿ 949.469 ಚದರ ಕಿ.ಮೀಗಳಷ್ಟು ಅರಣ್ಯ ಪ್ರದೇಶವನ್ನು ಒಳಗೊಂಡಿದೆ. ಆನೆ, ಹುಲಿ, ಚಿರತೆ, ಜಿಂಕೆ, ಕಡವೆ, ಕಾಡೆಮ್ಮೆ, ಕರಡಿ, ತೆರಕರಡಿ, ತೋಳ, ನರಿ ಮುಂತಾದ ಪ್ರಾಣಿಗಳು ಸಫಾರಿ ಕೈಗೊಳ್ಳುವ ಪ್ರದೇಶದಲ್ಲಿ ವಾಸಿಸುತ್ತಿವೆ. ಪಿ.ಜಿ.ಪಾಳ್ಯ ವನ್ಯಜೀವಿ ವಲಯದ ಲೊಕ್ಕನಹಳ್ಳಿ ಕಳ್ಳಬೇಟೆ ತಡೆ ಶಿಬಿರದ ಮಾರ್ಗದ ಒಟ್ಟು 18 ಕಿಮೀ ವ್ಯಾಪ್ತಿಯಲ್ಲಿ ಸಫಾರಿ ಕೈಗೊಳ್ಳಲಾಗುತ್ತದೆ ಎಂದರು.

4ನೇ ಸಫಾರಿ ಆರಂಭ: ಇದರೊಂದಿಗೆ ಜಿಲ್ಲೆಯಲ್ಲಿ ನಾಲ್ಕನೇ ಸಫಾರಿ ಕೇಂದ್ರ ಆರಂಭವಾಗಿದ್ದು, ಈಗಾಗಲೇ ಬಂಡೀಪುರ, ಬಿಆರ್‌ಟಿಯ ಕೆ.ಗುಡಿ ಜೊತೆಗೆ ಹನೂರು ತಾಲೂಕಿನ ಕಾವೇರಿ ವನ್ಯಧಾಮದ ಗೋಪಿನಾಥಂನಲ್ಲಿ ಪ್ರಾಯೋಗಿಕವಾಗಿ ಸಫಾರಿ ಆರಂಭಿಸಲಾಗಿದ್ದು, ಇದರ ಬೆನ್ನಲ್ಲೇ ಮಲೆ ಮಹದೇಶ್ವರ ವನ್ಯಧಾಮದಲ್ಲೂ ಸಫಾರಿ ಆರಂಭಿಸಲಾಗಿದೆ. ಬೆಳಗ್ಗೆ 6 ರಿಂದ 9ರವರೆಗೆ, ಮಧ್ಯಾಹ್ನ 3 ರಿಂದ ಸಂಜೆ 6 ರವರೆಗೆ ಸಫಾರಿಗೆ ಸಮಯ ನಿಗದಿಪಡಿಸಲಾಗಿದೆ. ವಯಸ್ಕರಿಗೆ 400 ರೂ., ಮಕ್ಕಳಿಗೆ 200 ರೂ., ಸಫಾರಿ ಶುಲ್ಕ ಇದೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ : 9481995509 ಮತ್ತು 9008581495, ಇ–ಮೇಲ್ rfopgpalya@gmail.com ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಈ ವೇಳೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಶಿಧರ್, ವಲಯ ಅರಣ್ಯ ಅಧಿಕಾರಿ ಬೈಲೂರು ಪ್ರಮೋದ್, ಇನ್ನಿತರರಿದ್ದರು.

ಮಹದೇಶ್ವರಬೆಟ್ಟ ಪ್ರಾಧಿಕಾರದ ನೌಕರ ಅಮಾನತು

ಹನೂರು: ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ಲಾಡು ಪ್ರಸಾದ ತಯಾರಿಕಾ ಘಟಕದ ಮೇಲುಸ್ತುವಾರಿ ನೌಕರ ಪಿ.ಮಹದೇವಸ್ವಾಮಿ ಅವರನ್ನು, ಅಮಾನತುಗೊಳಿಸಿ ಮಲೆ ಮಹದೇಶ್ವರ ಬೆಟ್ಟದ ಪ್ರಾಧಿಕಾರ ಆದೇಶ ಹೊರಡಿಸಿದೆ.

ಶುಕ್ರವಾರ ಮಹದೇಶ್ವರ ಬೆಟ್ಟದ ಲಾಡು ತಯಾರಿಕಾ ಘಟಕದಲ್ಲಿ ಸಿಲಿಂಡರ್‌ನಲ್ಲಿ ಗ್ಯಾಸ್ ಸೋರಿಕೆಯಾಗಿ ಬೆಂಕಿ ಅವಘಡ ಸಂಭವಿಸಿ ಲಕ್ಷಾಂತರ ರೂ. ಮೌಲ್ಯದ 36,220 ಲಾಡುಗಳು ಹಾಗೂ ಲಾಡು ತಯಾರಿಸಲು ತಂದಿದ್ದ 28 ಟನ್ ಎಣ್ಣೆ, 50 ಕೆಜಿ ಸಕ್ಕರೆ, ಕಡ್ಲೆಹಿಟ್ಟು, 40 ಕೆಜಿ ತುಪ್ಪ, ಪಾತ್ರೆಗಳು ಮತ್ತು ಲಾಡು ವಿಭಾಗದ ಮೇಲ್ಭಾಗದ ಶೀಟುಗಳು ಹಾಗೂ ನೀರಿನ ಟ್ಯಾಂಕ್ ಇನ್ನಿತರ ಸಾಮಾನುಗಳು ಬೆಂಕಿಗೆ ಆಹುತಿಯಾಗಿದ್ದವು. ಇದರಿಂದ ಸುಮಾರು 10.20 ಲಕ್ಷ ರೂ. ನಷ್ಟ ಸಂಭವಿಸದೆ ಎಂದು ಅಂದಾಜಿಸಲಾಗಿತ್ತು.

ಈ ಘಟನೆಗೆ ಲಾಡು ಪ್ರಸಾದ ತಯಾರಿಕಾ ಘಟಕದ ಮೇಲುಸ್ತುವಾರಿ ವಹಿಸಿದ್ದ ನೌಕರ ಪಿ.ಮಹದೇವಸ್ವಾಮಿ ಅವರ ಕರ್ತವ್ಯ ನಿರ್ವಹಣೆಯಲ್ಲಿ ಉದಾಸೀನತೆ, ಬೇಜವಾಬ್ದಾರಿತನ ಮತ್ತು ನಿರ್ಲಕ್ಷ್ಯತೆ ಕಂಡು ಬಂದ ಹಿನ್ನಲೆಯಲ್ಲಿ ಮಹದೇವಸ್ವಾಮಿ ಅವರನ್ನು ಅಮಾನತುಗೊಳಿಸಿ ಪ್ರಾಧಿಕಾರದ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ದೇವತಾ ಪ್ರತಿಷ್ಠಾಪನೆ, ಕಳಸರೋಹಣ ಸಮಾರಂಭ

ಬೇಗೂರು, ಡಿ.2– ಇಲ್ಲಿಗೆ ಸಮೀಪದ ಚಿಕ್ಕಾಟಿ ಗ್ರಾಮದ ಶ್ರೀಬಸವಲಿಂಗ ಮಹದೇಶ್ವರಸ್ವಾಮಿ ದೇವಸ್ಥಾನದ ದೇವತಾ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ಸಮಾರಂಭ ಡಿ.3 ಮತ್ತು 4 ರಂದು ವಿಜೃಂಭಣೆಯಿಂದ ನಡೆಯಲಿದೆ.

ಡಿ.3ರಂದು ಗಣಪತಿ ಪೂಜೆ, ಹೋಮ ಹಾಗೂ ಹವನಾದಿಗಳು ನಡೆಯಲಿದ್ದು, ಡಿ.4 ರಂದು ಬೆಳಗ್ಗೆ 4.30ಕ್ಕೆ ಬ್ರಾಹ್ಮಿ ಮಹೂರ್ತದಲ್ಲಿ ದೇವತಾ ಪ್ರತಿಷ್ಠಾಪನೆ, ರುದ್ರಾಭಿಷೇಕ, ಪೂರ್ಣಾಹುತಿ, ಕಳಸಾರೋಹಣ ನಡೆದು ಬೆಳಗ್ಗೆ 9 ಗಂಟೆಗೆ ಮಹಾಮಂಗಳಾರತಿ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ.

ಕಾರ್ಯಕ್ರಮವನ್ನು ತೊಂಡವಾಡಿ ಗುರುಮಠದ ಶ್ರೀಮಹೇಶ್ವರಾಧ್ಯ ಸ್ವಾಮೀಜಿ, ಹೆಗ್ಗಡಹಳ್ಳಿ ವಿಶ್ವರಾಧ್ಯ ಸ್ವಾಮೀಜಿ, ಹುಲ್ಲಹಳ್ಳಿ ಮಠದ ಶ್ರೀಮಲ್ಲಿಕಾರ್ಜುನಾರಾಧ್ಯ ಸ್ವಾಮೀಜಿ ದೇವತಾ ಕಾರ್ಯ ನಡೆಸಲಿದ್ದು, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಜಾಗದ ದಾನಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ಮುನಿರಾಜು ಸೇರಿದಂತೆ ಜನಪ್ರತಿನಿಧಿಗಳು ಮತ್ತು ವಿವಿಧ ಕೋಮಿನ ಯಜಮಾನರು ಮತ್ತು ಮುಖಂಡರು ಭಾಗವಹಿಸಲಿದ್ದಾರೆ.

ಇಂದು ವಿಶ್ವ ವಿಕಲಚೇತನರ ದಿನಾಚರಣೆ

ಚಾಮರಾಜನಗರ, ಡಿ.2– ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿವಿಧ ಇಲಾಖೆಗಳು ಹಾಗೂ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಮಿತಿ ಮತ್ತು ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆಯನ್ನು ಡಿ.3ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ.ಶ್ರೀನಿವಾಸ ಪ್ರಸಾದ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ, ಹೆಚ್.ಎಂ.ಗಣೇಶ್ ಪ್ರಸಾದ್, ಡಾ.ಡಿ.ತಿಮ್ಮಯ್ಯ ಮರಿತಿಬ್ಬೇಗೌಡ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಂದಿನಿ ಮಳಿಗೆಯಲ್ಲಿ ಲಕ್ಷಾಂತರ ರೂ. ಕಳವು

ಚಾಮರಾಜನಗರ, ಡಿ.2– ನಗರದ ಸಂತೇಮರಳ್ಳಿ ವೃತ್ತದ ಬಳಿಯ ನಂದಿನಿ ಹಾಲಿನ ವಾಕ್ ಇನ್ ಕೋಲ್ಡ್ ಸ್ಟೋರೇಜ್‌ನಲ್ಲಿ ಶುಕ್ರವಾರ ತಡರಾತ್ರಿ ದುಷ್ಕರ್ಮಿಗಳು 6.5 ಲಕ್ಷ ರೂ. ದೋಚಿ ಪರಾರಿಯಾಗಿದ್ದಾರೆ.



ತಡರಾತ್ರಿ ಸುಮಾರು 1.40ರ ವೇಳೆ ಇಬ್ಬರು ದುಷ್ಕರ್ಮಿಗಳು ನಂದಿನಿ ಕೇಂದ್ರದ ಬೀಗ ಒಡೆದು ಷಟರ್ ಅನ್ನು ಸ್ವಲ್ಪ ಮೇಲೆತ್ತಿದ್ದಾರೆ. ಈ ವೇಳೆ ಓರ್ವ ಒಳ ನುಗ್ಗಿದ್ದು, ಮತ್ತೋರ್ವ ಹಾಲಿನ ಕೇಂದ್ರದ ಹೊರ ನಿಂತು ನೋಡಿಕೊಳ್ಳುತ್ತಿದ್ದಾನೆ. ಒಳಗ್ಗೆ ನುಗ್ಗಿದವನು ಡ್ರಾಯರ್‌ನಲ್ಲಿ ಇಟ್ಟಿದ್ದ ನೋಟಿನ ಕಂತೆಗಳನ್ನು ಅಲ್ಲೇ ಇದ್ದ ಪ್ಲಾಸ್ಟಿಕ್ ಕವರ್‌ಗೆ ಹಾಕಿಕೊಂಡಿದ್ದಾನೆ. ನಂತರ ಅಲ್ಲಿಂದ ಇಬ್ಬರೂ ಪರಾರಿಯಾಗಿದ್ದಾರೆ. ಈ ದೃಶ್ಯಗಳು ಸಿಸಿ ಟಿವಿಯಲ್ಲಿ ಸೆರೆಯಾಗಿವೆ. ಶನಿವಾರ ಬೆಳಗ್ಗೆ ಹಾಲಿನ ಕೇಂದ್ರಕ್ಕೆ ಬಂದು ನೋಡಿದಾಗ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಕೂಡಲೇ ಪಟ್ಟಣ ಪೊಲೀಸ್ ಠಾಣೆಗೆ ವಿಷಯ ತಿಳಿಸಿದ್ದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲಿಸಿದ್ದಾರೆ. ಗುರುವಾರ ಹಾಗೂ ಶುಕ್ರವಾರ ವ್ಯಾಪಾರ ನಡೆಸಿದ 6.50 ಲಕ್ಷ ರೂ. ನಗದು ಕಳ್ಳತನವಾಗಿದೆ ಎಂದು ಸ್ಟೋರೇಜ್ ಮಾಲೀಕ ಎನ್.ಆರ್.ಪುರುಷೋತ್ತಮ್ ದೂರಿನಲ್ಲಿ ತಿಳಿಸಿದ್ದಾರೆ.

ಇದಕ್ಕೂ ಮೊದಲು ಸಂಪಿಗೆ ರಸ್ತೆಯ ಒಂದೆರಡು ಅಂಗಡಿ ಹಾಗೂ ಸಂತೆಮರಹಳ್ಳಿ ವೃತ್ತದಲ್ಲಿರುವ ನ್ಯಾಯಬೆಲೆ ಅಂಗಡಿ ಗೋಡೌನ್‌ನಲ್ಲೂ ಕಳ್ಳತನಕ್ಕೆ ಯತ್ನಿಸಲಾಗಿದೆ. ಅಲ್ಲಿ ಅವರಿಗೆ ಹಣ ದೊರೆತಿಲ್ಲ. ಬಳಿಕ ನಂದಿನಿ ಕೋಲ್ಡ್ ಸ್ಟೋರೇಜ್‌ನಲ್ಲಿ ಕಳ್ಳತನ ನಡೆಸಲಾಗಿದೆ.

ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ

ವಿದ್ಯಾರ್ಥಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ

ಚಾಮರಾಜನಗರ, ಡಿ.2– ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ ತಮ್ಮಲ್ಲಿರುವ ಪ್ರತಿಭೆ ಹೊರ ಹಾಕಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವತಿಯಿಂದ ಏರ್ಪಡಿಸಿದ್ದ ಸಾಂಸ್ಕೃತಿಕ, ಕ್ರೀಡಾ, ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೆಡ್‌ಕ್ರಾಸ್ ಚಟುವಟಿಕೆಗಳ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಬರಿ ಪುಸ್ತಕಗಳನ್ನು ಓದುವುದಲ್ಲ. ಅದರೊಂದಿಗೆ ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವುದರಿಂದ ಮಾನಸಿಕ ಧೈರ್ಯ, ಸ್ಥೈರ್ಯ ಹೆಚ್ಚಾಗಲಿದೆ. ಇದರಿಂದ ವಿದ್ಯಾರ್ಥಿಗಳ ನಡುವೆ ಸ್ನೇಹ ಬಾಂಧವ್ಯ ವೃದ್ಧಿಸಲು ಸಹಕಾರಿಯಾಗಲಿದೆ ಎಂದರು.

ಪಟ್ಟಣದಲ್ಲಿ 2013ರಲ್ಲಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆರಂಭವಾಯಿತು. ಮೊದಲು 33 ವಿದ್ಯಾರ್ಥಿಗಳಿದ್ದ ಕಾಲೇಜು ಇಂದು 500 ವಿದ್ಯಾರ್ಥಿಗಳನ್ನು ಹೊಂದಿದೆ.



ಉತ್ತಮ ಶಿಕ್ಷಣ ನೀಡಿ ನ್ಯಾಕ್ 'ಬಿ' ಶ್ರೇಣಿ ಮಾನ್ಯತೆ ಪಡೆದಿದೆ. ಇದು ಆರೋಗ್ಯಕರ ಬೆಳವಣಿಗೆ. ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲವಾಗಿದ್ದು, ಮೂಲ ಸೌಲಭ್ಯಗಳೊಂದಿಗೆ ಕಟ್ಟಡ ನಿರ್ಮಾಣಕ್ಕೆ ಅಗತ್ಯ ಅನುದಾನ ನೀಡಲಾಗುವುದು ಎಂದರು.

ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ವಿಜಯಕುಮಾರಿ ಎಸ್.ಕರಿಕಲ್ ಮಾತನಾಡಿ, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ನಾಣ್ನುಡಿಯಂತೆ ಮಹಿಳೆಯರಲ್ಲಿ ಜ್ಞಾನದ ದೀಪ ಹಚ್ಚುವ ಸಾಮರ್ಥ್ಯವಿದೆ. ಮಹಿಳೆಯರು ಇಂದು ಸಾಮಾಜಿಕ, ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿದ್ದಾರೆ. ಅವರಲ್ಲಿರುವ ಆತ್ಮವಿಶ್ವಾಸವೇ ಅದಕ್ಕೆ ಸಾಕ್ಷಿ ಎಂದರು.

ವಿದ್ಯಾರ್ಥಿನಿಯರು ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದರಿಂದ ಅವರ ದೈಹಿಕ, ಮಾನಸಿಕ ಹಾಗೂ ಬೌದ್ಧಿಕ ಸಾಮರ್ಥ್ಯ ಹೆಚ್ಚಾಗಲಿದೆ. ಮನಸ್ಸಿನ ಏಕಾಗ್ರತೆ ಹೆಚ್ಚಾಗಲಿದೆ. ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಾಸಾಂಗಕ್ಕೆ ಪೂರಕ ವಾತಾವರಣ ಕಲ್ಪಿಸಲಿವೆ ಪ್ರಾಪಂಚಿಕ ಜ್ಞಾನದ ಅರಿವಾಗಲಿದೆ. ಮಹಿಳೆಯರ ಅಭಿವೃದ್ಧಿ ದೇಶದ ಪ್ರಗತಿಗೆ ನೆರವಾಗಲಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಂ.ಆರ್.ಸುಮತಿ ಕಾಲೇಜು ನಡೆದು ಬಂದ ಹಾದಿ ಹಾಗೂ ನ್ಯಾಕ್ 'ಬಿ' ಶ್ರೇಣಿ ಮಾನ್ಯತೆ ಪಡೆದಿರುವ ಬಗ್ಗೆ ಮಾತನಾಡಿದರು.

ಸಮಾರಂಭದಲ್ಲಿ ರಾಜ್ಯಮಟ್ಟದ ಡಿಸ್ಕಸ್ ಥ್ರೋ ಸ್ಪರ್ಧೆಯಲ್ಲಿ ಭಾಗವಹಿಸಿ ಚಿನ್ನದ ಪದಕ ಗೆದ್ದಿರುವ ಕಾಲೇಜಿನ ವಿದ್ಯಾರ್ಥಿನಿ ರೋಷಿಣಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಐಕ್ಯೂಎಸಿ ಸಮಿತಿ ಸಂಚಾಲಕ ಪಿ.ಬಾಲಸುಬ್ರಹ್ಮಣ್ಯ, ಸಾಂಸ್ಕೃತಿಕ ಸಮಿತಿ ಡಾ.ಎಂ.ಸಿ.ಪ್ರಭಾವತಿ, ಕ್ರೀಡಾ ಸಮಿತಿ ಡಾ.ಶಾಂತರಾಜು, ಸ್ಕೌಟ್ಸ್ ಮತ್ತು ಗೈಡ್ಸ್ ಸಮಿತಿ ಡಾ. ಎಚ್.ಎಸ್.ರುಕ್ಮಿಣಿ, ರಾಷ್ಟ್ರೀಯ ಸೇವಾ ಯೋಜನೆ ಎಸ್.ಆರ್. ದೀಪ, ರೆಡ್‌ಕ್ರಾಸ್ ಸಮಿತಿ ಸಂಚಾಲಕ ಸಿದ್ದರಾಜು ಇತರರಿದ್ದರು.

ಕಾಂತಲಕ್ಷ್ಮಿ ನಿಧನ

ಚಾಮರಾಜನಗರ, ಡಿ.2– ನಗರದ ಬೇಕ್ ಪಾಯಿಂಟ್ ಮಾಲೀಕ ಬಂದಿಗೌಡನಹಳ್ಳಿ ಶಿವಕುಮಾರ್ (ಹೈಟೆಕ್ ಶಿವು) ಅವರ ಪತ್ನಿ, ಕಾಂತಲಕ್ಷ್ಮಿ (45) ಶನಿವಾರ ನಿಧನರಾದರು. ಮೃತರು ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬಂದಿಗೌಡನಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.



ಒಂದನೇ ಪುಟದಿಂದ

'ದುಬಾರಿ ದಸರಾ'!

1,51,22,000 ರೂ. ಸೇರಿ ಮೈಸೂರು ದಸರಾ ಮಹೋತ್ಸವಕ್ಕೆ 27,05,22,049 ರೂ. ವೆಚ್ಚವಾಗಿದೆ. ಅರಮನೆ ಆವರಣದಲ್ಲಿ ನಡೆದ ದಸರಾ ಕಾರ್ಯಕ್ರಮಗಳಿಗೆ ಅರಮನೆ ಮಂಡಳಿಯಿಂದ 5 ಕೋಟಿ ಭರಿಸಲಾಗಿದ್ದು, ವೆಚ್ಚದ ವಿವರವನ್ನು ಮಂಡಳಿ ವತಿಯಿಂದ ಪ್ರತ್ಯೇಕವಾಗಿ ನೀಡಲಾಗುವುದು ಎಂದು ವಿವರಣೆ ನೀಡಿದರು.

ಯುವ ದಸರಾಗೆ ಭಾರೀ ಮೊತ್ತ: ಈ ಬಾರಿ ಯುವ ಸಂಭ್ರಮಕ್ಕೆ 2 ಕೋಟಿ ರೂ. ಹಾಗೂ ಯುವ ದಸರಾಗೆ 5.88 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಇದು ಕಳೆದ ವರ್ಷಕ್ಕಿಂತ ಹೆಚ್ಚಿದೆ. ಏಳೆಂಟು ದಿನಗಳ ಕಾಲ ನಡೆಯುತ್ತಿದ್ದ ಯುವ ದಸರಾವನ್ನು ಈ ಬಾರಿ ನಾಲ್ಕು ದಿನಗಳಿಗೆ ಕಡಿತಗೊಳಿಸಲಾಗಿತ್ತು. ಅಲ್ಲದೆ ವೇದಿಕೆಗೆ ಸೀಮಿತವಾಗಿ ಮೇಲ್ಛಾವಣಿ ಅಳವಡಿಸಲಾಗಿತ್ತು. ಆದರೂ ಈ ಬಾರಿ ಕಳೆದ ವರ್ಷಕ್ಕಿಂತ ಹೆಚ್ಚು ಖರ್ಚಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ, ಆರೇಳು ದಿನಗಳಲ್ಲಿ ಭಾಗವಹಿಸುತ್ತಿದ್ದ ಕಲಾವಿದರು ಈ ಬಾರಿ ನಾಲ್ಕೇ ದಿನಗಳಲ್ಲಿ ಆಗಮಿಸಿದ್ದರು. ಪ್ರತಿದಿನ ಮೂರಕ್ಕಿಂತ ಹೆಚ್ಚು ಪ್ರಸಿದ್ಧ ಕಲಾವಿದರು ಬಂದಿದ್ದರು. ಕನಿಷ್ಟ ಮೂರು ಹೈವೋಲ್ಟೇಜ್ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು ಎಂದು ಸ್ಪಷ್ಟನೆ ನೀಡಿದರು.

ಲೋಪವಾಗಿದ್ದರೆ ಕ್ರಮ: ಈ ಬಾರಿ ಅದ್ಧೂರಿ ದಸರಾ ಆಚರಿಸಲು ಸರ್ಕಾರ ನಿರ್ಧರಿಸಿದ್ದ ಹಿನ್ನೆಲೆಯಲ್ಲಿ ಸುಮಾರು 40 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಿದ್ಧಪಡಿಸಲಾಗಿತ್ತು. ಆದರೆ ಬರದ ಹಿನ್ನೆಲೆಯಲ್ಲಿ ಸರಳವೂ ಅಲ್ಲದ, ಅದ್ಧೂರಿಯೂ ಅಲ್ಲದ ಸಾಂಪ್ರದಾಕವಾಗಿ ದಸರಾ ನಡೆಸಲು ಉನ್ನತ ಮಟ್ಟದ ಸಮಿತಿ ತೀರ್ಮಾನಿಸಿದ್ದರಿಂದ ಹೆಚ್ಚು ಅನುದಾನ ಕೇಳದೆ ಲಭ್ಯತೆಗೆ ಅನುಗುಣವಾಗಿ ಸಂಪ್ರದಾಯ ಬದ್ಧವಾಗಿ ದಸರಾವನ್ನು ಯಶಸ್ವಿಗೊಳಿಸಲಾಗಿದೆ. ಹಿಂದೆಂದೂ ಇಲ್ಲದಷ್ಟು ಜನ ಈ ಬಾರಿ ದಸರಾ ವೀಕ್ಷಿಸಿದ್ದಾರೆ. ಲೆಕ್ಕಾಧಿಕಾರಿಗಳ ಸಮಿತಿ ಮೂಲಕ ಪರಿಶೀಲನೆ ನಡೆಸಿ, ದಸರಾ ವೆಚ್ಚದ ವಿವರ ಸಿದ್ಧಪಡಿಸಲಾಗಿದ್ದು, ಇದರಲ್ಲಿ ಏನಾದರೂ ಲೋಪ ಕಂಡು ಬಂದರೆ ಖಂಡಿತವಾಗಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ವಿಧಾನಮಂಡಲ ಚಳಿಗಾಲ ಅಧಿವೇಶನ

ಯಾವ ಪಕ್ಷ, ಯಾವ ವಿಷಯವನ್ನು ಕೈಗೆತ್ತಿಕೊಂಡು ಹೋರಾಟ ಮಾಡಬೇಕು ಮತ್ತು ಅದನ್ನು ಯಾವ ಸಮಯದಲ್ಲಿ ಮಂಡಿಸಬೇಕು ಎಂಬುದನ್ನು ಕುಮಾರಸ್ವಾಮಿ ಮತ್ತು ಅಶೋಕ್ ಅವರುಗಳು ತೀರ್ಮಾನಿಸಲಿದ್ದಾರೆ. ಕಾಂಗ್ರೆಸ್ ಸರಕಾರ ಕೇವಲ ಆರು ತಿಂಗಳಲ್ಲಿ 60 ತಪ್ಪುಗಳನ್ನು ಮಾಡಿದ್ದು ಅಧಿವೇಶನದಲ್ಲಿ ಈ ಸಂಬಂಧ ಕಿವಿ ಹಿಂಡಲು ತೀರ್ಮಾನಿಸಿವೆ. ವರ್ಗಾವಣೆ ದಂಧೆಯ ಅಂಗಡಿಗಳನ್ನು ತೆರೆದಿದ್ದಾರೆ, ಆಡಳಿತವಂತೂ ಭ್ರಷ್ಟಾಚಾರದ ಕೂಪವಾಗಿದೆ. ಬೆಂಗಳೂರಿನಲ್ಲಿ ದಾಳಿ ನಡೆಸಿದಾಗ ಸುಮಾರು 100 ಕೋಟಿ ರೂ.ಗೂ ಹೆಚ್ಚು ಕಳ್ಳಹಣ ಸಿಕ್ಕಿದ್ದು, ಇದು ದಂಧೆಯ ಸ್ಪಷ್ಟರೂಪವಾಗಿದೆ ಎಂದಿವೆ. ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕದ ಜನತೆಗೆ ಮೋಸ ಮಾಡಿದ್ದಾರೆ. ತಮಿಳುನಾಡಿನಲ್ಲಿ ಮಿತ್ರ ಸ್ಟಾಲಿನ್ ಇದ್ದಾರೆಂದು, ಅವರಿಗೆ ಸಹಾಯ ಮಾಡಲು ಹಳೆ ಮೈಸೂರಿನ ಭಾಗದ ಜನರಿಗೆ ಮೋಸ ಮಾಡಲಾಗಿದೆ ಎಂಬ ವಿಚಾರವೂ ಪ್ರಸ್ತಾಪವಾಗಲಿದೆ. ರಾಜ್ಯದ 236 ತಾಲೂಕುಗಳ ಪೈಕಿ 223 ತಾಲೂಕುಗಳಲ್ಲಿ ತೀವ್ರ ಬರಗಾಲದ ಛಾಯೆ ಇದೆ. ಜೂನ್‌ನಲ್ಲಿ ಕಡಿಮೆ ಪ್ರಮಾಣದಲ್ಲಿ ಮಳೆ, ಜುಲೈನಲ್ಲಿ ಮಳೆ ಇರಲಿಲ್ಲ. ಆಗಸ್ಟ್‌ನಲ್ಲಿ ಶೇ.73 ಮಳೆ ಕೊರತೆ ಆಗಿದೆ. ಸರಕಾರ, ಸಚಿವರು ಯಾವುದೇ ಕ್ರಮ ಕೈಗೊಳ್ಳದೆ ವಿಧಾನಸೌಧದಲ್ಲಿ ಕುಳಿತು ಮೊಸಳೆ ಕಣ್ಣೀರು ಸುರಿಸುತ್ತಿರುವುದನ್ನು ಪ್ರತಿಭಟಿಸಿ ಜಂಟಿ ಹೋರಾಟ ನಡೆಸಲು ತೀರ್ಮಾನಿಸಿದ್ದಾರೆ. ಬರ ಪರಿಹಾರಕ್ಕೆ ಒಂದು ನಯಾಪೈಸೆ ಬಿಡುಗಡೆ ಮಾಡಿಲ್ಲ, ಮಾತೆತ್ತಿದರೆ ಕೇಂದ್ರ ಸರಕಾರ ಎನ್ನುತ್ತಿದ್ದಾರೆ. ಬರ ಸಂಬಂಧ ನಿಲುವಳಿ ಸೂಚನೆ ಮಂಡಿಸಲು ತೀರ್ಮಾನಿಸಿವೆ. ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಹದಗೆಟ್ಟಿದೆ. ಈ ಮೊದಲು ಶಿವಮೊಗ್ಗ, ಕೋಲಾರದ ಸಮಸ್ಯೆ ಇತ್ತು. ಬೆಂಗಳೂರಿನಲ್ಲಿ ನಿನ್ನೆ ಶಾಲಾ ಮಕ್ಕಳು ಭಯಭೀತರಾಗಿ, ಪೋಷಕರೂ ಓಡಿ ಹೋಗುವಂತಾಗಿತ್ತು. ಈ ಸರಕಾರ ಬಂದ ಬಳಿಕ ಕಾನೂನು–ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆಯೂ ಪ್ರಸ್ತಾಪ ಮಾಡಲಿದ್ದಾರೆ.

ಶಿಕ್ಷಣ ವ್ಯವಸ್ಥೆಯಡಿ ರಾಜಕೀಯ, ಎನ್‌ಇಪಿಯಲ್ಲಿ ತಪ್ಪು ಕಂಡು ಹಿಡಿಯುವುದನ್ನು ಪ್ರಶ್ನೆ ಮಾಡಲಿದ್ದಾರೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯ ಸೇರಿದಂತೆ ವಿವಿಧ ಸಮುದಾಯಗಳ ವಿರೋಧದ ನಡುವೆ ಕಾಂತರಾಜ್ ವರದಿ ಅನುಷ್ಠಾನಕ್ಕೆ ಮುಂದಾಗಿರುವುದರ ವಿರುದ್ಧ ಸದನದಲ್ಲಿ ಚರ್ಚೆ ನಡೆಸಲು ನಿರ್ಧರಿಸಿವೆ. ನೀರಾವರಿ ಯೋಜನೆಗಳ ವಿಚಾರ, ಅನುಷ್ಠಾನದಲ್ಲಿ ವೈಫಲ್ಯ, ಬಜೆಟ್‌ನಲ್ಲಿ ನೀರಾವರಿಗೆ ಮೋಸ ಮಾಡಿದ್ದನ್ನು ತೆಗೆದುಕೊಳ್ಳಲಿವೆ. ಪ್ರಮುಖವಾಗಿ ಉತ್ತರ ಕರ್ನಾಟಕ ಅಭಿವೃದ್ಧಿ ಆಗದಿರುವುದು, ನೀರಾವರಿ ಯೋಜನೆಗಳು, ಗ್ಯಾರಂಟಿ ಯೋಜನೆಗಳ ವೈಫಲ್ಯ, ಒಂದು ತಿಂಗಳು ಮಹಿಳೆಯರಿಗೆ ಹಣ ಕೊಟ್ಟು 3 ತಿಂಗಳು ನಾಮ ಹಾಕಿದ್ದು, ನಿರುದ್ಯೋಗಿ ಯುವಜನರಿಗೆ ಭತ್ಯೆಯನ್ನು 6 ತಿಂಗಳಿಂದ ಕೊಡದೆ ನಾಮ ಹಾಕಿದ್ದನ್ನೂ ಚರ್ಚಿಸಲಿದ್ದಾರೆ.

ಡಿ.ಕೆ.ಶಿವಕುಮಾರ್ ವಿರುದ್ಧದ ಮೊಕದ್ದಮೆಯಲ್ಲಿ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ವಾಪಸ್ ಪಡೆದ ಸಂವಿಧಾನ ವಿರೋಧಿ ಕ್ರಮದ ಕುರಿತು ಪ್ರಶ್ನೆ ಮಾಡಲಿದ್ದಾರೆ. ವಿವಿಧ ಅಸ್ತ್ರಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಉಭಯ ಸದನಗಳಲ್ಲಿ ಹೋರಾಟ ನಡೆಸಲು ಉಭಯ ಪಕ್ಷಗಳು ತೀರ್ಮಾನಿಸಿವೆ.

ಮಾಜಿ ನರ್ಸ್ ಮಂಜುಳಾ ಬಂಧನ

ಹೊರ ಹಾಕಿದ್ದಾಳೆ. ತಾನು ಕೆಲಸ ಮಾಡಿದ ಒಂದು ವರ್ಷದಲ್ಲಿ ಸುಮಾರು 70 ಭ್ರೂಣ ಹತ್ಯೆ (ಅಬಾರ್ಷನ್) ಮಾಡಿರುವುದಾಗಿ ಹೇಳಿಕೆ ನೀಡಿರುವ ಈಕೆ, ಅವುಗಳಲ್ಲಿ 6 ತಿಂಗಳ ಮಗುವನ್ನು ಸಿಝೇರಿಯನ್ ಮೂಲಕ ಹೊರ ತೆಗೆದಿದ್ದಾಗಿ ಹೇಳಿದ್ದಾಳೆ. 6 ತಿಂಗಳ ಭ್ರೂಣವು ಮಗುವಾಗಿ ರೂಪುಗೊಂಡಿರುತ್ತದೆ. ಅದಕ್ಕೆ ಜೀವವಿರುತ್ತದೆ. ಆದರೆ, ಧ್ವನಿ ಇರುವುದಿಲ್ಲ. ಹೊರ ತೆಗೆದ 5 ಅಥವಾ 10 ನಿಮಿಷದಲ್ಲಿ ಈ ಮಗು ಸಾವನ್ನಪ್ಪುತ್ತದೆ ಎಂದು ವಿವರಿಸಿರುವ ಆಕೆ, ಈ ಮಕ್ಕಳನ್ನು ಪೇಪರ್‌ನಲ್ಲಿ ಸುತ್ತಿ ಲ್ಯಾಬ್ ಟೆಕ್ನಿಷಿಯನ್ ನಿಸಾರ್‌ಗೆ ಕೊಡುತ್ತಿದ್ದೆವು. ಆತ ಅದನ್ನು ಕಾವೇರಿ ನದಿಗೆ ಬಿಸಾಡಿ ಬರುತ್ತಿದ್ದ. ಆತ ಯಾವ ಸ್ಥಳದಲ್ಲಿ ಬಿಸಾಡಿದ ಎಂಬುದು ಗೊತ್ತಿಲ್ಲ. ಬೇರೆ ಎಲ್ಲಾದರೂ ಬಿಸಾಡಿದರೆ ಅವಶೇಷಗಳು ಪತ್ತೆಯಾಗುತ್ತವೆ ಎಂಬ ಕಾರಣದಿಂದ ಕಾವೇರಿ ನದಿಗೆ ಎಸೆಯಲಾಗುತ್ತಿತ್ತು ಎಂದು ಹೇಳಿದ್ದಾಳಂತೆ.

ಭ್ರೂಣ ಹತ್ಯೆಗೆ 6 ತಿಂಗಳವರೆಗೆ ಕಾಯಬೇಕಾದ ಅನಿವಾರ್ಯತೆ ಏಕೆ ಬಂತು ಎಂಬುದರ ಬಗ್ಗೆಯೂ ಸ್ಪಷ್ಟಪಡಿಸಿರುವ ಆಕೆ, ನಮ್ಮ ಬಳಿ ಅಡ್ವಾನ್ಸ್ಡ್ ಸ್ಕ್ಯಾನರ್ ಇರಲಿಲ್ಲ. ಅದರಿಂದಾಗಿ ಮಗು ಯಾವುದು ಎಂಬುದು ಪತ್ತೆಯಾಗದ ಕಾರಣ ಒಂದು ತಿಂಗಳು ಬಿಟ್ಟು ಬರುವಂತೆ ಗರ್ಭಿಣಿಯರಿಗೆ ತಿಳಿಸಲಾಗಿತ್ತು. ಆದರೆ, ಅವರು ವಿಳಂಬವಾಗಿ ಬಂದಿದ್ದರಿಂದ ಅವರ ಹೊಟ್ಟೆಯೊಳಗೆ 6 ತಿಂಗಳ ಮಗು ಇತ್ತು. ಈ ಪ್ರಕರಣಗಳಲ್ಲಿ ಗರ್ಭಿಣಿಯರಿಗೆ ಪ್ರಜ್ಞೆ ತಪ್ಪಿಸಿ ಸಿಝೇರಿಯನ್ ಮೂಲಕ ಮಕ್ಕಳನ್ನು ಹೊರ ತೆಗೆಯಲಾಗಿತ್ತು. ಈ ವೇಳೆ ಹೆಚ್ಚಿನ ರಕ್ತಸ್ರಾವವೂ ಆಗಿತ್ತು ಎಂದು ಆಕೆ ಹೇಳಿದ್ದಾಳೆನ್ನಲಾಗಿದೆ. 12 ವಾರಗಳವರೆಗಿನ ಭ್ರೂಣಗಳನ್ನು ಹೊರ ತೆಗೆದಾಗ ಅದನ್ನು ಮೆಡಿಕಲ್ ವೇಸ್ಟ್‌ನಲ್ಲಿ ಬಿಸಾಡಲಾಗುತ್ತಿತ್ತು. ಈ ಭ್ರೂಣಗಳು 4ರಿಂದ 5 ದಿನಗಳಲ್ಲಿ ಕೊಳೆತುಹೋಗುತ್ತಿತ್ತು ಎಂದು ಮಂಜುಳಾ ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾಳೆ. ಡಾ.ಚಂದನ್ ಬಲ್ಲಾಳ್ ಎಂಬಿಬಿಎಸ್ ಡಾಕ್ಟರ್ ಅಲ್ಲ. ಅವರು ಆಯುರ್ವೇದ ಡಾಕ್ಟರ್ ಆಗಿದ್ದು, ಅವರಿಗೆ ನರ್ಸಿಂಗ್ ಹೋಂ ನಡೆಸುವ ಅರ್ಹತೆಯೂ ಇಲ್ಲ. ಆದರೂ ನರ್ಸಿಂಗ್ ಹೋಂ ನಡೆಸುತ್ತಿದ್ದರು. ಚಂದನ್ ಬಲ್ಲಾಳ್ ಸ್ಕ್ಯಾನಿಂಗ್ ಮಾಡುವುದನ್ನು ಕೂಡ ಕಲಿತಿರಲಿಲ್ಲ ಎಂದು ಮಂಜುಳಾ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾಳೆ. ಹೆಣ್ಣು ಭ್ರೂಣ ಹತ್ಯೆ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಲಾಗಿದ್ದು, ಡಿವೈಎಸ್ಪಿ ಪಿ. ನಾಗರಾಜ್ ಅವರನ್ನು ತನಿಖಾಧಿಕಾರಿಯಾಗಿ ನಿಯೋಜಿಸಲಾಗಿದೆ. ಹಾಲಿ ಬೈಯ್ಯಪ್ಪನಹಳ್ಳಿ ಠಾಣೆಯಲ್ಲಿ ಈ ಪ್ರಕರಣದ ತನಿಖಾಧಿಕಾರಿಯಾಗಿರುವ ಇನ್ಸ್‌ಪೆಕ್ಟರ್ ಪ್ರಶಾಂತ್ ಅವರು ಪ್ರಕರಣದ ಕಡತವನ್ನು ಡಿವೈಎಸ್ಪಿ ನಾಗರಾಜ್ ಅವರಿಗೆ ಹಸ್ತಾಂತರಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ನಾಳೆ ಪ್ರಕರಣ ಸಿಐಡಿಗೆ ಹಸ್ತಾಂತರವಾಗಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಾ.ಸತೀಶ್ ಭ್ರೂಣ ಹತ್ಯೆಯಲ್ಲಿ ಶಾಮೀಲು!

ಡಾ.ಸತೀಶ್ ವಿರುದ್ಧ ದೂರುಗಳು ಬಂದಿತ್ತು ಎಂದ ಸಚಿವರು, ಡಾ. ಸತೀಶ್ ಆತ್ಮಹತ್ಯೆಗೂ ಈ ಪ್ರಕರಣಕ್ಕೂ ಲಿಂಕ್ ಇದೆಯೇ ಎಂಬುದನ್ನು ನೋಡಬೇಕಾಗಿದೆ ಎಂದರು. ಕರ್ತವ್ಯ ಲೋಪ ಕಂಡುಬಂದ ಹಿನ್ನೆಲೆಯಲ್ಲಿ ಈಗಾಗಲೇ ಇಬ್ಬರು ವೈದ್ಯಾಧಿಕಾರಿಗಳನ್ನು ಅಮಾನತು ಪಡಿಸಲಾಗಿದೆ. ಹೆಣ್ಣು ಭ್ರೂಣ ಹತ್ಯೆ ಪ್ರಕರಣದಲ್ಲಿ ಆರೋಗ್ಯ ಇಲಾಖೆಯ ಕೆಲವು ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬ ಮಾಹಿತಿಯೂ ಇದೆ. ಸಮಗ್ರ ತನಿಖೆಗಾಗಿ ಪ್ರಕರಣವನ್ನು ಸಿಐಡಿಗೆ ನೀಡಲಾಗಿದ್ದು, ತಪ್ಪಿತಸ್ಥರನ್ನು ಪತ್ತೆ ಹಚ್ಚಲಿದ್ದಾರೆ ಎಂದರು.

ಬೆಂಗಳೂರಿನ ತಮ್ಮ ಮನೆಯಲ್ಲಿ ಆತ್ಮಹತ್ಯೆ

ಡಾ. ನಟರಾಜ್ ಆತ್ಮಹತ್ಯೆಗೂ ಯಾವುದೇ ಸಂಬಂಧವಿಲ್ಲ ಎಂದಿದ್ದಾರೆ. ಡಾ. ನಟರಾಜ್ ಅವರು ಮಂಡ್ಯ ಡಿಹೆಚ್‌ಓ ಕಚೇರಿಗೆ ವರ್ಗಾವಣೆಯಾಗಿ ಬಂದು ಕೇವಲ 3 ತಿಂಗಳಾಗಿವೆ. ಅವರು ಕೌಟುಂಬಿಕ ಸಮಸ್ಯೆ ಹಾಗೂ ಅನಾರೋಗ್ಯದಿಂದ ಖಿನ್ನತೆಗೊಳಗಾಗಿದ್ದರು. ಈ ಹಿಂದೆಯೂ 3 ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ನವೆಂಬರ್ 2ರಂದು ಹೃದಯಾಘಾತವಾಗಿದೆ ಎಂದು ತಿಳಿಸಿ ರಜೆ ಕೇಳಿದ್ದರು. ಅವರಿಗೆ ರಜೆ ನೀಡಲಾಗಿತ್ತು. ನವೆಂಬರ್ 17ರಂದು ಪತ್ರ ಬರೆದು, ಕೌಟುಂಬಿಕ ಸಮಸ್ಯೆ ಹಾಗೂ ಅನಾರೋಗ್ಯದ ಕಾರಣದಿಂದ ತಮಗೆ ಈ ಹಿಂದೆ ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ವರ್ಗಾವಣೆ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದರು. ವರ್ಗಾವಣೆ ಬಯಸಿದ್ದ ಅವರು, ಕುಣಿಗಲ್ ಕ್ಷೇತ್ರದ ಶಾಸಕರ ಶಿಫಾರಸ್ಸು ಪತ್ರವನ್ನೂ ನೀಡಿದ್ದಾರೆ. ಒಟ್ಟಾರೆ ಡಾ. ನಟರಾಜ್ ವೈಯಕ್ತಿಕ ಸಮಸ್ಯೆಗಳಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ ಹೊರತು, ನನಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ. ಅಲ್ಲದೇ, ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೂ ಡಾ. ನಟರಾಜ್ ಅವರಿಗೂ ಕೂಡ ಯಾವುದೇ ಸಂಬಂಧವಿಲ್ಲ ಎಂದು ಡಾ. ಮೋಹನ್ ಸ್ಪಷ್ಟಪಡಿಸಿದರು.

ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿ

ಎರಡನೇ ದಿನಕ್ಕೆ ಕರ್ನಾಟಕ 128 ರನ್ ಮುನ್ನಡೆ

● ಪ್ರಕರ್ ಚತುರ್ವೇದಿ, ಕೆ.ಪಿ.ಕಾರ್ತಿಕೇಯ ದ್ವಿಶತಕದ ಜೊತೆಯಾಟ ● ಕರ್ನಾಟಕ 5 ವಿಕೆಟ್ ನಷ್ಟಕ್ಕೆ 360

ಮೈಸೂರು,ಡಿ.2(ಎಂಟಿವೈ)– ಮೈಸೂರಲ್ಲಿ ನಡೆಯುತ್ತಿರುವ ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ಹಾಗೂ ಉತ್ತರಾಖಂಡ್ ನಡುವಿನ ಪಂದ್ಯದಲ್ಲಿ ಆತಿಥೇಯ ಕರ್ನಾಟಕ ಆರಂಭಿಕ ಆಟಗಾರ ಪ್ರಕರ್ ಚತುರ್ವೇದಿ(158) ಹಾಗೂ ಕೆ.ಪಿ.ಕಾರ್ತಿಕೇಯ(121) ಅವರ ಭರ್ಜರಿ ದ್ವಿಶತಕದ ಜೊತೆಯಾಟದಿಂದ ಎರಡನೆ ದಿನದ ಅಂತ್ಯಕ್ಕೆ 5 ವಿಕೆಟ್ ನಷ್ಟಕ್ಕೆ 360 ರನ್ ಕಲೆ ಹಾಕಿ 128 ರನ್‌ಗಳ ಮುನ್ನಡೆ ಕಾಯ್ದುಕೊಂಡಿದೆ.

ಮೈಸೂರಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಬಿಸಿಸಿಐ ಆಯೋಜಿಸಿರುವ ಕೂಚ್ ಬಿಹಾರ್ ಟ್ರೋಫಿ ರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ಹಾಗೂ ಉತ್ತರಾಖಂಡ್ ನಡುವಿನ ಪಂದ್ಯದ ಮೊದಲ ದಿನದ ಅಂತ್ಯಕ್ಕೆ 9 ವಿಕೆಟ್ ಕಳೆದುಕೊಂಡು 232 ರನ್ ದಾಖಲಿಸಿದ್ದ ಉತ್ತರಾಖಂಡ್ ಶನಿವಾರ ಎರಡನೇ ದಿನದ ಆಟ ಮುಂದುವರೆಸಿ ಇನ್ನಿಂಗ್ಸ್‌ನ ಮೊದಲ ಎಸೆತದಲ್ಲೇ ಆದಿತ್ಯ ರಾವತ್(0) ಖಾತೆ ತೆರೆಯದೇ ಧೀರಜ್‌ಗೌಡ(30.1 ಓವರ್ 62 ರನ್‌ಗೆ 4 ವಿಕೆಟ್) ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು ನಿರ್ಗಮಿಸಿದರು. ಆ ಮೂಲಕ 232 ರನ್‌ಗೆ ಉತ್ತರಾಖಂಡ ತಂಡ ಆಲೌಟ್ ಆಯಿತು.



158 ರನ್ ಬಾರಿಸಿದ ಪ್ರಕರ್ ಚತುರ್ವೇದಿ ಶತಕ ಸಂಭ್ರಮ

ಉತ್ತರಾಖಂಡ್ ತಂಡ ನೀಡಿದ ಗುರಿಯನ್ನು ಬೆನ್ನತ್ತಿದ ಕರ್ನಾಟಕ ತಂಡಕ್ಕೆ ಆರಂಭಿಕ ಆಘಾತ ಉಂಟಾಯಿತು. ಆರಂಭಿಕ ಆಟಗಾರ, ವಿಕೆಟ್ ಕೀಪರ್ ಕ್ರಿಶಿವ್ ಬಜಾಜ್ 9 ಎಸೆತ ಎದುರಿಸಿ ಕೇವಲ 4 ರನ್‌ಗಳಿಸಿದ್ದಾಗ ಡಿ.ಪಿ.ಸಿಂಗ್ ಬೌಲಿಂಗ್‌ನಲ್ಲಿ ರಾಹುಲ್‌ಗೆ ಕ್ಯಾಚ್ ನೀಡಿ ಔಟಾದರು. ಆಗ ಕರ್ನಾಟಕ ತಂಡದ ಮೊತ್ತ 2.4 ಓವರ್‌ನಲ್ಲಿ 9 ರನ್ ಆಗಿತ್ತು. ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಹರ್ಷಿಲ್ ಧರ್ಮಾಣಿ 31 ಎಸೆತ ಎದುರಿಸಿ, 2 ಬೌಂಡರಿ ಬಾರಿಸಿ 14 ರನ್‌ಗಳಿಸಿದ್ದಾಗ ಆದಿತ್ಯ ರಾವತ್ ಬೌಲಿಂಗ್‌ನಲ್ಲಿ ಎಸ್.ಗುಪ್ತ ಹಿಡಿದ ಕ್ಯಾಚ್‌ಗೆ ಬಲಿಯಾದರು. ಎರಡನೇ ವಿಕೆಟ್ ಪತನಗೊಂಡಾಗ ಕರ್ನಾಟಕ ತಂಡದ ಮೊತ್ತ 8.4 ಓವರ್‌ಗೆ 31 ರನ್ ದಾಖಲಾಗಿತ್ತು. ಎರಡು ವಿಕೆಟ್ ಪಡೆದ ಉತ್ತರಾಖಂಡ್ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸುವ ಎಲ್ಲಾ ಲಕ್ಷಣ ಗೋಚರಿಸುತ್ತಿತ್ತು.

ದಾಖಲೆಯ ಜೊತೆಯಾಟ: ಅಲ್ಪ ಮೊತ್ತಕ್ಕೆ ಎರಡು ವಿಕೆಟ್ ಕಳೆದುಕೊಂಡಿದ್ದ ಕರ್ನಾಟಕ ತಂಡಕ್ಕೆ ಮುರಿಯದ ಮೂರನೇ ವಿಕೆಟ್ ಜೊತೆಯಾಟ ಮುನ್ನಡೆ ಸಾಧಿಸಲು ಸಹಕಾರಿಯಾಯಿತು. ಪಂದ್ಯದ 8.5ನೇ ಓವರ್‌ನಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಲು ಬಂದ ಕೆ.ಪಿ.ಕಾರ್ತಿಕೇಯ ಆರಂಭಿಕ ಆಟಗಾರ ಪ್ರಕರ್ ಚತುರ್ವೇದಿ ಜೊತೆಗೂಡಿ ಇನ್ನಿಂಗ್ಸ್ ಕಟ್ಟಿದರು. ಈ ಜೋಡಿ ಉತ್ತರಾಖಂಡ್ ತಂಡದಲ್ಲಿ ಬೌಲಿಂಗ್ ಮಾಡಿದ 6 ಮಂದಿ ಬೌಲರ್‌ಗಳ ಬೆವರಿಳಿಸಿದರು. ಬೆಳಗ್ಗೆ ಚಹಾ ವಿರಾಮಕ್ಕೂ ಮುನ್ನ ಜೊತೆಗೂಡಿದ ಈ ಜೋಡಿ ಸಂಜೆ ಚಹಾ ವಿರಾಮದ ನಂತರವೂ ಬ್ಯಾಟಿಂಗ್ ಅಬ್ಬರ ಮುಂದುವರೆಸಿತು. 63 ಓವರ್ ಎದುರಿಸಿ ಈ ಜೋಡಿ ದಾಖಲೆಯ 278 ರನ್ ಕಲೆ ಹಾಕಿತು.

ತಂಡದ ಮೊತ್ತ 71.1 ಓವರ್‌ನಲ್ಲಿ 309ರನ್ ಆಗಿದ್ದಾಗ 180 ಎಸೆತ ಎದುರಿಸಿ 2 ಸಿಕ್ಸರ್, 13 ಬೌಂಡರಿ ಬಾರಿಸಿ 121 ರನ್ ಬಾರಿಸಿದ್ದ ಕೆ.ಪಿ.ಕಾರ್ತಿಕೇಯ ಕೃಷ್ಣ ಗರ್ಗ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಬಳಿಕ ಎರಡು ಎಸೆತ ನಂತರ ದ್ವಿಶತಕದತ್ತ ಸಾಗುತ್ತಿದ್ದ ಆರಂಭಿಕ ಆಟಗಾರ ಪ್ರಕರ್ ಚತುರ್ವೇದಿ 210 ಎಸೆತ ಎದುರಿಸಿ 24 ಬೌಂಡರಿಯೊಂದಿಗೆ 158 ರನ್‌ಗಳಿಸಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು ನಿರ್ಗಮಿಸಿದರು. ಆಗ ತಂಡದ ಮೊತ್ತ 4 ವಿಕೆಟ್ ನಷ್ಟಕ್ಕೆ 310ರನ್ ದಾಖಲಾಗಿತ್ತು.

ಸಂಕ್ಷಿಪ್ತ ಸ್ಕೋರ್

ಉತ್ತರಾಖಂಡ್ ಮೊದಲ ಇನ್ನಿಂಗ್ಸ್: 90.1 ಓವರ್‌ನಲ್ಲಿ 232 ರನ್‌ಗೆ ಆಲೌಟ್

ಕರ್ನಾಟಕ ಮೊದಲ ಇನ್ನಿಂಗ್ಸ್: ದಿನದ ಅಂತ್ಯಕ್ಕೆ 87 ಓವರ್‌ನಲ್ಲಿ 5 ವಿಕೆಟ್ ನಷ್ಟಕ್ಕೆ 360 ರನ್(128 ರನ್ ಮುನ್ನಡೆ)

5ನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಲು ಬಂದ ರಾಹುಲ್ ದ್ರಾವಿಡ್ ಪುತ್ರ ಸಮಿತ್ ದ್ರಾವಿಡ್ 47 ಎಸೆತ ಎದುರಿಸಿ 1 ಸಿಕ್ಸರ್, 1 ಬೌಂಡರಿ ನೆರವಿನೊಂದಿಗೆ ಅಜೇಯ 19 ರನ್ ಗಳಿಸಿದ್ದರೆ, 6 ನೇ ಕ್ರಮಾಂಕದ ಆಟಗಾರ ಸಿದ್ದಾರ್ಥ ಅಖಿಲ್ 27 ಎಸೆತದಲ್ಲಿ 3 ಬೌಂಡರಿಯುಳ್ಳ 17 ರನ್‌ಗಳಿಸಿದ್ದ ರಾಜ್ಯವರ್ಧನ್ ಬೌಲಿಂಗ್‌ನಲ್ಲಿ ಬೋಲ್ಡ್ ಆದರು. ಕ್ರೀಸ್‌ನಲ್ಲಿ ಸಮಿತ್ ದ್ರಾವಿಡ್(17) ಅವರೊಂದಿಗೆ ತಂಡದ ನಾಯಕ 20 ಎಸೆತದಲ್ಲಿ 1 ಸಿಕ್ಸರ್, 1 ಬೌಂಡರಿ ನೆರವಿನಿಂದ ಅಜೇಯ 15 ರನ್‌ಗಳಿಸಿದ್ದಾರೆ. ಈ ಜೋಡಿ ಪಂದ್ಯದ ಮೂರನೇ ದಿನ ಭಾನುವಾರವೂ ಆಟ ಮುಂದುವರೆಸಲಿದ್ದು, ಹೆಚ್ಚು ರನ್ ಕಲೆ ಹಾಕುವ ವಿಶ್ವಾಸವಿದೆ. ಎರಡನೇ ದಿನದ ಅಂತ್ಯಕ್ಕೆ ಕರ್ನಾಟಕ 87 ಓವರ್‌ನಲ್ಲಿ 5 ವಿಕೆಟ್ ನಷ್ಟಕ್ಕೆ 360 ರನ್ ಕಲೆಹಾಕಿ 128 ರನ್ ಮುನ್ನಡೆ ಸಾಧಿಸಿದೆ.

ಉತ್ತರಾಖಂಡ್ ತಂಡ ಬೌಲರ್ ಡಿ.ಪಿ.ಸಿಂಗ್ 11 ಓವರ್‌ನಲ್ಲಿ 52 ರನ್ ನೀಡಿ 1 ವಿಕೆಟ್ ಪಡೆದರೆ, ಆದಿತ್ಯ ರಾವತ್ 18 ಓವರ್‌ನಲ್ಲಿ 69 ರನ್ ನೀಡಿ 1 ವಿಕೆಟ್, ಎಸ್.ಗುಪ್ತಾ 18 ಓವರ್‌ನಲ್ಲಿ 47 ರನ್, ಕೃಷ್ಣ ಗರ್ಗ್ 11 ಓವರ್‌ನಲ್ಲಿ 61 ರನ್ ನೀಡಿ 2 ವಿಕೆಟ್, ರಾಜ್ಯವರ್ಧನ್ 19 ಓವರ್‌ನಲ್ಲಿ 83 ರನ್ ನೀಡಿ 1 ವಿಕೆಟ್ ಹಾಗೂ ಪೂರ್ವನಶ್ ದ್ರುವ 14 ಓವರ್‌ನಲ್ಲಿ 41 ರನ್ ನೀಡಿದ್ದಾರೆ.

ರೈತರ ಸಾಲ ಮನ್ನಾಗೆ ಕಬ್ಬು ಬೆಳೆಗಾರರ ಸಂಘ ಒತ್ತಾಯ



ಮೈಸೂರು,ಡಿ.2(ಎಂಟಿವೈ)– ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿಯಿಂದ ರೈತರು ಸಂಕಷ್ಟಕ್ಕೀಡಾಗಿದ್ದು, ಕೈಗಾರಿಕೋದ್ಯಮಿಗಳ ಸಾಲ ಮನ್ನಾ ಮಾಡಿದಂತೆ ರೈತರ ಸಾಲ ಮನ್ನಾ ಮಾಡಬೇಕೆಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಲೋಕೋಪಯೋಗಿ ಇಲಾಖೆ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅತಿವೃಷ್ಟಿ, ಮತ್ತೆ ಕೆಲವೆಡೆ ಅನಾವೃಷ್ಟಿ ಪರಿಸ್ಥಿತಿ ತಲೆದೋರಿದೆ ಬಹುತೇಕ ಜಿಲ್ಲೆಗಳಲ್ಲಿ ಬರದ ತೀವ್ರತೆ ಹೆಚ್ಚಾಗಿದೆ. ಇದರಿಂದ ರೈತ ವರ್ಗ ಸಂಕಷ್ಟಕ್ಕೆ ಸಿಲುಕಿದ್ದು, ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕೂಡಲೇ ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸಬೇಕು. ಕೈಗಾರಿಕೋದ್ಯಮಿಗಳ ಸಾಲ ಮನ್ನಾ ಮಾಡಿದಂತೆ ರಾಜ್ಯದ ಎಲ್ಲಾ ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ಎಲ್ಲಾ ಕೃಷಿ ಉತ್ಪನ್ನಗಳಿಗೂ ಸ್ವಾಮಿನಾಥನ್ ಆಯೋಗದ ವರದಿಯಂತೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ಪ್ರಧಾನಿ ಮೋದಿ ರೈತರಿಗೆ ನೀಡಿರುವ ಭರವಸೆಯನ್ನು ಕೂಡಲೇ ಜಾರಿ ಮಾಡಬೇಕು. ರೈತರು ಬರಗಾಲದ ಸಂಕಷ್ಟದಿಂದ ನರಳುತ್ತಿದ್ದಾರೆ. ಯಾವುದೇ ಪರಿಹಾರ ಕ್ರಮಗಳನ್ನು ಕೈಗೊಂಡಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ನೆರವಿಗೆ ಬಾರದೆ ರಾಜಕೀಯ ಚೆಲ್ಲಾಟ ಮಾಡುತ್ತಿವೆ. ರಾಜ್ಯ ಸರ್ಕಾರ ಭಿಕ್ಷೆಯಂತೆ 2 ಸಾವಿರ ರೂ. ಬರ ಪರಿಹಾರ ನೀಡಲು ಮುಂದಾಗಿರುವುದು ಖಂಡನೀಯ. ಒಂದು ಎಕರೆಗೆ ಕನಿಷ್ಠ 25 ಸಾವಿರ ಬರ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಡಿ.23ರಂದು ಅಧಿವೇಶನ: ವಿಶ್ವ ರೈತ ದಿನದ ಅಂಗವಾಗಿ ಬೆಂಗಳೂರಲ್ಲಿ ಡಿ.23ರಂದು ರಾಷ್ಟ್ರೀಯ ರೈತರ ಮಹಾ ಅಧಿವೇಶನ ನಡೆಸಲು ಉದ್ದೇಶಿಸಲಾಗಿದೆ. ರೈತರ ಸಮಸ್ಯೆ ಬಗೆಹರಿಸುವುದಕ್ಕೆ ಸಂಬಂಧಿಸಿದಂತೆ ಸಂಯುಕ್ತ ಕಿಸಾನ್ ಮೋರ್ಚಾ ಸಂಘಟನೆಯ ರಾಷ್ಟ್ರೀಯ ರೈತ ಮುಖಂಡರ ಸಮ್ಮುಖದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಅಧಿವೇಶನದಲ್ಲಿ ಎಚ್ಚರಿಕೆ ನೀಡಲಾಗುತ್ತದೆ ಎಂದರು.

ಬಣ್ಣಾರಿ ಸಕ್ಕರೆ ಕಾರ್ಖಾನೆ ಕಳೆದ ವರ್ಷ ಟನ್ ಕಬ್ಬಿಗೆ 2953 ರೂ. ಪಾವತಿ ಮಾಡಿದ್ದೇವೆ ಎಂದು ಸುಳ್ಳು ವರದಿ ನೀಡಿ ಕಬ್ಬು ಬೆಳೆಗಾರ ರೈತರನ್ನು ವಂಚಿಸುತ್ತಿದೆ. ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳು ಸ್ವಯಂಪ್ರೇರಿತವಾಗಿ ಎಫ್.ಆರ್.ಪಿ ದರಕ್ಕಿಂತ ಹೆಚ್ಚುವರಿಯಾಗಿ 300 ರೂ. ನೀಡುತ್ತಿದ್ದಾರೆ. ಸಕ್ಕರೆ ಬೆಲೆ ಗಗನಕ್ಕೆ ಏರುತ್ತಿದೆ. 3– 4 ಸಭೆಗಳಾದರೂ ಕಾರ್ಖಾನೆಯವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಅಂತಿಮ ಎಚ್ಚರಿಕೆ ನೀಡುತ್ತಿದ್ದೇವೆ. ಎಚ್ಚೆತ್ತುಕೊಳ್ಳದಿದ್ದರೆ ಕಾರ್ಖಾನೆ ಮಾಲೀಕರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ವಿದ್ಯುತ್ ಖಾಸಗೀಕರಣ ನೀತಿಯನ್ನು ಕೇಂದ್ರ ಸರ್ಕಾರ ಕೈಬಿಡಬೇಕು. ಕೃಷಿ ಪಂಪ್ ಸೆಟ್‌ಗಳಿಗೆ ಹಗಲು ವೇಳೆ ನಿರಂತರ 10 ಗಂಟೆಗಳ ವಿದ್ಯುತ್ ನೀಡಬೇಕು.

ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಮೂಕಳ್ಳಿ ಮಹದೇವಸ್ವಾಮಿ ಕಮಲಮ್ಮ, ಪಟೇಲ್ ಶಿವಮೂರ್ತಿ, ಕುರುಬೂರು ಸಿದ್ದೇಶ್, ಹಂಪಾಪುರ ರಾಜೇಶ, ಕಬಿನಿ ಮಾದಪ್ಪ, ವೆಂಕಟೇಶ್, ಪ್ರದೀಪ, ಸುನಿಲ್, ರಂಗರಾಜು, ಕೆಂಡಗಣ್ಣಸ್ವಾಮಿ, ವಿಜಯೇಂದ್ರ ಬಿ.ಪಿ. ಪರಶಿವಮೂರ್ತಿ, ಮಂಜುನಾಥ, ಸುಂದ್ರಪ್ಪ, ರೇವಣ್ಣ ಇದ್ದರು.

ಅರ್ಜಿ ಆಹ್ವಾನ

ಮೈಸೂರು: ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ಹಾಗೂ ಪ್ರವರ್ಗ–1ರ ಅರೆ ಅಲೆಮಾರಿ, ಅಲೆಮಾರಿ ವಿದ್ಯಾರ್ಥಿಗಳಿಂದ 2023–24ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ 'ವಿದ್ಯಾರ್ಥಿ ವೇತನ', 'ಶುಲ್ಕ ವಿನಾಯಿತಿ', 'ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ' ಸೌಲಭ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು https://ssp.postmatric.karnataka. gov.in ಮೂಲಕ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು 2024 ರ ಜನವರಿ 10 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಾಲತಾಣ bcwdhelpline@gmail.com ಸಹಾಯವಾಣಿ: 8050770005 ಅನ್ನು ಸಂಪರ್ಕಿಸಬಹುದು ಎಂದು ನಂಜನಗೂಡು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈಡಿಗ ಸಮುದಾಯವನ್ನು ಎಸ್ಟಿಗೆ ಸೇರಿಸುವಂತೆ ಆಗ್ರಹಿಸಿ

ಡಿ.10ರಂದು ಗಂಗಾವತಿಯಲ್ಲಿ ಉಪವಾಸ ಸತ್ಯಾಗ್ರಹ

ಡಾ. ಪ್ರಣವಾನಂದ ಸ್ವಾಮೀಜಿ ಘೋಷಣೆ



ಮೈಸೂರು, ಡಿ.2(ಜಿಎ)– ಈಡಿಗ ಸಮುದಾಯವನ್ನು ಎಸ್‌ಟಿಗೆ ಸೇರಿಸಬೇಕು ಎಂಬಂತೆ ಮೊದಲಾದ 16 ಬೇಡಿಕೆಗಳ ಈಡೇರಿಕೆಗಾಗಿ ಡಿ. 10 ರಂದು ಕೊಪ್ಪಳ ಜಿಲ್ಲೆ ಗಂಗಾವತಿಯಲ್ಲಿ ಒಂದು ದಿನದ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಬ್ರಹ್ಮಶ್ರೀ ನಾರಾಯಣ ಗುರುಶಕ್ತಿ ಪೀಠದ ಡಾ. ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ವೇಳೆ ಇವುಗಳನ್ನು ಸರ್ಕಾರ ಈಡೇರಿಸದಿದ್ದರೆ ಮತ್ತೊಮ್ಮೆ ರಾಜ್ಯಮಟ್ಟದ ಪಾದಯಾತ್ರೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಿಂದಿನ ಸರ್ಕಾರ ಘೋಷಣೆ ಮಾಡಿದ್ದ ಬ್ರಹ್ಮಶ್ರೀ ನಾರಾಯಣಗುರು ಈಡಿಗ ಅಭಿವೃದ್ಧಿ ನಿಗಮಕ್ಕೆ ಕೂಡಲೇ 500 ಕೋಟಿ ರೂ. ಬಿಡುಗಡೆ ಮಾಡಬೇಕು. ಈಡಿಗ ಸಮಾಜದ ಕುಲಶಾಸ್ತ್ರ ಅಧ್ಯಯನಕ್ಕಾಗಿ ಘೋಷಣೆ ಮಾಡಿದ್ದ 25 ಲಕ್ಷ ರೂ.ಗಳನ್ನು ಉಪಯೋಗಿಸಿ, ಕೂಡಲೇ ಕುಲಶಾಸ್ತ್ರ ಅಧ್ಯಯನ ಮುಗಿಸಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಕುಲಕಸುಬು ಕಳೆದುಕೊಂಡ ಈ ಸಮುದಾಯಕ್ಕೆ ಪ್ರಮುಖವಾಗಿ ಉತ್ತರ ಕಲ್ಯಾಣ ಕರ್ನಾಟಕ ಭಾಗದಲ್ಲಿ ಮರಳಿ ಕಸುಬು ನೀಡಬೇಕು, ಇಲ್ಲವೇ ಕಸುಬು ಕಳೆದುಕೊಂಡ ಪ್ರತಿ ಕುಟುಂಬಕ್ಕೂ ಎರಡು ಎಕರೆ ಜಮೀನು ಮಂಜೂರು ಮಾಡಬೇಕು, ರಾಜ್ಯದಲ್ಲಿ ಈಡಿಗ, ಬಿಲ್ಲವ, ನಾಮಧಾರಿ ದೀವರ ಸಮಾಜದಲ್ಲಿ ಅತಿ ನಿರ್ಗತಿಕರಾಗಿರುವವರಿಗೆ ಮನೆ ಹಾಗೂ ನಿವೇಶನಗಳಿಲ್ಲದ ಕುಟುಂಬಗಳಿಗೆ ಯಾವುದಾದರೂ ಯೋಜನೆ ಅಡಿಯಲ್ಲಿ 25 ಸಾವಿರ ಮನೆಗಳನ್ನು ಕೂಡಲೇ ಮಂಜೂರು ಮಾಡಬೇಕೆಂಬುದು ಮುಖ್ಯವಾದ ಬೇಡಿಕೆಗಳಾಗಿವೆ. ಇವುಗಳನ್ನು ಸರ್ಕಾರ ಈಡೇರಿಸದಿದ್ದರೆ ಮುಂಬರುವ ಲೋಕಸಭಾ ಚುನಾವಣೆ ವೇಳೆ ದಿಟ್ಟ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಇದೇ ವೇಳೆ, ತಮ್ಮ ವಿರುದ್ಧ ಸಚಿವ ಮಧು ಬಂಗಾರಪ್ಪ ಮಾಡಿದ ಟೀಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, ಸಮುದಾಯಕ್ಕೆ ಅವರ ಕೊಡುಗೆಯಾದರೂ ಏನು ? ಎಂದು ಪ್ರಶ್ನಿಸಿದರು. ಬಳಿಕ, ಬಿ.ಕೆ. ಹರಿಪ್ರಸಾದ್ ಅವರ ಪರ ತಾವು ನಿಂತಿದ್ದ ಕಾರಣ ತಮ್ಮನ್ನು ವಿರೋಧಿಸಿದ್ದಾರೆಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ವಸಂತ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಧ್ರುವರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವಾಸು ಉಪಸ್ಥಿತರಿದ್ದರು.

ಕೇಶವಾನಂದ ಭಾರತಿ ಪ್ರಕರಣ ಸಂವಿಧಾನಿಕ ಮಹತ್ವದ ತೀರ್ಪಿಗೆ ಕಾರಣ

ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್.ಬನ್ನೂರು ಮಠ್ ಅಭಿಮತ



> ನಾವು ಯಾರೇ ಆಗಿರಬಹುದು. ಆದರೆ, ನಾವು ಸಾಮಾನ್ಯ ವ್ಯಕ್ತಿಯಾಗಿ ಬೆಳೆಯುವುದು ಮತ್ತು ತಾರತಮ್ಯತೆ ಇಲ್ಲದೆ ಇರುವಂತೆ ಇರುವುದನ್ನು ಸಂವಿಧಾನದಲ್ಲಿ ತಿಳಿಸಿದೆ. ನಾವುಗಳು ಇದನ್ನು ಎತ್ತಿಹಿಡಿಯುವ ಕೆಲಸವನ್ನು ಮಾಡಬೇಕು. ಬ್ರಿಟಿಷರು ಸ್ವತಂತ್ರ್ಯ ನೀಡಿದ ನಂತರ ದೇಶದಲ್ಲಿ ಸಂವಿಧಾನವಿಲ್ಲದಿದ್ದರೆ, ಏನು ಬದಲಾವಣೆಯಾಗುತ್ತಿರಲಿಲ್ಲ. ಮೂಲಭೂತ ಹಕ್ಕುಗಳನ್ನು ನೀಡಿದ್ದಾರೆ. ಸಂವಿಧಾನದ ರಕ್ಷಣೆ ಎಲ್ಲರ ಹೊಣೆ. ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ರಾಜಕೀಯವಾಗಿ ಯಾವ ರೀತಿ ಬದಲಾವಣೆಗಳಾಗಿವೆ ಎಂಬುದನ್ನು ಕಾನುನೂ ವಿದ್ಯಾರ್ಥಿಗಳು ಮಾತ್ರವಲ್ಲದೇ ಎಲ್ಲರೂ ತಿಳಿದುಕೊಳ್ಳಬೇಕಿದೆ. ವಿದ್ಯೆ ಮಾತ್ರ ಸಾಲದು ಪ್ರಜ್ಞೆಯೂ ಬೇಕಿದೆ.
> **-ಕವೀಶ್ ಗೌಡ,** ಕಾರ್ಯದರ್ಶಿ, ವಿದ್ಯಾ ವಿಕಾಸ ಇನ್ಸಿಟ್ಯೂಟ್

ಮೈಸೂರು, ಡಿ.2(ಜಿಎ)–ಕೇಶವಾನಂದ ಭಾರತಿ ವರ್ಸಸ್ ಕೇರಳ ರಾಜ್ಯ ಪ್ರಕರಣ ಮತ್ತು ಸಾಂವಿಧಾನಿಕ ಮಹತ್ವದ ತೀರ್ಪಿಗೆ ಕಾರಣ ಎಂದು ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಸ್.ಆರ್.ಬನ್ನೂರು ಮಠ್ ಅಭಿಪ್ರಾಯಪಟ್ಟರು.

ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಮತ್ತು ವಿದ್ಯಾ ವಿಕಾಸ ಇನ್ಸ್‌ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್ ಸಹಯೋಗದೊಂದಿಗೆ ನಗರದ ಬನ್ನೂರು ರಸ್ತೆಯಲ್ಲಿರುವ ಕಾಲೇಜಿನ ಸಭಾಂಗಣದಲ್ಲಿ ಶನಿವಾರ ನಡೆದ 'ಕೇಶವಾನಂದ ಭಾರತಿ ತೀರ್ಪು; ಸುವರ್ಣ ಮಹೋತ್ಸವ ಹಾಗೂ ಮೌಲ್ಯಮಾಪನ– ಸಾಂವಿಧಾನಿಕ ನ್ಯಾಯಶಾಸ್ತ್ರದ ಮೇಲೆ ಆದ ಪ್ರಭಾವ ಪರಿಣಾಮ ಮತ್ತು ಮಹತ್ವ' ಕುರಿತ ಒಂದು ದಿನದ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಕೇಶವಾನಂದ ಭಾರತಿ ಪ್ರಕರಣ ಪ್ರಜಾಪ್ರಭುತ್ವಕ್ಕೆ ಗೆಲುವು ತಂದ ವಿದ್ಯಮಾನವಾಗಿದ್ದು, ಕೇರಳ ರಾಜ್ಯ ತಂದ ಭೂ ಸುಧಾರಣೆ ಕಾಯ್ದೆ ಮತ್ತು ಅದನ್ನು ಸುರಕ್ಷಿಸಲು ಸಂವಿಧಾನದ ಶೆಡ್ಯೂಲ್‌ನಲ್ಲಿ ಸೇರಿಸಲು ಸರ್ಕಾರದ ಪ್ರಯತ್ನವೇ ಕೇಶವಾನಂದ ಭಾರತಿ ವರ್ಸಸ್ ಕೇರಳ ರಾಜ್ಯ ಪ್ರಕರಣದಲ್ಲಿ 13 ನ್ಯಾಯಮೂರ್ತಿಗಳು ನೀಡಿದ ತೀರ್ಪು ಸಾಂವಿಧಾನಿಕ ಮಹತ್ವದ ತೀರ್ಪಿಗೆ ಕಾರಣವಾಯಿತು ಎಂದರು.

13 ನ್ಯಾಯಮೂರ್ತಿಗಳಲ್ಲಿ ಕೇವಲ ನ್ಯಾಯಮೂರ್ತಿ ಹೆಚ್.ಆರ್.ಖನ್ನಾ ಒಬ್ಬರೇ ಶಾಸಕಾಂಗ ತಿದ್ದುಪಡಿ ಮಾಡಬಹುದು ಎಂದು ತಿಳಿಸಿದ ನಂತರ ಅದು ಸಂವಿಧಾನದ ಮೂಲಭೂತ ರಚನೆಗೆ ಧಕ್ಕೆ ತರಬಾರದು ಎಂದು ಬರೆದ ತೀರ್ಪು 9–4 ಬಹುಮತದಲ್ಲಿ ಅಂತಿಮ ತೀರ್ಪಾಗುತ್ತದೆ. ವಿವಿಧ ಸರ್ಕಾರಗಳ ವಿರುದ್ಧ ನಡೆದ ಆಸ್ತಿ ವಿಚಾರದ ಗೋಲಕ್ ನಾಥ್ ಪ್ರಕರಣ ಅಥವಾ ರಾಜರ ಸೌಲಭ್ಯ ಕುರಿತ ಮಾಧವ್ ರಾವ್ ಸಿಂಧಿಯಾ ಪ್ರಕರಣ ಸಂವಿಧಾನ ಮತ್ತು ಶಾಸಕಾಂಗ ತಿದ್ದುಪಡಿಗಳ ನಡುವಿನ ವೈರುಧ್ಯವನ್ನು ಹೆಚ್ಚಿಸುತ್ತಾ ಹೋಗಿತ್ತು. ಇದನ್ನು ಅಂದಿನ ಮೂಲಭೂತ ಹಕ್ಕಾಗಿದ್ದ ಆಸ್ತಿ ಹಕ್ಕು ಇನ್ನಷ್ಟು ಕಗ್ಗಂಟಾಗಿಸಿತು.

ಅಂತಿಮವಾಗಿ ಕೇಶವಾನಂದ ಭಾರತಿ ಪ್ರಕರಣದ ತೀರ್ಪು ಒಂದು ಮಹತ್ವದ ತೀರ್ಪಾಯಿತು. ಶಾಸಕಾಂಗದ ಕಾರ್ಯಸೂಚಿ ಮತ್ತು ಸಂವಿಧಾನದ ಉದ್ದೇಶಗಳ ನಡುವೆ ಉಂಟಾಗುವ ತಿಕ್ಕಾಟಕ್ಕೆ ಉತ್ತರವಾಗಿ ಇಂದಿಗೂ ನಿಲ್ಲುತ್ತದೆ. ಈ ಪ್ರಕರಣದ ತೀರ್ಪು ರಾಜಕೀಯ ಮತ್ತು ಸಾಮಾಜಿಕ ಪಲ್ಲಟಗಳಿಗೂ ಕಾರಣವಾಗಿತ್ತು ಎಂದು ವಿವರಿಸಿದರು.

ಹಲವು ಪ್ರಥಮಗಳನ್ನು ಒಳಗೊಂಡಿದ ಕೇಶವಾನಂದ ಭಾರತಿ ಪ್ರಕರಣವು ಭಾರತದ ನ್ಯಾಯಾಂಗದ ಇತಿಹಾಸದ ಮಹತ್ವದ ತೀರ್ಪು

> 70ರ ದಶಕದಲ್ಲಿ ಕೇರಳದಲ್ಲಿ ಜಾರಿಯಾದ ಭೂಸುಧಾರಣಾ ಕಾಯ್ದೆಯಿಂದ ಮಠವು 400ಎಕರೆಗಿಂತಲೂ ಹೆಚ್ಚು ಮಠದ ಆಸ್ತಿ ಕಳೆದುಕೊಂಡಿತ್ತು. ಈ ವೇಳೆ ಸ್ವಾಮೀಜಿ ಹೂಡಿದ ಕೇಸ್‌ನ ತೀರ್ಪು ನಂತರ ನಮ್ಮ ಭಾರತದ ಇತಿಹಾಸದಲ್ಲಿ ಅನಾವರಣಗೊಂಡಿತ್ತು. ಇದರ ಆಚರಣೆಯನ್ನು ನಾವು ಮುಂದುವರೆಸಿದ್ದಾಗ ಕೆಲವರು ನೀವು ಸೋತಿದ್ದೀರಾ ಆದರೂ ಏಕೆ ಆಚರಣೆ ಎಂದು ಪ್ರಶ್ನಿಸುತ್ತಾರೆ. ಇದು ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಗೆದ್ದ 50 ವರ್ಷದ ಆಚರಣೆಯಾಗಿದೆ ಎಂದು ತಿಳಿಸುತ್ತಿದ್ದೇವೆ. ಈ ಪ್ರಕರಣವನ್ನು ಮುಂದಿನ ಪೀಳಿಗೆಗೆ ತಿಳಿಸಲು ಈ ಕಾರ್ಯಕ್ರಮ ಮಾಡಿಕೊಂಡು ಬರುತ್ತಿದ್ದೇವೆ. ಕಾನೂನು ವಿದ್ಯಾರ್ಥಿಗಳಿಗೆ, ನ್ಯಾಯಾಧೀಶರಿಗೆ ವಕೀಲರಿಗೆ ಸೂಕ್ತ ಉದಾಹರಣೆಯಾಗಿದೆ.
> **-ಸಚ್ಚಿದಾನಂದ ಸ್ವಾಮೀಜಿ,** ಉತ್ತರಾಧಿಕಾರಿ, ಕಾಸರಗೋಡಿನ ಎಡನೀರ್ ಮಠ

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮಾತನಾಡಿ, ತುರ್ತುಪರಿಸ್ಥಿತಿ ವೇಳೆ ನಡೆದ ಹೇಬಿಯಸ್ ಕಾರ್ಪಸ್ ಪ್ರಕರಣ ಎಂದೇ ಖ್ಯಾತವಾಗಿರುವ ಎಡಿಎಂ ಜಬಲ್ಪುರ್ ವರ್ಸಸ್ ಶಿವಕಾಂತ್ ಶುಕ್ಲಾ ಪ್ರಕರಣದಲ್ಲಿ ಹೆಚ್.ಆರ್. ಖನ್ನಾ ವ್ಯಕ್ತಿಯ ಮೂಲಭೂತ ಹಕ್ಕನ್ನು ಎತ್ತಿ ಹಿಡಿದಿದ್ದರು. ಪೀಠದ ಉಳಿದ ನಾಲ್ವರು ವಿರುದ್ಧವಾದ ತೀರ್ಪು ನೀಡಿದ್ದರು. ನಮ್ಮ ಧ್ವನಿ ಒಂಟಿಯಾಗಿದ್ದರೂ ಸಂವಿಧಾನ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪರ ಇರಬೇಕು ಎಂಬುದಕ್ಕೆ ಅವರು ಉದಾಹರಣೆಯಾಗಿದ್ದರು. ಕೇಶವಾನಂದ ಪ್ರಕರಣದಲ್ಲಿಯೂ ತಮ್ಮ ನಿಲುವಿನಿಂದ ಐತಿಹಾಸಿಕ ತೀರ್ಪಿಗೆ ಕಾರಣರಾದರು. ವಿದ್ಯಾರ್ಥಿಗಳು ಕಾನೂನಿನ ಇತಿಹಾಸವನ್ನು ತಿಳಿದುಕೊಳ್ಳುವುದು ಪ್ರಜಾಪ್ರಭುತ್ವ ಉಳಿಸುವುದಕ್ಕೆ ಅಗತ್ಯ. ತುರ್ತುಪರಿಸ್ಥಿತಿಯಲ್ಲಿ ಧ್ವನಿ ಎತ್ತಿದವರು ರಾಜಕಾರಣಿ, ಮಠಾಧೀಶರು ಅಥವಾ ಉದ್ಯಮಿಗಳಲ್ಲ. ಕಾನೂನು ಕಲಿತ ವಿದ್ಯಾರ್ಥಿಗಳು ಎಂದರು.

ಕೇಶವಾನಂದ ಭಾರತಿ ಉತ್ತರಾಧಿಕಾರಿ ಕಾಸರಗೋಡಿನ ಎಡನೀರ್ ಮಠದ ಸ್ವಾಮೀಜಿ ಸಚ್ಚಿದಾನಂದ ಸ್ವಾಮೀಜಿ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ನಿರ್ದೇಶಕ ಕೆ ದ್ವಾರಕನಾಥ ಬಾಬು, ವಿವಿಐಟಿ ಕಾರ್ಯದರ್ಶಿ ಕವೀಶ್ ಗೌಡ ಉಪಸ್ಥಿತರಿದ್ದರು.

ಸ್ವಚ್ಛ ನೀರು; ಸ್ವಚ್ಛ ಮೈಸೂರು

570 ಕೋಟಿ ಯೋಜನೆ





■ ಬಾಪುಲಿಂಗರಾಜ್ ಅರಸ್

ಮೈಸೂರು ನಗರದ ಒಳ ಚರಂಡಿ ನೀರು ಜೀವ ನದಿ ಕಾವೇರಿಯ ಒಡಲು ಸೇರಿ, ಜೀವ ಜಲ ಮಲೀನವಾಗುತ್ತಿದೆ. ಅಷ್ಟೆ ಅಲ್ಲದೆ ತ್ಯಾಜ್ಯ ನೀರು ಮೈಸೂರು ನಗರದ ಸುತ್ತಮುತ್ತಲಿರುವ ಕೆರೆ-ಕಟ್ಟೆಗಳಿಗೂ ಹರಿದು ಸೇರಿ ಅವುಗಳೂ ಮಲಿನವಾಗುತ್ತಿವೆ. ಕಾವೇರಿಯಿಂದ ಪೂರೈಕೆಯಾಗುತ್ತಿರುವ ನೀರನ್ನು ಶುದ್ಧ ನೀರೆಂದು ಭಾವಿಸಿ ಜನರು ಕುಡಿಯುತ್ತಿದ್ದಾರೆ. ಈ ಸಂಗತಿ ಗೊತ್ತಿದ್ದರೂ ಅಧಿಕಾರಿ ವರ್ಗ ಜಾಣ ಕುರುಡು ಪ್ರದರ್ಶಿಸುತ್ತಾ ಬಂದಿದೆ.

ಜನ ದೂರುತ್ತಾ ಬರುತ್ತಿರುವುದನ್ನು ಜನಪ್ರತಿನಿಧಿಯೊಬ್ಬರು ಅಧಿಕಾರಿಗಳ ಮುಂದೆ ಪ್ರಸ್ತಾಪಿಸಿದ ಫಲವಾಗಿ, ಮುಕ್ತಿ ಕಲ್ಪಿಸುವ ಪ್ರಯತ್ನಕ್ಕೆ ದಾರಿ ಮಾಡಿ ಕೊಟ್ಟಿದೆ. ತ್ಯಾಜ್ಯ ನೀರು ಇನ್ನು ಮುಂದೆ ನದಿ ಹಾಗೂ ಕೆರೆ ಸೇರದಂತೆ ಮೈಸೂರಿನಲ್ಲಿ ಹೆಚ್ಚುವರಿಯಾಗಿ ಒಳ ಚರಂಡಿ ನೀರಿನ ಸಂಸ್ಕರಣಾ ಘಟಕ ನಿರ್ಮಾಣ ಮಾಡಲು ನಗರ ಪಾಲಿಕೆ 570 ಕೋಟಿ ರೂಪಾಯಿಗಳ ಯೋಜನೆ ಸಿದ್ಧಪಡಿಸಿದೆ. 2050ಕ್ಕೆ ಮೈಸೂರು ನಗರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನೀಲ ನಕ್ಷೆ ತಯಾರಿಸಿದೆ. ಮಹಾರಾಜರ ಕಾಲದಲ್ಲಿ ಮೈಸೂರು ನಗರ ಯೋಜನಾ ಬದ್ಧವಾಗಿ ರೂಪಿತವಾಗಿದೆ. 100 ವರ್ಷಗಳ ಮೈಸೂರು ನಗರದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜರ ಆಳ್ವಿಕೆಯಲ್ಲಿ ಒಳ ಚರಂಡಿ, ಮಳೆ ನೀರು ಹರಿಯಲು ರಾಜ ಕಾಲುವೆಗಳನ್ನು ನಿರ್ಮಾಣ ಮಾಡಲಾಗಿತ್ತು.

ರಾಜರ ಆಳ್ವಿಕೆ ನಂತರದಲ್ಲಿ ಮೈಸೂರು ನಗರದ ಅಭಿವೃದ್ಧಿ ಇದೇ ಹಾದಿಯಲ್ಲಿ ಸಾಗಬೇಕಿತ್ತು. ಆದರೆ, ದಿಕ್ಕು-ದೆಸೆ ಇಲ್ಲದಂತೆ ಬೆಳೆಯಿತು. ನಾಯಿಕೊಡೆಗಳಂತೆ ಖಾಸಗಿ ಬಡಾವಣೆಗಳು ಕೊಳಚೆ ಪ್ರದೇಶಗಳು ತಲೆ ಎತ್ತಿದವು. ಹಲವು ಬಡಾವಣೆಗಳಲ್ಲಿ ವ್ಯವಸ್ಥಿತ ಒಳ ಚರಂಡಿ ವ್ಯವಸ್ಥೆ ಇಲ್ಲ. ಅಕ್ರಮ ಕಟ್ಟಡಗಳು ರಾಜ ಕಾಲುವೆಯನ್ನು ಆಪೋಶನ ಪಡೆದವು. ಈ ಕಾರಣದಿಂದ ತ್ಯಾಜ್ಯ ನೀರು ವ್ಯವಸ್ಥಿತವಾಗಿ ಸಂಸ್ಕರಣಾ ಘಟಕ ಸೇರದೆ ದಿಕ್ಕು ತಪ್ಪಿ ಎಲ್ಲೆಂದರಲ್ಲಿ ಹರಿಯುತ್ತಿದೆ.

ಹಲವು ವರ್ಷಗಳಿಂದ ಮೈಸೂರು ನಗರದ ಉತ್ತರ ಭಾಗದ ತ್ಯಾಜ್ಯ ನೀರು ಕಾವೇರಿ ಒಡಲು ಸೇರುತ್ತಿದೆ. ಕೆಸರೆ ಸೇರಿದಂತೆ ವಿವಿಧ ಬಡಾವಣೆಯ ತ್ಯಾಜ್ಯ ನೀರು ನಗುವನಹಳ್ಳಿ, ಮೇಳಾಪುರದ ಮೂಲಕ ಕಾವೇರಿ ಸೇರುತ್ತಿದೆ. ಜೊತೆಗೆ ಇತರೆ ಭಾಗದ ಒಳ ಚರಂಡಿ ನೀರು ಕೆಸರೆ, ಸುಯೇಜ್ ಫಾರಂ, ರಾಯನಕೆರೆ ಹಾಗೂ ಹಂಚ್ಯಾ ಬಳಿ ನಿರ್ಮಾಣವಾಗಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸೇರುವ ಬದಲು ನದಿ ಹಾಗೂ ಕೆರೆ ಸೇರುತ್ತಿದೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಳೆದ ತಿಂಗಳು ನಡೆದ ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾಪವಾಯಿತು. ಒಳ ಚರಂಡಿ ನೀರು ಕಾವೇರಿ ನದಿ ಹಾಗೂ ಕೆರೆಗಳನ್ನು ಸೇರುತ್ತಿರುವ ಬಗ್ಗೆ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ವಿವರಿಸಲಾಯಿತು. ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ತ್ಯಾಜ್ಯ ನೀರು ನದಿ, ಕೆರೆ ಸೇರುತ್ತಿರುವ ಬಗ್ಗೆ ವಿವರಿಸಿ, ಕಳವಳ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಇನ್ನು ಮುಂದೆ ತ್ಯಾಜ್ಯ ನೀರು ನದಿ ಹಾಗೂ ಕೆರೆ ಸೇರದಂತೆ ಯೋಜನೆ ಸಿದ್ಧಪಡಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಆದೇಶ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಆಶಾದ್ ಉರ್ ರೆಹಮಾನ್ ಷರೀಫ್ ಅವರು 2050ಕ್ಕೆ ಮೈಸೂರು ನಗರದ ಅಭಿವೃದ್ಧಿ ದೃಷ್ಟಿ ಇಟ್ಟುಕೊಂಡು ಯೋಜನೆ ಸಿದ್ಧಪಡಿಸಿದ್ದಾರೆ. ಈ ಯೋಜನೆಯ ಪ್ರಸ್ತಾವನೆಗೆ ಸರ್ಕಾರದಿಂದ ಅನುಮತಿ ದೊರೆತ ನಂತರ ಸಮಗ್ರ ಯೋಜನಾ ವರದಿ ತಯಾರಿಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕಾವೇರಿ ಹಾಗೂ ಕಬಿನಿ ನದಿಯಿಂದ ಮೈಸೂರು ನಗರಕ್ಕೆ ಈಗ 300 ಎಂಎಲ್‌ಡಿ ನೀರು ಪೂರೈಕೆ ಆಗುತ್ತಿದೆ. ಇದು ಬಳಕೆಯಾದ ನಂತರ ಬಹುತೇಕ ಅಷ್ಟೇ ಪ್ರಮಾಣದ ತ್ಯಾಜ್ಯ ನೀರು ಹೊರ ಬರುತ್ತದೆ.

ಹಾಗಾಗಿ ಭಾರೀ ಸಾಮರ್ಥ್ಯದ ನೀರು ಸಂಸ್ಕರಣಾ ಘಟಕವಿರಬೇಕು. ಆದರೆ ಮೈಸೂರು ನಗರದ ರಾಯನಕೆರೆ, ಸುಯೇಜ್ ಫಾರಂ, ಕೆಸರೆ ಹಾಗೂ ಹಂಚ್ಯಾದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ 180 ಎಂಎಲ್‌ಡಿ ನೀರನ್ನಷ್ಟೇ ಸಂಸ್ಕರಣೆ ಮಾಡುವ ಸಾಮರ್ಥ್ಯ ಹೊಂದಿದೆ. ಉಳಿದ 120 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸೇರದೆ ನದಿ ಹಾಗೂ ಕೆರೆ-ಕಟ್ಟೆ ಸೇರುತ್ತಿದೆ.

ಈ ಹಿನ್ನೆಲೆಯಲ್ಲಿ 2050ರವರೆಗೆ ಮೈಸೂರು ನಗರದ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು 300 ಎಂಎಲ್‌ಡಿಗೂ ಹೆಚ್ಚಿನ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಸ್ಥಾಪನೆ ಮಾಡಲು ಯೋಜನೆ ಸಿದ್ಧಪಡಿಸಲಾಗುತ್ತಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು 570 ಕೋಟಿಯಿಂದ 600 ಕೋಟಿ ಆಗಬಹುದು ಎಂದು ಅಂದಾಜಿಸಲಾಗಿದೆ.

ಈಗಾಗಲೇ ಕೆಸರೆಯಲ್ಲಿ 45 ಎಂಎಲ್‌ಡಿ, ರಾಯನ ಕೆರೆಯಲ್ಲಿ 60 ಎಂಎಲ್ ಡಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿವೆ. ಇದನ್ನು ಮೇಲ್ದರ್ಜೆಗೇರಿಸಿ, ಅಲ್ಲೇ ಹೊಸದಾಗಿ ತಲಾ ಒಂದೊಂದು ಘಟಕ ನಿರ್ಮಾಣ ಮಾಡಲು ಯೋಜಿಸಲಾಗಿದೆ. ಹಂಚ್ಯಾದಲ್ಲಿ 14 ಎಕರೆ ಜಾಗವಿದ್ದು, ಅಲ್ಲಿ ನಗರದ ಪೂರ್ವ ಭಾಗದ ತ್ಯಾಜ್ಯ ನೀರು ಸಂಸ್ಕರಣೆ ಮಾಡಲು ನಿರ್ಧರಿಸಲಾಗಿದೆ.


ಸಂಸ್ಕರಣಾ ನಂತರ ಟ್ರಂಕ್ ಮೈನ್ ಲೈನ್ ಮೂಲಕ ದೇವನೂರು ಕೆರೆ, ಹೆಬ್ಬಾಳು ಕೆರೆ, ರಾಯನಕೆರೆ, ಸುಯೇಜ್ ಫಾರಂ ಸೇರಿದಂತೆ ಇತರೆ ಕೆರೆಗಳಿಗೆ ಹರಿಸಲು ಯೋಜಿಸಲಾಗಿದೆ. ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ಕೂಡ ಈ ಯೋಜನೆಗೆ ಒತ್ತಾಸೆಯಾಗಿ ನಿಲ್ಲುತ್ತಿದೆ.

ನಗರ ಪಾಲಿಕೆ ಸಿದ್ಧಪಡಿಸಿರುವ ಯೋಜನೆ ಅನುಷ್ಠಾನಗೊಂಡರೆ ಮಲೀನ ನೀರು, ನದಿ ಹಾಗೂ ಕೆರೆ-ಕಟ್ಟೆ ಸೇರುವುದು ತಪ್ಪುತ್ತದೆ. ಇದರಿಂದ ಕೆರೆಗಳಲ್ಲಿ ಜಲಚರ ಹಾಗೂ ಪ್ರಾಣಿ-ಪಕ್ಷಿಗಳ ರಕ್ಷಣೆಯೂ ಆಗುತ್ತದೆ. ಪ್ರಗತಿ ಪರಿಶೀಲನಾ ಸಭೆ ನಡೆದು, ತಿಂಗಳಲ್ಲೇ ಅಧಿಕಾರಿಗಳು ಮುತುವರ್ಜಿ ವಹಿಸಿ ಈಗ ಯೋಜನೆ ಸಿದ್ಧಪಡಿಸಿದ್ದಾರೆ.

ಈ ಪ್ರಸ್ತಾವನೆಯನ್ನು ಪಾಲಿಕೆ ಸರ್ಕಾರಕ್ಕೆ ಇನ್ನಷ್ಟೇ ಸಲ್ಲಿಸಬೇಕಿದೆ. ಸರ್ಕಾರ ಅನುಮೋದನೆ ನೀಡಿದ ನಂತರ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲು ಟೆಂಡರ್ ಕರೆಯಬೇಕಿದೆ. ಡಿಪಿಆರ್ ಸಿದ್ಧಪಡಿಸಿದ ನಂತರ ಸರ್ಕಾರದಿಂದ ಹಣ ಬಿಡುಗಡೆಯಾಗಿ ಕಾಮಗಾರಿಗೆ ಟೆಂಡರ್ ಕರೆಯಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ತವರು ಜಿಲ್ಲೆಯ ಸಾಂಸ್ಕೃತಿಕ ನಗರದ ಅಭಿವೃದ್ಧಿಗೆ ಗ್ರೀನ್ ಸಿಗ್ನಲ್ ನೀಡುತ್ತಾರೆ ಎಂಬ ನಿರೀಕ್ಷೆಯೂ ಇದೆ.

> “ಮೈಸೂರು ನಗರದ ಮುಂದಿನ 25 ವರ್ಷಗಳ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಯೋಜನೆ ರೂಪಿಸಲಾಗಿದೆ. ನಮ್ಮ ಮುಂದಿನ ಪೀಳಿಗೆಗೆ ಯಾವುದೇ ರೀತಿಯ ಪರಿಸರ ಮಾಲಿನ್ಯವಾಗದಂತೆ ದೂರ ದೃಷ್ಟಿಯ ಯೋಜನೆ ಇದು. ಈಗಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಮೇಲ್ದರ್ಜೆಗೇರಿಸುವುದರ ಜೊತೆ ಜೊತೆಗೆ ಹೊಸ ಘಟಕವನ್ನು ನಿರ್ಮಾಣ ಮಾಡಲಾಗುತ್ತಿದೆ. ಯೋಜನೆ ಸಿದ್ಧಪಡಿಸಿದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕ ತನ್ವೀರ್ ಸೇಠ್ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಸರ್ಕಾರದಿಂದ ಹಸಿರು ನಿಶಾನೆ ದೊರೆತ ನಂತರ ಯೋಜನೆ ಅನುಷ್ಠಾನ ಮಾಡಲಾಗುವುದು. ನದಿ ಹಾಗೂ ಕೆರೆ-ಕಟ್ಟೆಯ ನೀರು ಮಲೀನವಾಗುವುದನ್ನು ತಡೆಯಲು ಈ ಯೋಜನೆ ಅನಿವಾರ್ಯವಾಗಿದೆ. ಇದರಿಂದ ಪರಿಸರ ಮಾಲಿನ್ಯ ತಡೆಯಬಹುದಾಗಿದೆ.
> –ಆಶಾದ್ ಉರ್ ರೆಹಮಾನ್ ಷರೀಫ್, ಮೈಸೂರು ನಗರ ಪಾಲಿಕೆ ಆಯುಕ್ತ





ಮಕ್ಕಳ ಚಿತ್ರಕಥೆ

‘ವ್ಯರ್ಥವಾಗಿ ಶ್ರಮವನ್ನೇಕೆ ಹಾಕುತ್ತಿದ್ದೀಯಾ...?’


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199



ಒಮ್ಮೆ ದೇವತೆಗಳ ರಾಜನಾದ ಇಂದ್ರನು ಯಾಕೋ ರೈತರ ಮೇಲೆ ಸಿಟ್ಟು ಮಾಡಿಕೊಂಡು,"ಇನ್ನು 12 ವರ್ಷಗಳ ಕಾಲ ಮಳೆ ಸುರಿಸುವುದಿಲ್ಲ...... ಇಲ್ಲಿ ಬಿತ್ತನೆ ಮಾಡಿದರೂ ಬೆಳೆಯುವುದಿಲ್ಲ...!" ಎಂದು ಶಪಿಸಿಬಿಟ್ಟನು. ರೈತರು ಇಂದ್ರನನ್ನು ಪರಿಪರಿಯಾಗಿ ಬೇಡಿಕೊಂಡರು. ಕನಿಕರಗೊಂಡ ಇಂದ್ರ ಆಗ, ದೇವ ಶಿವನು ತನ್ನ ಡಮರುಗವನ್ನು ಬಾರಿಸಿದರೆ ಮಾತ್ರ ಶಾಪ ವಿಮೋಚನೆಯಾಗುವುದು....!" ಎಂದ.



ತಕ್ಷಣ ಶಿವನ ಬಳಿ ಇಂದ್ರ ತಾನೇ ಹೋಗಿ, ರೈತರ ಬೇಡಿಕೆಗೆ ಮಣಿದು ಡಮರುಗವನ್ನು ಬಾರಿಸಬಾರದೆಂದು ವಿನಂತಿಸಿ, ಒಪ್ಪಿಸಿಯೂಬಿಟ್ಟ. ಹಾಗಾಗಿ ರೈತರು ಶಿವನ ಬಳಿ ಹೋಗಿ, ಬೇಡಿಕೊಂಡಾಗ ಶಿವನೂ ತನ್ನ ಅಸಹಾಯಕತೆ ವ್ಯಕ್ತಪಡಿಸಿ, ಇನ್ನು 12 ವರ್ಷಗಳ ನಂತರವೇ ಡಮರುಗ ಬಾರಿಸುವುದಾಗಿ ಹೇಳಿಬಿಟ್ಟ.



ದಿಕ್ಕು ತೋಚದ ರೈತರು 12 ವರ್ಷ ಕಾಯುವುದೆಂದು ನಿರ್ಧರಿಸಿಕೊಂಡು ಸುಮ್ಮನಿದ್ದುಬಿಟ್ಟರು. ಆದರೆ ಒಬ್ಬ ರೈತ ಮಾತ್ರ ಪ್ರತಿ ವರ್ಷ ತಪ್ಪದೇ ಭೂಮಿ ಉಳುತ್ತಿದ್ದ. ಬಿತ್ತನೆ ಮಾಡುತ್ತಿದ್ದ, ಗೊಬ್ಬರ ಹಾಕುತ್ತಿದ್ದ ಆದರೆ ಬೆಳೆ ಬರುತ್ತಿರಲಿಲ್ಲ. ಮೂರು ವರ್ಷಗಳು ಸತತ ಹೀಗೆ ನಡೆದಾಗ ಉಳಿದ ರೈತರು ಇವನನ್ನು ತಮಾಷೆ ಮಾಡತೊಡಗಿದರು. ಹಾಗೆ ಅವನನ್ನು ಕೇಳಿಯೇಬಿಟ್ಟರು "12 ವರ್ಷ ಮಳೆಯು ಬರುವುದಿಲ್ಲ... ಬೆಳೆಯೂ ಬೆಳೆಯುವುದಿಲ್ಲ...ಎಂದು ಗೊತ್ತಿದ್ದರೂ ನೀನು ವ್ಯರ್ಥವಾಗಿ ಶ್ರಮವನ್ನೇಕೆ ಹಾಕುತ್ತಿದ್ದೀಯಾ...?" ಎಂದು.



ಅದಕ್ಕೆ ರೈತ, "ಮಳೆ-ಬೆಳೆ ಬರುವುದಿಲ್ಲ ಎಂದು ನನಗೂ ಗೊತ್ತಿದೆ.... ಆದರೂ ಇದನ್ನೆಲ್ಲಾ ಮಾಡುತ್ತಿರುವುದು, ಉತ್ತನೆ, ಬಿತ್ತನೆಯ ಅಭ್ಯಾಸ ಇರಲಿ ಎಂಬ ಕಾರಣಕ್ಕಾಗಿ... 12 ವರ್ಷಗಳ ನಂತರ ಮಳೆ ಬಂದು, ಎಲ್ಲಾ ಸರಿಯಾದಾಗ, ನಾನು ಕೆಲಸವನ್ನೇ ಮರೆತು, ಅಭ್ಯಾಸವಿಲ್ಲದೆ ಸೋಮಾರಿಯಾಗಿರಬಾರದೆಂದು.... ಹೀಗೆ ಮಾಡುತ್ತಿದ್ದೇನೆ..!" ಎಂದು ಮಾರ್ಮಿಕವಾಗಿ ಉತ್ತರಿಸಿದ.



ಈ ಮಾತನ್ನು ಕೇಳಿದ ಪಾರ್ವತಿ ದೇವಿಗೆ ತೀವ್ರ ಸಂತೋಷವಾಗಿ ಶಿವನ ಬಳಿ ತೆರಳಿ, "12 ವರ್ಷಗಳ ಕಾಲ ನೀನು ಢಮರುಗ ಬಾರಿಸದಿದ್ದರೆ.... ನೀನೂ ಅದನ್ನು ಮರೆತುಬಿಟ್ಟರೆ ಗತಿಯೇನು...". ಎಂದು ಕೇಳಿದಳು. ಅದಲ್ಲೇ ಶಿವನು ಯೋಚಿಸಿನೋಡಿ ಕುತೂಹಲದಿಂದ ಕೂಡಲೇ ಢಮರುಗವನ್ನು ಬಾರಿಸಲು ಆರಂಭಿಸಿಬಿಟ್ಟ.



ತಕ್ಷಣ ದೇವೇಂದ್ರನ ಮಾತಿನಂತೆ ಮಳೆಯೂ ಆಯಿತು. ಈ ರೈತನೊಬ್ಬ ಮಾತ್ರ ಬಿತ್ತಿದ್ದರಿಂದ. ಅವನೊಬ್ಬನಿಗೆ ಮಾತ್ರ ಬೆಳೆ ಬಂತು. ಇವನನ್ನು ನೋಡಿ ಉಳಿದ ರೈತರೆಲ್ಲರೂ ನಿರಾಶರಾಗಿ ತಾವೂ ಉತ್ತು,ಬಿತ್ತನೆ ಮಾಡಬೇಕಿತ್ತೆಂದು ಪರಿತಪಿಸಿಕೊಂಡರು.

ನೀತಿ:– ಒಳ್ಳೆಯ ಬದುಕು ಬೇಕೆಂದರೆ ಅದಕ್ಕೆ ಒಳ್ಳೆಯ ಅಭ್ಯಾಸಗಳಿರಲೇಬೇಕು. ಸ್ನೇಹಿತರೇ ನಾವು ಮಾತ್ರ ನಮ್ಮ ಕೆಲಸದ ಅಭ್ಯಾಸಗಳನ್ನು, ಕೌಶಲ್ಯಗಳನ್ನು, ಸಾಮರ್ಥ್ಯವನ್ನೂ, ವೃತ್ತಿ ತಿಳುವಳಿಕೆಯನ್ನು ಹೆಚ್ಚಿಕೊಳ್ಳುತ್ತಿರೋಣ. ಈ ಕಥೆಯಲ್ಲಿ ರೈತರು ಮಳೆ ಬರಲಿ ಆಮೇಲೆ ನೋಡೋಣಾ....! ಎಂದಂತೆ ನಾವೂ ಆಮೇಲೆ ನೋಡಿದರಾಯಿತು... ಎನ್ನುವುದು ಬೇಡ. ಇಂದಿನಿಂದಲೇ ನಮ್ಮ ಕೌಶಲ್ಯಗಳು, ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾ ಮುಂಬರುವ ಸವಾಲುಗಳನ್ನು ಎದುರಿಸಲು ಸಿದ್ದರಾಗೋಣಾ.



ವಾರಭವಿಷ್ಯ

3.12.2023 ರಿಂದ 9.12.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ವೃಶ್ಚಿಕ, ಚಂದ್ರ–ಕಟಕ, ಸಿಂಹ, ಕುಜ–ವೃಶ್ಚಿಕ, ಬುಧ–ಧನುಸ್ಸು, ಗುರು–ಮೇಷ, ಶುಕ್ರ–ತುಲಾ, ಶನಿ–ಕುಂಭ, ರಾಹು–ಮೀನ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆದಿಗೆ ಹಿರಿಯರ ಆದರ್ಶದಲ್ಲಿ ಸಾಗುವುದರಿಂದ ಸಮಾಜದಲ್ಲಿ ಜನಾದರಕ್ಕೆ ಭಾಜನರಾಗುವಿರಿ. ನಿಮ್ಮ ಹಿತ ಚಿಂತಕರ ನೆರವು ನಿಮ್ಮ ಉನ್ನತಿಗೆ ಸಹಕಾರವಾಗಲಿದೆ. ಟ್ರಾವೆಲ್ ಏಜೆನ್ಸಿಗಳಿಗೆ ಪುಣ್ಯಕ್ಷೇತ್ರ ಪ್ರಯಾಣಗಳಿಂದ ಅಧಿಕ ಧನಲಾಭವಾಗುವುದು. ಸಾಲ ಮರುಪಾವತಿಯಿಂದ ಋಣ ಮುಕ್ತರಾಗುವಿರಿ. ಗಹನ ವಿಚಾರವೊಂದರಲ್ಲಿ ನೆರವು ದೊರೆತು ಸಮಸ್ಯೆ ಪರಿಹಾರವಾಗುವುದು. ವಿಷಾಹಾರದಿಂದ ತೊಂದರೆ.
ಶ್ರೀ ಕಾರ್ತಿಕೇಯ ಪೂಜೆ. ಶುಭ ಸಂಖ್ಯೆ–5.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಹಣಕಾಸಿನ ವಿಷಯದಲ್ಲಿ ಗಣನೀಯ ಸುಧಾರಣೆ ಕಂಡು ಬಂದರೂ, ದುಂದು ವೆಚ್ಚಗಳನ್ನು ನಿಯಂತ್ರಿಸಲಾಗದು. ಅನಗತ್ಯ ಖರ್ಚುಗಳನ್ನು ಅವಾಯ್ಡ್ ಮಾಡುವುದು ಜಾಣತನ. ಸ್ತ್ರೀಯರು ಶಾಪಿಂಗ್ ಪ್ರಿಯರಾಗುವರು. ಆಫೀಸ್‌ನಲ್ಲಿ ಸಹೋದ್ಯೋಗಿಗಳಲ್ಲಿ ಹೊಂದಾಣಿಕೆ ಇರದು. ಫ್ಯಾನ್ಸಿ ಸ್ಟೋರ್, ಉಡುಗೊರೆ ವಸ್ತು ವ್ಯಾಪಾರಗಳು ಭರಾಟೆಯಿಂದ ಸಾಗುವುದು. ಖಯ್ಯಾಲಿ ಪ್ರಯಾಣಗಳನ್ನು ಮಾಡದಿರಿ.
ಶ್ರೀದೇವಿಸ್ತುತಿ. ಶುಭ ಸಂಖ್ಯೆ–6.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

'ಕಬ್ಬಿಣ ಕಾದಾಗ ತಟ್ಟಿಕೋ' ಎಂಬ ನಾಣ್ನುಡಿಯಂತೆ ಮಹತ್ವದ ಕೆಲಸ ಕಾರ್ಯಗಳನ್ನು ಆದ್ಯತೆಯ ಆಧಾರದ ಮೇಲೆ ಪೂರ್ಣಗೊಳಿಸಿಕೊಳ್ಳಲು ಗುರುಗ್ರಹದ ಸಹಾಯವಿದೆ. ಇಷ್ಟಪಟ್ಟ ವಸ್ತುಗಳನ್ನು ಪಡೆದುಕೊಳ್ಳುವಿರಿ. ವಧು–ವರಾನ್ವೇಷಣೆ ಸಫಲತೆಯ ಪಥದಲ್ಲಿ ಸಾಗುವುದು. ಚಿನ್ನಾಭರಣ ವ್ಯಾಪಾರಿಗಳಿಗೆ ಹೇರಳ ಧನಲಾಭವಾಗಲಿದೆ. ಉದ್ಯೋಗಾಕಾಂಕ್ಷಿಗಳಿಗೆ ಶುಭ ವಾರ್ತೆ ಬರಲಿದೆ.
ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ–9.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಈ ಸಪ್ತಾಹದಲ್ಲಿ ನಿಮ್ಮ ರಾಶ್ಯಾಧಿಪತಿ ಚಂದ್ರ ನಿಮ್ಮ ಸಕಲ ಕಾರ್ಯಭಾರಗಳಲ್ಲಿ ಧೈರ್ಯವನ್ನೂ, ಸಫಲತೆಯನ್ನೂ ತುಂಬಲಿದ್ದಾನೆ. ಸಾಮಾಜಿಕವಾಗಿ ಗೌರವ ಪ್ರತಿಷ್ಠೆಗಳನ್ನು ಸಂಪಾದಿಸಲಿದ್ದೀರಿ. ಸಂಬಂಧಿಕರೊಂದಿಗೆ ಪ್ರಮುಖ ವಿಷಯಗಳನ್ನು ಚರ್ಚಿಸಲಿದ್ದೀರಿ. ಹೊಸ ಭೂಮಿ, ವಾಹನ ಖರೀದಿಯ ಪ್ರಯತ್ನಗಳು ಫಲ ನೀಡುತ್ತವೆ. ವಾರದ ಕಡೆಗೆ ಬಾಲ್ಯದ ಗೆಳೆಯರ ಭೇಟಿಯಿಂದ ಮನಸ್ಸಂತೋಷ. ಹಠಾತ್ ಪ್ರಯಾಣದ ಸೂಚನೆಗಳಿವೆ. ಶ್ರೀಆಂಜನೇಯ ದರ್ಶನ. ಶುಭ ಸಂಖ್ಯೆ–4.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ನಿಮ್ಮ ರಾಶಿಯಲ್ಲಿ ಚಂದ್ರ ಪ್ರಯಾಣದಿಂದ ಮೈಮನಗಳಲ್ಲಿ ಸಂತಸದ ಸಂಚಲನವಾಗಲಿದೆ. ಸುವರ್ಣ, ರಜತ ವ್ಯಾಪಾರಿಗಳಿಗೆ ಉತ್ತಮ ರೀತಿಯಲ್ಲಿ ಧನ ಲಾಭವಾಗಲಿದೆ. ವಿದ್ಯಾ ಪ್ರಸಂಗಗಳಲ್ಲಿ ಪ್ರಶಸ್ತಿ, ಪದಕಗಳು ದೊರೆಯುವ ಸಂಭವವಿದೆ. ಸಪ್ತಮ ಭಾವದಲ್ಲಿ ಶನಿದೇವ ಸಂಚಾರವಿದ್ದು, ಪಾಲುದಾರಿಕೆ ವ್ಯವಹಾರದಲ್ಲಿ ಒಮ್ಮತದ ಕೊರತೆಯಿಂದ ನಷ್ಟವಾಗಲಿದೆ. ಅನ್ಯ ಸ್ತ್ರೀಯರನ್ನು ಗೌರವದಿಂದ ಕಾಣಿ.
ಶ್ರೀರವ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ನೆಗೆಟೀವ್ ಚಿಂತನೆಗಳನ್ನು ಬಿಟ್ಟು ಪಾಸಿಟೀವ್ ದೃಷ್ಟಿಯಿಂದ ಚಿಂತಿಸಿದರೆ ಉನ್ನತಿಯ ದಾರಿ ತಾನಾಗಿಯೇ ತೆರೆದುಕೊಳ್ಳಲಿದೆ. ಬಯಸಿದ್ದು ದೊರೆಯದಿದ್ದಾಗ ಸಿಕ್ಕಿದ್ದನ್ನೇ 'ಪಾಲಿಗೆ ಬಂದದ್ದು ಪಂಚಾಮೃತ' ಎಂಬ ಗಾದೆ ಮಾತು ನೆನಪಿಸಿಕೊಳ್ಳಿ. ವಾರಾಂತ್ಯಕ್ಕೆ ಸಹೃದಯರ ಸಹಾಯ ಸಹಕಾರಗಳಿಂದ ನನೆಗುದಿಗೆ ಬಿದ್ದಿದ್ದ ಕೆಲಸಗಳು ಪೂರ್ಣವಾಗುವುದು. ರಾಹು–ಕೇತು ಶುಭರಿಲ್ಲ. ದುರಾಚಾರಿಗಳ ಸಹವಾಸದಿಂದ ದೂರವಿರಿ.
ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–2.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ವಾರದಲ್ಲಿ ನಿಮ್ಮ ಪ್ರಯತ್ನ ಬಲವೂ, ಬೃಹಸ್ಪತಿಯ ಅನುಗ್ರಹವೂ ಸೇರಿ ಅನಿರೀಕ್ಷಿತ ಸಂತಸದ ಸುದ್ದಿಯೊಂದು ಬರಲಿದೆ. ವೃತ್ತಿ ರಂಗದಲ್ಲಿ ಉತ್ತಮ ಅಭಿವೃದ್ಧಿಯನ್ನು ಕಾಣುವಿರಿ. ವಿದ್ವಜ್ಜನರ ಮಾರ್ಗದರ್ಶನ ದೊರೆತು ಸಾಮಾಜಿಕವಾಗಿ ಗೌರವಾದರಗಳನ್ನು ಸಂಪಾದಿಸಲಿದ್ದೀರಿ. ಗೃಹ ನಿರ್ಮಾಣ ಪ್ರಯತ್ನಗಳಿಗೆ ಗುರುಬಲವಿದೆ. ಎಲ್ಲಾ ಕ್ಷೇತ್ರಗಳಲ್ಲೂ ಉತ್ಸಾಹದಿಂದ ಮುನ್ನಡೆಯುವಿರಿ.
ಶ್ರೀ ಕಾಲಭೈರವಾಷ್ಟಕ ಪಠಿಸಿ. ಶುಭ ಸಂಖ್ಯೆ–8.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದ ಆದಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಕೊಂಚ ಸುಧಾರಣೆಯನ್ನು ಕಾಣುವಿರಿ. ಒಳ್ಳೆಯ ಸುದ್ದಿಯೂ ಬರುವುದು. ಕೆಲವು ಬಾರಿ ದುಡುಕು ಬುದ್ಧಿಯಿಂದ ಅನರ್ಥಗಳು ಉಂಟಾಗಲಿದೆ. ಭೂಮಿಗೆ ಸಂಬಂಧಿಸಿದ ಖರೀದಿಗಳು ಮತ್ತು ಮಾರಾಟಗಳು ಅಪೂರ್ಣವಾಗಿ ನಿಲ್ಲುತ್ತವೆ. ಬಂಧು–ಮಿತ್ರರೊಡನೆ ವಿವಾದಗಳು ಉಂಟಾಗುತ್ತವೆ. ಮನೆ ನಿರ್ಮಾಣ ಕೆಲಸದಲ್ಲಿ ಕಂಟ್ರಾಕ್ಟರಿಂದ ಅಸಹಕಾರ ಎದುರಿಸಬೇಕಾದೀತು.
ಶ್ರೀ ಸುಬ್ರಹ್ಮಣ್ಯಸ್ವಾಮಿಗೆ ಕ್ಷೀರಾಭಿಷೇಕ. ಶುಭ ಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆದಿಗೆ ಮನೋವಾಂಛಿತ ಫಲ ಸಿದ್ಧಿಯನ್ನು ಕಾಣುವಿರಿ. ಹಣಕಾಸಿನ ವಿಷಯದಲ್ಲಿ ಆಶಾದಾಯಕ ಬೆಳವಣಿಗೆಗಳು ಉಂಟು. ಐಹಿಕ, ಸುಖ, ಭೋಗಗಳನ್ನು ಅನುಭವಿಸುವಿರಿ. ಕೃಷಿ ಉತ್ಪನ್ನ ಹಾಗೂ ಪಶು ಆಹಾರ ವ್ಯಾಪಾರಗಳಿಂದ ಹಣ ಸಂಪಾದನೆಯಾಗುವುದು. ಕಷ್ಟಪಡುವುದರಿಂದಲೇ ಜಯವನ್ನು ಸಾಧಿಸಲಾಗುವುದಿಲ್ಲ. ಅದೃಷ್ಟವೂ ಇರಬೇಕು. ಆರೋಗ್ಯದಲ್ಲಿ ಸಣ್ಣಪುಟ್ಟ ಏರುಪೇರು ಉಂಟಾಗುವುದು.
ಶ್ರೀ ಶಕ್ತಿದೇವತೆ ಆರಾಧನೆ. ಶುಭ ಸಂಖ್ಯೆ–7.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಹೊಸ ವೃತ್ತಿ, ಉದ್ದಿಮೆಗಳ ಆರಂಭಕ್ಕೆ ಗ್ರಹಾನುಕೂಲವಿಲ್ಲ. ನಿಮ್ಮ ರಹಸ್ಯ ವಿಷಯಗಳು ಬಯಲಾಗಬಹುದು. ನಿಮ್ಮ ಒಟಿಪಿ ಯಾರಲ್ಲೂ ಹಂಚಿಕೊಳ್ಳಬೇಡಿ. ದುಂದು ವೆಚ್ಚಗಳಿಗೆ ಬ್ರೇಕ್ ಹಾಕದಿದ್ದರೆ ವಾರಾಂತ್ಯದಲ್ಲಿ ಪರದಾಡುವಿರಿ. ಇತರರ ಪರೋಪಕಾರ ಬುದ್ಧಿಯನ್ನು ಪ್ರಶಂಸಿಸಿ, ಆಧ್ಯಾತ್ಮಿಕ ಸೇವಾ ಕಾರ್ಯಗಳಲ್ಲಿ ಭಾಗವಹಿಸುತ್ತೀರಿ. ವಾರದ ಕಡೆಗೆ ಸಣ್ಣ ಆರೋಗ್ಯ ಸಮಸ್ಯೆ ಉಂಟಾದೀತು.
ಶ್ರೀ ಶನಿಸ್ತೋತ್ರ ಪಠಿಸಿ. ಶುಭ ಸಂಖ್ಯೆ–4.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಜನ್ಮಸ್ಥ ಶನಿದೇವನಿರುವ ಕಾರಣ ನೀವು ತುಂಬಾ ಎಮೋಷನಲ್ ಆದರೆ ಪ್ರಮೋಷನಲ್ ವಿಷಯಗಳು ಕುಂದುತ್ತವೆ. ನಿಮ್ಮ ಉತ್ತಮ ಆಲೋಚನೆಗಳನ್ನು ನಿಮ್ಮ ಅಭಿವೃದ್ಧಿಗೆ ಪೂರಕವಾಗಿ ಬಳಸಿಕೊಳ್ಳಿ. ಗುರುಜನರ ಭೇಟಿಯಿಂದ ನಿಮ್ಮ ಆತ್ಮವಿಶ್ವಾಸ ವೃದ್ಧಿಸಲಿದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ–ನಷ್ಟಗಳು ಸಮನಾಗಿ ನಡೆಯುವುದು. ಸತಿ–ಪತಿಯರು ಪರಸ್ಪರ ಸೋತು ಗೆದ್ದರೆ ಸಂತಸದ ಬೆಳದಿಂಗಳು ಬರುವುದು.
ಶ್ರೀ ಸುದರ್ಶನ ಚಕ್ರ ಮಂತ್ರ ಪಠಿಸಿ. ಶುಭ ಸಂಖ್ಯೆ–5

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಶುಭ ವಾರ್ತೆ ಬಂದು ಮನಸ್ಸನ್ನು ಪ್ರಫುಲ್ಲಗೊಳಿಸುತ್ತದೆ. ಸತ್ಕಾರ್ಯವನ್ನು ಮಾಡುವುದರಿಂದ ನೆರೆಹೊರೆಯಲ್ಲಿ ಪ್ರಶಂಸೆಗೆ ಪಾತ್ರರಾಗುವಿರಿ. ಸಾಹಿತಿಗಳಿಗೆ ಸೃಜನಶೀಲರಿಗೆ ಸರ್ಕಾರದಿಂದ ಪ್ರಶಸ್ತಿಯ ಗರಿಮೆ–ಹಿರಿಮೆಗಳು ದೊರೆಯಲಿದೆ. ಹೊಸ ವ್ಯಾಪಾರ ವ್ಯವಹಾರ ಆರಂಭಿಸಲು ಗ್ರಹಾನುಕೂಲವಿದೆ. ರಾಹು–ಕೇತುಗಳು ಅಶುಭರಿದ್ದು ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ.
ಶ್ರೀ ಗುರ್ವಾಷ್ಟಕ ಪಠಿಸಿ. ಶುಭ ಸಂಖ್ಯೆ–8.

ಸರಗೂರಲ್ಲಿ 8.30 ಕೋ. ವೆಚ್ಚದಲ್ಲಿ ಬಸವ ಭವನ

● ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಅನುದಾನಕ್ಕೆ ಸಿಎಂಗೆ ಮನವಿ ● ಶಾಸಕರುಗಳಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್‌ಗೆ ಸನ್ಮಾನ



ಸರಗೂರು, ಡಿ.2– ಪಟ್ಟಣದಲ್ಲಿ 8.30 ಕೋಟಿ ರೂ. ವೆಚ್ಚದಲ್ಲಿ ಬಸವ ಭವನ ನಿರ್ಮಾಣ ಮಾಡಲು ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಮೂವರು ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುತ್ತೇವೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಶನಿವಾರ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕದಿಂದ ನೂತನ ಶಾಸಕರುಗಳಿಗೆ ಏರ್ಪಡಿಸಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಇತರೆ ಜನಾಂಗದ ಸಮುದಾಯ ಭವನಗಳಿವೆ. ಆದರೆ, ಬಸವ ಭವನ ಇಲ್ಲ. ಹೀಗಾಗಿ ವೀರಶೈವರು ಹೆಚ್ಚಿನ ಸಂಖ್ಯೆಯಲ್ಲಿರುವ ಸರಗೂರು ತಾಲೂಕು ಕೇಂದ್ರದಲ್ಲಿ ನಿರ್ಮಿಸುವುದು ತುಂಬಾ ಅವಶ್ಯಕವಾಗಿದ್ದು, ಇದಕ್ಕೆ 8.30 ಕೋಟಿ ರೂ. ಯೋಜನೆ ರೂಪಿಸಲಾಗಿದೆ. ರಾಜ್ಯ ಸರಕಾರ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಬಳಸುತ್ತಿದೆ. ಹೀಗಾಗಿ ಅನುದಾನಕ್ಕಾಗಿ ಸುತ್ತೂರು ಶ್ರೀಗಳ ನೆರವು ಪಡೆದುಕೊಂಡು ಸಿಎಂ ಅವರಲ್ಲಿ ಪ್ರಸ್ತಾವನೆ ಸಲ್ಲಿಸಲಾಗುವುದು" ಎಂದು ಅವರು ಹೇಳಿದರು.

ಕಾಯಕಯೋಗಿ ಬಸವಣ್ಣ ಅವರ ತತ್ವ, ಸಿದ್ಧಾಂತಗಳು, ಆದರ್ಶಗಳನ್ನು ಇಂದಿಗೂ ಅನುಸರಿಸಿಕೊಂಡು ಜೀವನ ನಡೆಸಲಾಗುತ್ತಿದೆ. ಅಲ್ಲದೆ ಶಾಸಕರು, ಸಚಿವರು ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುತ್ತಿದ್ದೇವೆ. 12ನೇ ಶತಮಾನದಲ್ಲಿಯೇ ಅನುಭವ ಮಂಟಪ ನಿರ್ಮಿಸಿದ್ದರು. ಮಠಗಳು ಅಕ್ಷರ ದಾಸೋಹ, ಅನ್ನ ದಾಸೋಹಕ್ಕೆ ಹೆಸರುವಾಸಿಯಾಗಿವೆ. ಹೀಗಾಗಿ ಭವನ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಸರಗೂರು ಪಟ್ಟಣದಲ್ಲಿ ಬಸವ ಭವನ ನಿರ್ಮಾಣಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು. ಮಾಜಿ ಸಂಸದರಾದ ದಿ.ಆರ್.ಧ್ರುವನಾರಾಯಣ್ ಅವರು ಕ್ಷೇತ್ರದಲ್ಲಿ ಪಕ್ಷಾತೀತ, ಜಾತ್ಯಾತೀತವಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅದೇ ರೀತಿ ಮುಂದಿನ ಅಭಿವೃದ್ಧಿ ಕೆಲಸಗಳಿಗೆ ತಮ್ಮಗಳ ಸಹಕಾರ ಮುಖ್ಯ ಎಂದು ಅವರು ಹೇಳಿದರು.

ಗುಂಡ್ಲುಪೇಟೆ ಶಾಸಕ ಗಣೇಶ್‌ಪ್ರಸಾದ್ ಮಾತನಾಡಿ, ವೀರಶೈವ ಸಮಾಜದಲ್ಲಿ ಒಗ್ಗಟ್ಟಿನ ಕೊರತೆಯಿದ್ದು, ಸಮುದಾಯದವರು ಒಗ್ಗಟ್ಟಾಗಬೇಕು. ಸಿಎಂ ಸಿದ್ದರಾಮಯ್ಯ ಅವರು ಎಲ್ಲಾ ಸಮುದಾಯಗಳನ್ನು ಸಮಾನವಾಗಿ ಕಾಣಲಿದ್ದು, ಅನುದಾನ ನೀಡುವ ಭರವಸೆ ಇದೆ. ಹೀಗಾಗಿ ಎಲ್ಲರೂ ಸಮುದಾಯದ ಏಳಿಗೆಗಾಗಿ ಪಕ್ಷಾತೀತವಾಗಿ ದುಡಿಯೋಣ. ಇದಕ್ಕೆ ಸಹಕಾರ ನೀಡಲಿದ್ದೇನೆ ಎಂದು ತಿಳಿಸಿದರು.

ಹಂಚೀಪುರ ಸಿದ್ದಮಲ್ಲೇಶ್ವರ ಪಟ್ಟದ ಮಠದ ಚನ್ನಬಸವಸ್ವಾಮೀಜಿ, ದಡದಹಳ್ಳಿ ಗುರುಮಲ್ಲೇಶ್ವರ ಪಟ್ಟದ ಮಠದ ಷಡಕ್ಷರಿ ಸ್ವಾಮೀಜಿ, ಬಿಡುಗಲು ಪಡುವಲು ವಿರಕ್ತಮಠದ ಮಹದೇವ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಿದರು. ಇದೇ ಸಂದರ್ಭದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ಸಮಾಜದಲ್ಲಿ ಸೇವೆ ಸಲ್ಲಿಸಿದವರಿಗೂ ಸನ್ಮಾನಿಸಲಾಯಿತು.

ಮಹಾಸಭಾದ ತಾಲೂಕು ಅಧ್ಯಕ್ಷ ಡಿ.ಜಿ. ಶಿವರಾಜು ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಎಸ್.ಎಸ್.ಪ್ರಭುಸ್ವಾಮಿ, ಬಾಡಗ ಸಿದ್ದಪ್ಪ, ಮಾದಪ್ಪ, ಹಂಚೀಪುರ ಗುರುಸ್ವಾಮಿ, ಗಣಪತಿ, ಗುರುಸಿದ್ದಪ್ಪ ಮಹದೇವಸ್ವಾಮಿ, ಕೊತ್ತೇಗಾಲ ಶಿವಣ್ಣ, ಮಂಜುನಾಥ್, ಸಿ.ಕೆಗಿರೀಶ್, ಎಂ. ಕೆಂಡಗಣ್ಣಸ್ವಾಮಿ, ಮನುಗನಹಳ್ಳಿ ಗುರುಸ್ವಾಮಿ, ಶಂಕಳ್ಳಿ ನಂಜಪ್ಪ ಶಿವಪುರ ಜಯಕುಮಾರ್, ದಡದಹಳ್ಳಿ ಗುರುಸ್ವಾಮಿ, ಮಹೇಶ, ಸುನಂದರಾಜು, ಮಹಾಸಭಾದ ಪದಾಧಿಕಾರಿಗಳು, ಬಸವ ಬಳಗ, ಮಹಾಸಭಾದ ಯುವ ಘಟಕ, ಶರಣ ಸಾಹಿತ್ಯ ಪರಿಷತ್, ಮಹಿಳಾ ಘಟಕ, ಹಣಕಾಸು ಸಮಿತಿ ಪದಾಧಿಕಾರಿಗಳು ಸೇರಿದಂತೆ ವೀರಶೈವ ಸಮಾಜ ಮುಖಂಡರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತೇಜಸ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅನಾವರಣ (ಕ) 2 ಪ್ರದರ್ಶನಗಳು; ಗಾರುಡಿಗ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಅನಿಮಲ್ (ಹಿಂ)	2 ಪ್ರದರ್ಶನಗಳು
ರಾಜಕಮಲ್	
ಅನ್ನಪೂರ್ಣೆ (ತ)	4 ಪ್ರದರ್ಶನಗಳು
ಸಂಗಂ	
ಅನಿಮಲ್ (ಕ)	4 ಪ್ರದರ್ಶನಗಳು
ಲಿಡೋ	
ಶುಗರ್‌ಫ್ಯಾಕ್ಟರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗವಾನ್ ಕೇಸರಿ (ತೆ)	4 ಪ್ರದರ್ಶನಗಳು
ಪ್ರಭಾ	
ರಾಖಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶುಗರ್ ಫ್ಯಾಕ್ಟರಿ (ಕ): ಮ.1.25ಕ್ಕೆ, ಸಂ.4.15ಕ್ಕೆ, ನೆಪೋಲಿಯನ್ (ಇಂ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಬ್ಯಾಡ್ ಮ್ಯಾನರ್ಸ್ (ಕ): ಬೆ.10.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಕಾಥಲ್ ದಿ ಕೋರ್ (ಮ): ರಾ.9.55ಕ್ಕೆ.
ಸ್ಕ್ರೀನ್ 3	ಕಾಥಲ್ ದಿ ಕೋರ್ (ಮ): ಬೆ.10.45ಕ್ಕೆ, ಫರ್ರಿ (ಹಿಂ): ಮ.1.05ಕ್ಕೆ, ವಿಶ್ (3ಡಿ) (ಇಂ): ಮ.3.20ಕ್ಕೆ, ಸಂ.5.25ಕ್ಕೆ, ಸ್ವಾತಿ ಮುತ್ತಿನ ಮಳೆ ಹನಿಯೇ (ಕ): ರಾ.7.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ರಾ.9.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.20ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಮ.1.30ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.15ಕ್ಕೆ, ಮ.2.20ಕ್ಕೆ, ಸಂ.6.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.9.45ಕ್ಕೆ, ಮ.1.50ಕ್ಕೆ, ಸಂ.5.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.9.25ಕ್ಕೆ, ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.3.55ಕ್ಕೆ.
ಸ್ಕ್ರೀನ್ 4	ಅನಿಮಲ್ (ಹಿಂ): ಬೆ.8.05ಕ್ಕೆ, ಮ.12.10ಕ್ಕೆ, ಅರ್ಧಂ ಬರ್ಧ ಪ್ರೇಮ ಕಥೆ (ಕ): ಸಂ.4.15ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ರಾ.7.10ಕ್ಕೆ, ಪಾರ್ಕಿಂಗ್ (ತ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ದಿ ವೆಕೆಂಟ್ ಹೌಸ್ (ಕ): ಬೆ.11ಕ್ಕೆ, ಸಂ.4.10ಕ್ಕೆ, ರಾಜಯೋಗ (ಕ): ಮ.1.05ಕ್ಕೆ, ಸಂ.6.15ಕ್ಕೆ, ಟಗರುಪಲ್ಯ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10ಕ್ಕೆ, ಮ.1.15ಕ್ಕೆ, ರಾ.7.30ಕ್ಕೆ, ಟೈಗರ್ 3 (ಹಿಂ): ಸಂ.4.20ಕ್ಕೆ.
ಸ್ಕ್ರೀನ್ 3	ಟೈಗರ್ 3(ಹಿಂ): ಬೆ.11ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.3.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಟಗರುಪಲ್ಯ (ಕ): ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.50ಕ್ಕೆ, ಟೈಗರ್ 3 (ಹಿಂ): ಮ.1.05ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, 12th ಫೇಲ್ (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ನಂಜನಗೂಡು ತಾಲೂಕಿನ ಕಳಲೆ ಗ್ರಾಮದಲ್ಲಿರುವ ಶ್ರೀ ಲಕ್ಷ್ಮಿಕಾಂತ ಸ್ವಾಮಿ ದೇವಾಲಯದಲ್ಲಿ ಕಾರ್ತಿಕ ಮಾಸದ ಅಂಗವಾಗಿ ವಿಷ್ಣು ದೀಪೋತ್ಸವ ಮತ್ತು ಗಂಧದ ಪುಡಿ ಉತ್ಸವವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ದೇವಾಲಯದ ಪಾರು ಪತ್ತೆದಾರರಾದ ಜಯರಾಮ್, ಲಕ್ಷ್ಮಣಚಾರ್, ನರಸಿಂಹನ್, ವರದರಾಜನ್, ಸೇರಿದಂತೆ ಗ್ರಾಮಸ್ಥರು ಇದ್ದರು.

ಡಿ.6, ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ

ಹುಣಸೂರು, ಡಿ.2– ಮಹಾಮಾನವತಾವಾದಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನಾಚರಣೆಯನ್ನು ಡಿ.6ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಮಹಾರಾಜ ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಡಿ.ಜಿ.ಸಾಗರ್ ಬಣದ ಜಿಲ್ಲಾ ಸಂಘಟನಾ ಸಂಚಾಲಕ ಕೋಳಗಟ್ಟ ಕೃಷ್ಣ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದೆ.

ಶಾಸಕ ಜಿ.ಡಿ.ಹರೀಶ್ ಗೌಡರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಡಿ.ಜಿ.ಸಾಗರ್ ಬಣದ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಬನಹಳ್ಳಿ ವಹಿಸುವರು. ಮುಖ್ಯ ಭಾಷಣಕಾರರಾಗಿ ನಿವೃತ್ತ ಪ್ರಾಧ್ಯಾಪಕ ಹೆಚ್.ಆರ್.ಸಿದ್ದೇಗೌಡ, ಪ್ರಧಾನ ಭಾಷಣ ಮಾಡಲಿದ್ದಾರೆ.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಲು ಇಂಗ್ಲಿಷ್ ಶಿಕ್ಷಣ ಅಗತ್ಯ



ತಿ.ನರಸೀಪುರ, ಡಿ.2– ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಶೈಕ್ಷಣಿಕ ವಾಹಿನಿಯಲ್ಲಿ ಮುಂದುವರೆಸಲು ಇಂಗ್ಲಿಷ್ ಮೇಳದಂತಹ ಕಾರ್ಯ ಚಟುವಟಿಕೆಗಳು ಸಹಕಾರಿ ಎಂದು ಪ್ರಥಮ್ ಫೌಂಡೇಷನ್‌ನ ಮುಖ್ಯ ನಿರ್ವಹಣಾಧಿಕಾರಿ ಜಗದೀಶ್ ಅಭಿಪ್ರಾಯಪಟ್ಟರು.

ತಾಲೂಕಿನ ಚಿದರಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಕೊಳತೂರು ಶಾಲೆಯಲ್ಲಿ ಪ್ರಥಮ್ ಸಂಸ್ಥೆ, ಶಾಲಾ ಎಸ್ ಡಿಎಂಸಿ ಹಾಗೂ ಶಾಲಾ ಸಹಯೋಗದಲ್ಲಿ ಹಮ್ಮಿಕೊಂಡಿದ್ದ "ಇಂಗ್ಲಿಷ್ ಫೇರ್" ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂಗ್ಲಿಷ್ ವ್ಯಾಮೋಹದಿಂದ ಪೋಷಕರು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ. ಇದರಿಂದ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಕುಸಿಯುತ್ತಿದೆ, ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಸಿದಾಗ ಮಕ್ಕಳು ಶಾಲೆಯತ್ತ ಬರುತ್ತಾರೆ. ಇಂಗ್ಲೀಷ್ ಚಟುವಟಿಕೆಗಳು ಮಕ್ಕಳನ್ನು ಆಕರ್ಷಿಸುತ್ತವೆ. ಇದು ಕಲಿಕೆಗೆ ಸಹಕಾರಿ ಎಂದರು.

ಇಂಗ್ಲಿಷ್ ಮೇಳದಂತಹ ಚಟುವಟಿಕೆಗಳಿಂದ ಮಕ್ಕಳಲ್ಲಿ ಮಾತನಾಡಲು ಹಾಗೂ ಅಕ್ಷರಗಳನ್ನು ಜೋಡಿಸಿಕೊಂಡು ಸುಲಲಿತವಾಗಿ ಓದಲು ಅನುಕೂಲವಾಗುತ್ತದೆ. ವೇದಿಕೆಯಲ್ಲಿ ನಿಂತು ಮಾತನಾಡುವ ಆತ್ಮವಿಶ್ವಾಸ ಮೂಡುತ್ತದೆ. ತಿಂಗಳಲ್ಲಿ ಒಂದು ಗಂಟೆ ತರಗತಿ ಕೊಠಡಿಗಳಲ್ಲಿ ನಿರಂತರವಾಗಿ ಚಟುವಟಿಕೆ ಕೈಗೊಂಡಲ್ಲಿ ಇಂಗ್ಲೀಷ್ ಭಾಷಾ ಕಲಿಕೆ ಸುಲಭವಾಗುತ್ತದೆ.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಶೋಭಾ, ಸಿಆರ್‌ಪಿ ಶಿವಕುಮಾರ್ ಮಾತನಾಡಿ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಭಾಷಾ ಆಸಕ್ತಿ ಮೂಡಿಸಲು ಹಾಗೂ ಭಾಷಾ ಕಲಿಕಾವೃದ್ಧಿಸಲು ಬಹಳ ಪ್ರಯೋಜನಕಾರಿ. ಇಂತಹ ಕಾರ್ಯಕ್ರಮಗಳು ನಿರಂತರವಾಗಿರಬೇಕು ಎಂದರು.

ಗ್ರಾ.ಪಂ ಅಧ್ಯಕ್ಷ ರವಿಕುಮಾರ್, ಶಾಲೆಯ ಮುಖ್ಯ ಶಿಕ್ಷಕ ಸದಾನಂದ ಮೂರ್ತಿ, ಎಸ್ ಡಿಎಂಸಿ ಅಧ್ಯಕ್ಷ ಮರಿಸ್ವಾಮಿ, ಪ್ರೌಢಶಾಲಾ ಮುಖ್ಯ ಶಿಕ್ಷಕ ಜಗದೀಶ್, ಪ್ರಥಮ್ ಸಂಸ್ಥೆಯ ಸ್ವಯಂ ಸೇವಕರು, ಶಾಲಾ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಗ್ರಾಮಸ್ಥರು ಹಾಜರಿದ್ದರು.

ಸಾಲ ಪಡೆಯಲು ನಂಬಿಕೆ, ವಿಶ್ವಾಸ ಮುಖ್ಯ



ಹಿರೀಕ್ಯಾತನಹಳ್ಳಿ, ಡಿ.2– ಯಾವುದೇ ವ್ಯಕ್ತಿ ಸಾಲ ಪಡೆಯಬೇಕಾದರೆ ನಂಬಿಕೆ ಮತ್ತು ವಿಶ್ವಾಸ ಮುಖ್ಯವಾಗಿರಬೇಕೆಂದು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ತಾಲೂಕು ಯೋಜನಾಧಿಕಾರಿ ನಾರಾಯಣಶೆಟ್ಟಿ ಹೇಳಿದರು.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮಂಚಬಾಯನಹಳ್ಳಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಒಕ್ಕೂಟದ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ದಾನವಾಗಿ ಕೊಟ್ಟ ಹಣ, ಧರ್ಮವಾಗಿ ಕೊಟ್ಟ ಹಣವನ್ನು ಯಾರು ಮರು ಪಾವತಿಸುವುದಿಲ್ಲ. ಆದರೆ ಸಾಲದ ಹಣವನ್ನು ಯಾರೂ ಇಟ್ಟುಕೊಳ್ಳುವುದು ಸರಿಯಲ್ಲ. ಸಾಲ ಯಾವುದೇ ಸಂದರ್ಭದಲ್ಲಿ ಶೂಲವಾಗಿರಬಾರದು ಎಂದರು.

ಸಂಸ್ಥೆಯು ಕಳೆದ 41 ವರ್ಷಗಳಿಂದ ಸಾರ್ವಜನಿಕವಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ಆದರೆ ಹುಣಸೂರು ತಾಲೂಕಿನಲ್ಲಿ ಕಳೆದ 11 ವರ್ಷಗಳಿಂದ ಸೇವೆ ಸಲ್ಲಿಸುತ್ತಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ರಾಜ್ಯದ ಗ್ರಾಮೀಣ ಪ್ರದೇಶದ ಮಹಿಳೆಯರು, ಬಡವರು, ಮಧ್ಯಮ ವರ್ಗದವರನ್ನು ಆರ್ಥಿಕವಾಗಿ ಮೇಲೆತ್ತುವ ಕೆಲಸ ಮಾಡುತ್ತಿದೆ. ಇದಕ್ಕೆ ಕಾರಣ ಸ್ಥಳೀಯ ನಾಯಕರು ಹಾಗೂ ಮಹಿಳೆಯರು ನೀಡುವ ಸಹಕಾರ ಎಂದರು.

ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಇಂತಿಯಾಜ್, ಮಂಜುನಾಥ್, ಜಿಲ್ಲಾ ಜನಜಾಗೃತಿ ಸಮಿತಿ ಸದಸ್ಯ ವೆಂಕೋಬರಾವ್, ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ಮಂಚಮ್ಮ, ಒಕ್ಕೂಟದ ಅಧ್ಯಕ್ಷೆ ಅನಿತಾ, ಗ್ರಾಮದ ಯಜಮಾನ ರೇವಣ್ಣ, ವಲಯ ಮೇಲ್ವಿಚಾರಕ ಶಿವಕುಮಾರ್, ಸೇವಾ ಪ್ರತಿನಿಧಿಗಳಾದ ಮಹೇಶ್, ಶಶಿಕಲಾ, ರೇಷ್ಮಾ, ಶ್ವೇತ, ಹಾಗೂ ವಿವಿಧ ಸ್ವಸಹಾಯ ಸಂಘದ ಮಹಿಳೆಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾತೃಭಾಷೆ ವ್ಯಕ್ತಿತ್ವ ರೂಪಿಸುತ್ತದೆ



ನಂಜನಗೂಡು, ಡಿ.2– ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ, ಮಾತೃಭಾಷೆ ನಮ್ಮ ಸಂಸ್ಕೃತಿ, ಮೌಲ್ಯಗಳನ್ನು ಕಲಿಸಿ ವ್ಯಕ್ತಿತ್ವ ರೂಪಿಸುತ್ತದೆ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಕರ್ನಲ್ ವೈ.ಎಸ್.ಸಿದ್ದೇಗೌಡ ತಿಳಿಸಿದರು. ನಗರದ ಕೈಗಾರಿಕಾ ಪ್ರದೇಶದ ಜುಬಿಲೆಂಟ್ ಫಾರ್ಮೋವ ಕಂಪನಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸುತ್ತೂರು ಜೆಎಸ್.ಎಸ್. ಶಾಲೆಯ ಮುಖ್ಯೋಪಾಧ್ಯಾಯರಾದ ಮ.ಗು.ಬಸವಣ್ಣ ಮಾತನಾಡಿ, ಕನ್ನಡ ಸಂವೃದ್ಧ ಭಾಷೆ, ಸೋದರ ಭಾಷೆಯ ಜನರೊಂದಿಗೆ ಸಹಬಾಳ್ವೆ ನಡೆಸುವ ಮೂಲಕ ಕನ್ನಡಿಗರು ಉದಾರಿಗಳು ಎಂದು ಹೆಸರಾಗಿದ್ದಾರೆ, ಹೊರ ರಾಜ್ಯದಿಂದ ಬಂದು ಜೀವನ ರೂಪಿಸಿಕೊಳ್ಳುವ ಮಂದಿ ಈ ನೆಲದ ಭಾಷೆಯಾದ ಕನ್ನಡವನ್ನು ಕಲಿತು ಇಲ್ಲಿನ ಜನರೊಂದಿಗೆ ಒಂದಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಕಾರ್ಖಾನೆಯ ವ್ಯವಸ್ಥಾಪಕ ಸುಂದರ್ ಗಣೇಶ್, ಕಾರ್ಮಿಕ ಸಂಘದ ಅಧ್ಯಕ್ಷ ಕೆ.ಬಸವರಾಜ್, ಎ.ಸುಬ್ರಹ್ಮಣ್ಯ, ಪ್ರಶಾಂತ್ ಉಪಸ್ಥಿತರಿದ್ದರು.

ಬೆಟ್ಟದಪುರದಲ್ಲಿ ಸ್ವಚ್ಛತಾ ಕಾರ್ಯಕ್ರಮ



ಬೆಟ್ಟದಪುರ, ಡಿ.2– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಗ್ರಾಮ ಪಂಚಾಯತಿ ವತಿಯಿಂದ ಇಂದು ಗ್ರಾಮದಲ್ಲಿ ಸ್ವಚ್ಛ ಶನಿವಾರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಗ್ರಾಪಂ ಅಧ್ಯಕ್ಷ ಬಿಸಿ ಗಿರೀಶ್ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ಗ್ರಾಮದ ದೇವಸ್ಥಾನ ಹಾಗೂ ಶಾಲಾ ಆವರಣದಲ್ಲಿ ಸ್ವಚ್ಛತೆ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಪಿಡಿಒ ಮಂಜುನಾಥ್ ಮಾತನಾಡಿ, ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಮುಂದಿನ ದಿನದಲ್ಲಿ ಪ್ರತಿ ಶನಿವಾರ ಸ್ವಚ್ಛ ದಿನವನ್ನಾಗಿ ಆಚರಿಸಿ ಪ್ರತಿ ಬೀದಿಗಳನ್ನು ಸ್ವಚ್ಛ ಮಾಡಲಾಗುವುದೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಪಾಂಡು, ದೀಪು ದೇವರಾಜ್, ಚಾಲಕ ಪುರುಷೋತ್ತಮ, ಪೌರಕಾರ್ಮಿಕರಾದ ಮುರುಗೇಶ್, ಸುಬ್ರಮಣ್ಯ ಹಾಗೂ ಇತರರು ಹಾಜರಿದ್ದರು.

ವಚನಸಾಹಿತ್ಯ ರಸಪ್ರಶ್ನೆ: ಮಹದೇವ ಕುಂಬಾರಗೆ ಬಹುಮಾನ



ಮೈಸೂರು, ಡಿ. 2– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 78ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಬೆಳಗಾವಿ ಜಿಲ್ಲೆ ಹುಕ್ಕೇರಿಯ ನಿವೃತ್ತ ಮುಖ್ಯಶಿಕ್ಷಕ ಮಹದೇವ ಕುಂಬಾರ, ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಮ್ಮ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.



ಬನ್ನೂರಿನ ಸಮೀಪದ ಯಡಹಳ್ಳಿ ಗ್ರಾಮದಲ್ಲಿ ನಡೆದ ಸಿದ್ದೇಶ್ವರ ಸ್ವಾಮಿ ಸಮುದಾಯ ಭವನದ ಕಾರ್ಯಕ್ರಮದಲ್ಲಿ ಸಮಾಜಸೇವಕ ಮತ್ತು ಗ್ರಾಮ ಪಂಚಾಯಿತಿ ಸದಸ್ಯರಾದ ವೈ.ಎಸ್.ರಾಮಸ್ವಾಮಿ ಅವರನ್ನು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಸನ್ಮಾನಿಸಿದರು. ಸೋಮೇಶ್ವರನಾಥ ಸ್ವಾಮಿಜಿ, ಗೌರಿಶಂಕರ ಸ್ವಾಮಿಜಿ, ಷಡಕ್ಷರ ದೇಶೀಕೇಂದ್ರ ಸ್ವಾಮಿಜಿ, ಮಲ್ಲಿಕಾರ್ಜುನ ಸ್ವಾಮಿಜಿ, ಮಾಜಿ ಶಾಸಕ ಎಸ್.ಕೃಷ್ಣಪ್ಪ, ಬಿ.ಸಿ.ಸಿದ್ದೇಗೌಡ, ದೇವರಾಜು, ಬೋರಯ್ಯ, ಸಿದ್ದೇಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಜಿಲ್ಲಾಮಟ್ಟದ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಬಿಬಿ ಆಮೀನಾ



ತಿ. ನರಸೀಪುರ ಡಿ 2–ಇಲ್ಲಿಗೆ ಸಮೀಪದ ಸೆಂಟ್ ನೋಬರ್ಟ್ ಶಾಲೆಯ ಬಿಬಿ ಅಮೀನಾ ವಿಜ್ಞಾನ ಮತ್ತು ಗಣಿತ ವಿಷಯದ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಚೈತನ್ಯ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆಸಲಾದ ಜಿಲ್ಲಾ ಮಟ್ಟದ ವಿಜ್ಞಾನ ಮತ್ತು ಗಣಿತ ವಿಷಯದ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಂತ ನೋಬರ್ಟ್ ಶಾಲೆಯ ವಿದ್ಯಾರ್ಥಿನಿ ತಾಲೂಕಿನ ಗರ್ಗೇಶ್ವರಿ ಗ್ರಾಮದ ಬಿಬಿ ಆಮೀನಾ ಅವರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ. ಇದಕ್ಕಾಗಿ ವಿದ್ಯಾರ್ಥಿನಿಯನ್ನು ಶಾಲೆಯ ವ್ಯವಸ್ಥಾಪಕರಾದ ಫಾದರ್ ಬಿನ್ನಿ ಥಾಮಸ್ ಹಾಗೂ ಪ್ರಾಂಶುಪಾಲರಾದ ಸಿಸ್ಟರ್ ಸುಮಿ ರೋಸಾರವರು ಅಭಿನಂದಿಸಿದ್ದಾರೆ.

'ಕನ್ನಡ ವಿಕಾಸ ರತ್ನ', ಆದರ್ಶ ಪುರುಷ ರತ್ನ' ಪ್ರಶಸ್ತಿ ಪ್ರದಾನ



ಮೈಸೂರಿನ ಕಲಾಮಂದಿರದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ನಡೆದ ಕನ್ನಡ ಹಬ್ಬ ಕಾರ್ಯಕ್ರಮದಲ್ಲಿ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್‌ರಿಗೆ ರಾಜ್ಯ ಮಟ್ಟದ 'ಕನ್ನಡ ವಿಕಾಸ ರತ್ನ' ಹಾಗೂ 'ಆದರ್ಶ ಪುರುಷ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಂ.ಗೂಡು ಕಾಲೇಜಿನಲ್ಲಿ ಶೌಚಾಲಯ, ಕೊಠಡಿಗೆ ಗುದ್ದಲಿಪೂಜೆ



ನಂಜನಗೂಡು, ಡಿ.2– ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 85 ಲಕ್ಷ ರೂ. ವೆಚ್ಚದಲ್ಲಿ 3 ಕೊಠಡಿ ಮತ್ತು ಹೈಟೆಕ್ ಶೌಚಾಲಯ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಶನಿವಾರ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ವ್ಯವಸ್ಥಿತವಾದ ಶೌಚಾಲಯವಿಲ್ಲದೆ ತೊಂದರೆಯುಂಟಾಗಿತ್ತು. ಆದ್ದರಿಂದ ಉನ್ನತ ಶಿಕ್ಷಣ ಇಲಾಖೆಯ ಅನುದಾನದಡಿಯಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆಯನ್ನು ನೆರವೇರಿಸಲಾಗಿದೆ. ಸುಮಾರು 85 ಲಕ್ಷ ವೆಚ್ಚದಲ್ಲಿ ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕವಾಗಿ 7 ಹೈಟೆಕ್ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಜೊತೆಗೆ 3 ತರಗತಿ ಕೊಠಡಿಗಳನ್ನು ನಿರ್ಮಿಸಲಾಗುವುದು. ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡು ಶೀಘ್ರದಲ್ಲಿ ಮುಕ್ತಾಯಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದರು.

ಕಾಲೇಜಿನಲ್ಲಿ ಆಟದ ಮೈದಾನ ನಿರ್ಮಾಣ, ಕಾಂಪೌಂಡ್ ನಿರ್ಮಾಣ ಮಾಡಿಕೊಡುವಂತೆ ಪ್ರಾಂಶುಪಾಲರು ಮನವಿ ಮಾಡಿದ್ದಾರೆ. ಉನ್ನತ ಶಿಕ್ಷಣ ಸಚಿವರ ಮನವೊಲಿಸಿ ಶೀಘ್ರದಲ್ಲೇ ಅನುದಾನ ಬಿಡುಗಡೆಗೊಳಿಸಿ ಆಟದ ಮೈದಾನ ಮತ್ತು ಕಾಂಪೌಂಡ್ ನಿರ್ಮಾಣ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ನಗರಸಭಾ ಸದಸ್ಯರಾದ ಎಸ್.ಪಿ.ಮಹೇಶ್, ಗಂಗಾಧರ್, ಪ್ರದೀಪ್, ಗಾಯತ್ರಿ, ಶ್ರೀಕಂಠಸ್ವಾಮಿ, ಖಾಲಿದ್ ಅಹಮದ್, ಮುಖಂಡರಾದ ದೊರೆಸ್ವಾಮಿ ನಾಯಕ, ಶಶಿರೇಖಾ, ಶಿವಪ್ಪ ದೇವರು, ದೇಬೂರು ಪರಶಿವಮೂರ್ತಿ, ಕಳಲೆ ರಾಜೇಶ್, ಕಾಲೇಜಿನ ಪ್ರಾಂಶುಪಾಲರಾದ ರೇಣುಕಾಬಾಯಿ, ಪ್ರಾಧ್ಯಾಪಕರಾದ ಜಗದೀಶ್, ಪ್ರಕಾಶ್, ಹರೀಶ್, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಬಿಳಿಗೆರೆ ಸಣ್ಣಮ್ಮ ನಿಧನ



ಸುತ್ತೂರು: ನಂಜನಗೂಡು ತಾಲೂಕು ಬಿಳಿಗೆರೆ ಗ್ರಾಮದ ಸಣ್ಣಮ್ಮ (77)ನವರು ಇಂದು ನಿಧನರಾದರು. ಮೃತರು ಪುತ್ರ ಜಿಲ್ಲಾ ರೈತ ಸಂಘದ ಮುಖಂಡ, ಬಿಳಿಗೆರೆ ಗುರುಲಿಂಗೇಗೌಡ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು.

ನಾಗರಿಕ ಸಮಸ್ಯೆಗಳ ನಿವಾರಿಸುವತ್ತ ಮಕ್ಕಳ ಚಿತ್ತ

ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡಲು ನೈಪುಣ್ಯ ವಿದ್ಯಾರ್ಥಿಗಳು ಸಜ್ಜು



ಮೈಸೂರು,ಡಿ.2(ಪಿಎಂ)– ನಾಗರಿಕ ಸಮಸ್ಯೆಗಳ ನಿವಾರಿಸುವತ್ತ ಶಾಲಾ ಮಕ್ಕಳು ಚಿತ್ತ ಹರಿಸಿದ್ದಾರೆ! ಹೌದು, ನಗರದ ಅನೈರ್ಮಲ್ಯ ತಾಣಗಳು, ಫುಟ್‌ಪಾತ್ ಅತಿಕ್ರಮಣ, ಅಪಾಯಕಾರಿ ವಿದ್ಯುತ್ ತಂತಿಗಳು ಸೇರಿದಂತೆ ಹತ್ತು ಹಲವು ಸಮಸ್ಯೆಗಳನ್ನು ಖುದ್ದು ಸ್ಥಳಕ್ಕೆ ಭೇಟಿ ನೀಡಿ, ಪಟ್ಟಿ ಮಾಡಿರುವ ವಿದ್ಯಾರ್ಥಿಗಳು, ಇದೀಗ ಸ್ಥಳೀಯ ಆಡಳಿತದೊಂದಿಗೆ ಸಂಬಂಧಿಸಿದ ಇಲಾಖೆಗಳಿಗೆ ದೂರು ಸಲ್ಲಿಸಲು ಸಜ್ಜಾಗಿದ್ದಾರೆ.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲಾ ಮಕ್ಕಳು ಇಂತಹ ವಿನೂತನ ಕಾರ್ಯ ಕೈಗೆತ್ತಿಕೊಳ್ಳುವ ಮೂಲಕ ಈಗಲೇ ತಮ್ಮ ನಾಗರಿಕ ಪ್ರಜ್ಞೆ ಬೆಳೆಸಿಕೊಳ್ಳಲು ಮುಂದಾಗಿದ್ದಾರೆ. ಜಾಗೃತ ಮತ್ತು ಜವಾಬ್ದಾರಿಯುತ ನಾಗರಿಕರ ಕರ್ತವ್ಯಗಳನ್ನು ಅರಿತು ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಲು ಶಾಲೆಯು ಮಕ್ಕಳಿಗೆ ಇಂತಹ ವೇದಿಕೆ ಒದಗಿಸಿದೆ.

'ನಾಗರಿಕ ಅರಿವು ಮತ್ತು ಜಾಗೃತಿ' ಶೀರ್ಷಿಕೆಯಡಿ ಇಂದು ನಡೆದ ಕಾರ್ಯಕ್ರಮದಲ್ಲಿ ಮೈಸೂರು ನಗರದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದ ವಿದ್ಯಾರ್ಥಿಗಳು, ರಸ್ತೆಯ ಹಳ್ಳಕೊಳ್ಳಗಳು, ತ್ಯಾಜ್ಯ ನಿರ್ವಹಣೆಯ ಲೋಪದೋಷಗಳು, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಯ ಕೊರತೆ, ನೋ ಪಾರ್ಕಿಂಗ್‌ನಲ್ಲಿ ವಾಹನ ನಿಲುಗಡೆ ಮೊದಲಾದ ನ್ಯೂನತೆಗಳನ್ನು ಪಟ್ಟಿ ಮಾಡಿದರು.

ಅಲ್ಲದೆ, ಛಾಯಾಚಿತ್ರಗಳನ್ನು ತಮ್ಮ ಕ್ಯಾಮರಾಗಳಲ್ಲಿ ಸೆರೆಹಿಡಿಯುವ ಮೂಲಕ ಸಂಬಂಧಿಸಿದ ಇಲಾಖೆಗಳಿಗೆ ಸ್ವತಃ ದೂರು ಸಲ್ಲಿಸಲು ಶಿಕ್ಷಕರ ಮಾರ್ಗದರ್ಶನ ಪಡೆದರು. ಸದರಿ ದೂರುಗಳ ಕುರಿತು ಸಂಬಂಧಿಸಿದ ಇಲಾಖೆಗಳು ತೆಗೆದುಕೊಳ್ಳುವ ಕ್ರಮಗಳ ಸಹಿತ ಶೀಘ್ರದಲ್ಲೇ ಶಾಲಾ ಆವರಣದಲ್ಲಿ 'ಪೌರಪ್ರಜ್ಞೆ, ನನ್ನ ಕರ್ತವ್ಯ–ಪ್ರಶ್ನಿಸುವುದು ನನ್ನ ಹಕ್ಕು' ಶೀರ್ಷಿಕೆಯಡಿ ಕಾರ್ಯಕ್ರಮ ರೂಪಿಸಲು ಶಾಲೆಯ ನಾಗರಿಕ ಜಾಗೃತಿ ಅಭಿಯಾನದ ಸಂಚಾಲಕರಾದ (ಶಿಕ್ಷಕಿಯರು) ಎಸ್.ಪೂಜಶ್ರೀ, ಹೆಚ್.ಎಂ.ಭಾರ್ಗವಿ ಸಿದ್ಧತೆ ನಡೆಸಿದ್ದಾರೆ. ಇಂದಿನ ಕಾರ್ಯ ಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ ಎಸ್.ಮಂಜುಳಾ, ಎಲಿಜಬೆತ್, ದೇಚಮ್ಮ, ವರ್ಷಾ, ಅರ್ಚನಾ, ರಕ್ಷಿತಾ, ಶುಭವತಿ ಭಾಗವಹಿಸಿ ಮಕ್ಕಳಿಗೆ ನೆರವಾದರು.

ಸ್ಪಾ ಮೇಲೆ ದಾಳಿ: ಮಹಿಳೆ ಬಂಧನ

ಇಬ್ಬರು ಯುವತಿಯರ ರಕ್ಷಣೆ

ಮೈಸೂರು, ಡಿ.2(ಎಂಕೆ)– ಸ್ಪಾ ಮೇಲೆ ದಾಳಿ ನಡೆಸಿರುವ ನಜರ್‌ಬಾದ್ ಠಾಣೆ ಪೊಲೀಸರು ಇಬ್ಬರು ಯುವತಿಯರನ್ನು ರಕ್ಷಿಸಿ, ಮಹಿಳೆಯೊಬ್ಬರನ್ನು ಬಂಧಿಸಿದ್ದಾರೆ.

ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ (ಸಬರ್‌ಬನ್)ದ ಮುಂಭಾಗದಲ್ಲಿರುವ ಕಾಂಪ್ಲೆಕ್ಸ್ ಒಂದರಲ್ಲಿ ಶಾಸ್ತ್ರಿ ಪ್ಯಾರಡೈಸ್ ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ನಡೆಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿರುವ ನಜರ್‌ಬಾದ್ ಠಾಣೆ ಪೊಲೀಸರು, ಇಬ್ಬರು ಯುವತಿಯರನ್ನು ರಕ್ಷಣೆ ಮಾಡಿದ್ದಾರೆ. ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ನಡೆಸಿದ್ದ ಮಹಿಳೆಯನ್ನು ಬಂಧಿಸಿ, ಪ್ರಕರಣ ದಾಖಲಿಸಲಾಗಿದೆ ಎಂದು ನಜರ್‌ಬಾದ್ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸಾರ್ವಜನಿಕರ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ ಪ್ರಕಾಶ ರಾಜೇ ಅರಸ್ ಎ.ಎಸ್. ರವರ ಪುತ್ರಿ ಕುಮಾರಿ. ಮೇಘನ ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಹೆಚ್.ಪಿ.ಒ & ಆರ್.ಎಂ.ಎಸ್. ಸಾತಗಳ್ಳಿ ಬಡಾವಣೆಯಲ್ಲಿರುವ ಖಾಲಿ ನಿವೇಶನ ಸಂಖ್ಯೆ. 211, ಹಾಲಿ ಮೈಸೂರು ಮಹಾನಗರ ಪಾಲಿಕೆ ಪಿಐಡಿ ನಂ. 163562 & ವಾರ್ಡ್ ನಂ. 35, ರ ವ್ಯಾಪ್ತಿಯಲ್ಲಿರುವ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 9.00 ಮೀಟರ್‌ಗಳು ಮತ್ತು ಉತ್ತರ ದಕ್ಷಿಣ 12.00 ಮೀಟರ್‌ಗಳುಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ.210, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ. 212, ಉತ್ತರಕ್ಕೆ: ನಿವೇಶನ ಸಂಖ್ಯೆ. 224 ಮತ್ತು ದಕ್ಷಿಣಕ್ಕೆ: ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು–570001. ಮೊ: 9844640641
email: sldlawfirm2021@gmail.com

ಸಾರ್ವಜನಿಕರ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಎಂ.ಎಲ್. ರಾಧ ರವರ ಮಗಳು ಮತ್ತು ಶ್ರೀ. ವಿಜಯ ಕುಮಾರ್ ಎಂ.ವಿ. ರವರ ಧರ್ಮಪತ್ನಿ ಶ್ರೀಮತಿ ಶೀತಲ್ ಎಂ.ಸಿ. ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ದೇವರಾಜ ಮೊಹಲ್ಲಾ, ಗೋಕುಲಂ 3ನೇ ಹಂತದಲ್ಲಿರುವ ಸ್ವತ್ತಿನ ಸಂಖ್ಯೆ. ಎಲ್.ಐ.ಜಿ.–17ರ ವಿಸ್ತೀರ್ಣ ಪೂರ್ವ ಪಶ್ಚಿಮ 15.24 ಮೀಟರ್‌ಗಳು ಮತ್ತು ಉತ್ತರ ದಕ್ಷಿಣ 9.14 ಮೀಟರ್‌ಗಳು, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಸ್ವತ್ತಿನ ಸಂಖ್ಯೆ. 36–3–549–265ಎ, ಹಳೇ ಸಂಖ್ಯೆ. ಎಲ್‌ಐಜಿ –17, ಪಿಐಡಿ ನಂ. 56074 & ವಾರ್ಡ್ ನಂ. 6, ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಎಲ್‌ಐಜಿ–13ನೇ ನಂಬರ್ ಸ್ವತ್ತು, ಉತ್ತರಕ್ಕೆ: ಎಲ್‌ಐಜಿ–18ನೇ ನಂಬರ್ ಸ್ವತ್ತು ಮತ್ತು ದಕ್ಷಿಣಕ್ಕೆ : ಎಲ್‌ಐಜಿ–16ನೇ ನಂಬರ್ ಸ್ವತ್ತು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು–570001. ಮೊ: 9844640641
email: sldlawfirm2021@gmail.com

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ.ಮೈ.ನ.ಪ್ರಾ/ವಕ–4/2022–23
ದಿನಾಂಕ: 26–10–2023

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ನಗರದ, ಮನೆ ನಂ.20. "ಗೋದಾವರಿ" ನಿಲಯ, ಕಠಿ ನಾಗರಾಜ್ ಛತ್ರದ ಹಿಂಭಾಗ, ಹುಣಸೂರು ರಸ್ತೆ, ಹಿನಕಲ್, ಮೈಸೂರು ನಲ್ಲಿ ವಾಸವಿರುವ ಲೇಟ್ ಸಿ.ಟಿ. ವೆಂಕಟಾಚಾರ್ ರವರ ಮಗನಾದ ಶ್ರೀ. ಶ್ರೀರಂಗ ಕೃಷ್ಣಮಾಚಾರ್ ರವರಿಗೆ ದಿನಾಂಕ: 18.06.2012 ರಂದು "ಹೆಚ್" ಪ್ರವರ್ಗದಡಿಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರೀನಗರ ಬಡಾವಣೆಯ ನಿವೇಶನ ಸಂಖ್ಯೆ.1964, ಅಳತೆ 9•12 ಮೀ. ನಿವೇಶನ ಮಂಜೂರಾಗಿದ್ದು, ದಿನಾಂಕ: 10.06.2013 ರಂದು ಸ್ವಾಧೀನ ಪತ್ರ ನೀಡಲಾಗಿರುತ್ತದೆ.

ಮಂಜೂರಾತಿದಾರರಾದ ಶ್ರೀ. ಶ್ರೀರಂಗ ಕೃಷ್ಣಮಾಚಾರ್ ರವರು ದಿನಾಂಕ: 21.11.2022 ರಂದು ಮೃತರಾಗಿದ್ದು, ದಿನಾಂಕ: 29.10.2018 ರ ನೋಂದಾಯಿತ ವಿಲ್ ಸಂತೆ ಇವರ ಮಗಳಾದ ಶ್ರೀಮತಿ. ಸಿ.ಎಸ್.ಪದ್ಮಜ ರವರು ಪೌತಿವರ್ಗಾವಣೆ ಕೋರಿರುತ್ತಾರೆ.

ಪ್ರಸ್ತುತ, ಮೇಲ್ಕಂಡ ನಿವೇಶನವು ಮನೆ ನಂ.20, 7ನೇ ಕ್ರಾಸ್, ಶ್ರೀ ಸುಬ್ರಮಣ್ಯನಗರ ಹುಣಸೂರು ಮುಖ್ಯ ರಸ್ತೆ, ವಿಜಯನಗರ (ಪೋಸ್ಟ್) ಮೈಸೂರು. ರಲ್ಲಿ ವಾಸಿಸುವ ಮೇಲ್ಕಂಡ ನಿವೇಶನದ ವಾರಸುದಾರರಾದ ಶ್ರೀಮತಿ ಸಿ.ಎಸ್.ಪದ್ಮಜ ರವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಲಾಲ್ ಬಹದ್ದೂರ್ ಶಾಸ್ತ್ರೀನಗರ ಬಡಾವಣೆಯ ನಿವೇಶನ ಸಂಖ್ಯೆ.1964, ಅನ್ನು ಅವರ ಹೆಸರಿಗೆ ಪೌತಿವರ್ಗಾವಣೆ ನೀಡುವಂತೆ ಕೋರಿರುವುದರಿಂದ, ಅರ್ಜಿದಾರರ ಮನವಿಯಂತೆ ಸ್ವತ್ತಿನ ವರ್ಗಾವಣೆ ನೀಡುವ ಸಂಬಂಧ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಹಿತಾಸಕ್ತಿದಾರರಿಂದ ಅಥವಾ ಇತರೆ ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 10 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ವಿಶೇಷ ತಹಸೀಲ್ದಾರ್
ವಲಯ ಕಚೇರಿ–4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

ಟೆಂಡರ್ ಅವಧಿ ವಿಸ್ತರಣೆ

ಈ ಕಛೇರಿ ಟೆಂಡರ್ ಪ್ರಕಟಣೆ ಸಂ. 13/2023–24 ದಿ: 22.11.2023 ರಲ್ಲಿ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಕರೆಯಲಾದ ಕ್ರ.ಸಂ.3, 4 ಮತ್ತು 9 ರ ಕಾಮಗಾರಿಗಳನ್ನು ದಿ: 01.12.2023 ರಿಂದ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 11.12.2023 (16.00 ಗಂಟೆಯವರೆಗೆ) ಎಂದು ನಿಗದಿಪಡಿಸಲಾಗಿದೆ.

DIPR/DDMYS/KSMCA/712/2023-24 ಸಹಿ/– ಕಾರ್ಯಪಾಲಕ ಇಂಜಿನಿಯರ್

ಸಾರ್ವಜನಿಕರ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು, ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರಾದ, ಮೈಸೂರು – 570017, ವಿಜಯನಗರ, 1ನೇ ಹಂತ, ನಂಬರ್ 1023 ರಲ್ಲಿ ಹಾಗೂ ಮೈಸೂರು – 570002, ವಿವಿ ಮೊಹಲ್ಲಾ, ಕಾಳಿದಾಸ ರಸ್ತೆ, 3–ಎ ಬ್ಲಾಕ್, 13ನೇ ಕ್ರಾಸ್, ನಂಬರ್ 49/124 ರಲ್ಲಿ ವಾಸವಾಗಿರುವ ಶ್ರೀ. ಮೂರ್ತಿ ಬಿ.ಎಸ್. ರವರ ಮಗನಾದ ಶ್ರೀ ಅರುಣ್ ಅಲಿಯಾಸ್ ಅರುಣ್‌ಗೌಡ ರವರ ಜೊತೆ ಜಂಟಿ ಅಭಿವೃದ್ಧಿ ಕರಾರು ಮಾಡಿಕೊಳ್ಳಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳ ಮುಂದಿನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂಬರ್ 1:
ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡದೇವನ ಕೋಟೆಯ ಸರ್ವೆ ನಂಬರ್ 82/3 (ಹಳೆ ನಂಬರ್ 82/ಪಿ) ರ ವಿಸ್ತೀರ್ಣ 10 ಎಕರೆ ಹಾಗೂ ಇದರ ಚೌತರ್ಪು: ಪೂರ್ವಕ್ಕೆ: ಹುಣಸೂರು – ಬೇಗೂರು ಮುಖ್ಯ ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್ 82/2 ; ಉತ್ತರಕ್ಕೆ: ಸರ್ವೆ ನಂಬರ್ 81 ಮತ್ತು 83 ; ದಕ್ಷಿಣಕ್ಕೆ: ಸರ್ವೆ ನಂಬರ್ 82.

ಐಟಂ ನಂಬರ್ 2:
ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡದೇವನ ಕೋಟೆಯ ಸರ್ವೆ ನಂಬರ್ 82/4 ರ ವಿಸ್ತೀರ್ಣ 05 ಎಕರೆ ಹಾಗೂ ಇದರ ಚೌತರ್ಪು: ಪೂರ್ವಕ್ಕೆ: ಹುಣಸೂರು – ಬೇಗೂರು ಮುಖ್ಯ ರಸ್ತೆ ; ಪಶ್ಚಿಮಕ್ಕೆ: ಸರ್ವೆ ನಂಬರ್ 82/2 ; ಉತ್ತರಕ್ಕೆ: ಸರ್ವೆ ನಂಬರ್ 82/3, 79, 81 ಮತ್ತು 83 ; ದಕ್ಷಿಣಕ್ಕೆ: ಸರ್ವೆ ನಂಬರ್ 82/2 ರ ಉಳಿಕೆ ಸ್ವತ್ತು.

Sd/- Nagendra Prasad D.G.
India Law Practice, ILP, Advocates and Attorneys,
No. 663, 1st Floor, 17th Main,
Near Poornima Hospital, Saraswathipuram,
Mysuru City-570009. Ph: 0821- 4241296/ 4262520
e-mail: nagendra@ilplaw.co.in
ದಿನಾಂಕ: 01–12–2023, ಸ್ಥಳ: ಮೈಸೂರು

ಸಾರ್ವಜನಿಕರ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು, ಷೆಡ್ಯೂಲ್ ಸ್ವತ್ತುಗಳ ಹಾಲಿ ಮಾಲೀಕರುಗಳಾದ, (1) ಬೆಂಗಳೂರು – 560008, ಇಂದಿರಾನಗರ, 2ನೇ ಹಂತ, ಹೆಚ್‌ಎಎಲ್, 15ನೇ ಮೇನ್, ಎಸ್ ಆರ್ ವಿಸ್ಟಾ ಅಪಾರ್ಟ್‌ಮೆಂಟ್ಸ್, ನಂಬರ್ 403 ರಲ್ಲಿ ವಾಸವಾಗಿರುವ ಶ್ರೀ. ಬಿ.ಎಸ್. ಮೂರ್ತಿ ರವರ ಮಗನಾದ ಶ್ರೀ. ಬಿ.ಎಸ್. ಸುರೇಂದ್ರನಾಥ್, (2) ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ಟೌನ್, ಮುಸ್ಲಿಂ ಬ್ಲಾಕ್, ನಂಬರ್ 264 ರಲ್ಲಿ ವಾಸವಾಗಿರುವ ಶ್ರೀ. ಮೊಹಮ್ಮದ್ ಯೂಸುಫ್ ರವರ ಮಗನಾದ ಶ್ರೀ. ರಫೀಕ್, (3) ಮೈಸೂರು ಜಿಲ್ಲೆ – 571114, ಹೆಚ್.ಡಿ. ಕೋಟೆ (ಗ್ರಾಮೀಣ), ಮುಸ್ಲಿಂ ಬ್ಲಾಕ್, ನಂಬರ್ 74/2 ರಲ್ಲಿ ವಾಸವಾಗಿರುವ ಲೇಟ್. ಅಬ್ದುಲ್ ರಹೀಂ ಖಾನ್ ರವರ ಮಗನಾದ ಶ್ರೀ. ರೆಹಮತ್ ಅಲಿ ಖಾನ್ ಮತ್ತು (4) ಮೈಸೂರು ಜಿಲ್ಲೆ – 571114, ಹೆಚ್.ಡಿ. ಕೋಟೆ (ಗ್ರಾಮೀಣ), ಮುಸ್ಲಿಂ ಬ್ಲಾಕ್, ಶಿವಾಜಿ ರಸ್ತೆ, ನಂಬರ್ 126 ರಲ್ಲಿ ವಾಸವಾಗಿರುವ ಶ್ರೀ ಅಕ್ರಂ ರವರ ಮಗನಾದ ಶ್ರೀ. ತೌಸಿಫ್ ಖಾನ್ ರವರುಗಳ ಜೊತೆ ಜಂಟಿ ಅಭಿವೃದ್ಧಿ ಕರಾರು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ವ್ಯಕ್ತಿ/ ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಏಳು (7) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಬೇರೆ ಯಾರಿಗೂ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಮುಂದಿನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂಬರ್ 1:
ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡದೇವನಕೋಟೆಯ ಸರ್ವೆ ನಂಬರ್ 82/2 ರ ವಿಸ್ತೀರ್ಣ 05 ಎಕರೆ ಹಾಗೂ ಇದರ ಚೌತರ್ಪು: ಪೂರ್ವಕ್ಕೆ: ಸರ್ವೆ ನಂಬರ್ 82/4 ; ಪಶ್ಚಿಮಕ್ಕೆ: ಸರ್ವೆ ನಂಬರ್ 82/1 ; ಉತ್ತರಕ್ಕೆ: ಸರ್ವೆ ನಂಬರ್ 79 ; ದಕ್ಷಿಣಕ್ಕೆ: ಸರ್ವೆ ನಂಬರ್ 82/5.

ಐಟಂ ನಂಬರ್ 2:
ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡದೇವನಕೋಟೆಯ ಸರ್ವೆ ನಂಬರ್ 82/5 ರ ವಿಸ್ತೀರ್ಣ 10 ಎಕರೆ ಹಾಗೂ ಇದರ ಚೌತರ್ಪು: ಪೂರ್ವಕ್ಕೆ: ಸರ್ವೆ ನಂಬರ್ 82/4 ; ಪಶ್ಚಿಮಕ್ಕೆ: ಸರ್ವೆ ನಂಬರ್ 82/6 ; ಉತ್ತರಕ್ಕೆ: ಸರ್ವೆ ನಂಬರ್ 82/2 ; ದಕ್ಷಿಣಕ್ಕೆ: ಸರ್ವೆ ನಂಬರ್ 82/6.

ಐಟಂ ನಂಬರ್ 3:
ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಕಸಬಾ ಹೋಬಳಿ, ಹೆಗ್ಗಡದೇವನ ಕೋಟೆಯ ಸರ್ವೆ ನಂಬರ್ 82/6 ರ ವಿಸ್ತೀರ್ಣ 10 ಎಕರೆ ಹಾಗೂ ಇದರ ಚೌತರ್ಪು: ಪೂರ್ವಕ್ಕೆ: ಸರ್ವೆ ನಂಬರ್ 82/5 ಮತ್ತು ರಸ್ತೆ ; ಪಶ್ಚಿಮಕ್ಕೆ: ಕಟ್ಟೆಮನುಗನಹಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂಬರ್ 82/5 ; ದಕ್ಷಿಣಕ್ಕೆ: ಯರಹಳ್ಳಿ ಗಡಿ.

Sd/- Nagendra Prasad D.G.
India Law Practice, ILP, Advocates and Attorneys,
No. 663, 1st Floor, 17th Main,
Near Poornima Hospital, Saraswathipuram,
Mysuru City-570009. Ph: 0821- 4241296/ 4262520
e-mail: nagendra@ilplaw.co.in
ದಿನಾಂಕ: 01–12–2023, ಸ್ಥಳ: ಮೈಸೂರು